ಜನಪ್ರಿಯ
ಪುಸ್ತಕ ಮಾಲೆ

ಹಕ್ಕಿ ನೋಟ

ದ.ಬಾ. ಕುಲಕರ್ಣಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

ಹಕ್ಕಿನೋಟ

101

ದತ್ತಾತ್ರೇಯ ಬಾಳಕೃಷ್ಣ ಕುಲಕರ್ಣಿಯವರಿಗೆ (೧೯೧೬-೬೩) ದೊರೆತ ಔಪಚಾರಿಕ ಶಿಕ್ಷಣ ಕಡಿಮೆ, ಸ್ವಂತ ಅಧ್ಯಯನ ಮತ್ತು ಅನುಭವ ಸಮೃದ್ಧಿಯಿಂದ ಹೆಸರಾಂತ ಲೇಖಕರಾದರು. 'ಹಕ್ಕಿನೋಟ'ವಲ್ಲದೆ 'ಕಪ್ಪು ಹುಡುಗಿ' ಮತ್ತು 'ನಾಳಿನ ಕನಸು' ಕಥಾಸಂಗ್ರಹಗಳು, 'ಪರಿಹಾರ' ಕಾದಂಬರಿ, 'ಹಾಸುಹೊಕ್ಕು' ವ್ಯಕ್ತಿಚಿತ್ರ ಸಂಗ್ರಹ ಮತ್ತು 'ಬದುಕಿನ ಬಾಳು' ಸಂಗ್ರಹವನ್ನು ಬರೆದಿದ್ದಾರೆ.

ಜನಪ್ರಿಯ ಪುಸ್ತಕ ಮಾಲೆ

ಹಕ್ಕಿನೋಟ

ದ. ಬಾ. ಕುಲಕರ್ಣಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

HAKKI NOTA, a collection of verbal portaits, by Da. Baa. Kulkarni published by Kannada Pustaka Pradhikara (Kannada Book Authority), Pampa Mahakavi Road, Chamarajpet, Bangalore - 560 018 1994

Pages : xii + 94

ಬೆಲೆ : ರೂ. ೧೦-೦೦

ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಮುದ್ರಣ :

ರವೀಂದ್ರ ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ್, ಧಾರವಾಡ - ೫೮೦ ೦೦೧

ಮುನ್ನುಡಿ

ಮೊದಲನೆಯ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಒಂದು ಅತ್ಯಂತ ಉಪಯುಕ್ತವಾದ ಹೆಜ್ಜೆಯನ್ನಿಟ್ಟಿತು. ಒಂದು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಸುಲಭ ಬೆಲೆಗೆ ದೊರೆಯುವಂತೆ ಪ್ರಕಟಿಸಿತು.

ಈ ಘನವಾದ ಕಾರ್ಯವನ್ನು ಕರ್ನಾಟಕ ಸರ್ಕಾರವು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲಕ ಮುಂದುವರಿಸಿತು. "ಕನ್ನಡ ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಮೂಡಿಸುವ ಹಾಗೂ ಕನ್ನಡ ಪುಸ್ತಕಗಳನ್ನು ಎಲ್ಲರಿಗೂ ಸುಲಭ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವ ದೃಷ್ಟಿಯಿಂದ" ೧೯೮೯–೯೦ ರ ಸಾಲಿನಿಂದ 'ಜನಪ್ರಿಯ ಪುಸ್ತಕ ಮಾಲೆ'ಯ ಯೋಜನೆಯನ್ನು ಕಾರ್ಯಗತ ಮಾಡಿತು. ೧೯೯೩–೯೪ ರ ವರ್ಷದ ಹೊತ್ತಿಗೆ ಈ ಮಾಲೆಯಲ್ಲಿ ೭೮ ಪುಸ್ತಕಗಳು ಪ್ರಕಟವಾದವು.

ಕನ್ನಡ ಪುಸ್ತಕ ಪ್ರಾಧಿಕಾರವು 'ಜನಪ್ರಿಯ ಪುಸ್ತಕ ಮಾಲೆ'ಯ ಮೂಲ ಉದ್ದೇಶವನ್ನು ಕಣ್ಣ ಮುಂದಿರಿಸಿಕೊಂಡು ಮುಂದುವರಿಯುತ್ತಿದೆ. ಜನಪ್ರಿಯತೆಯನ್ನು ಗಳಿಸಿದ ಮೌಲಿಕವಾದ ಕೃತಿಗಳು ಹಲವು ಇಂದು ಓದ ಬಯಸುವವರಿಗೆ ಲಭ್ಯವಿಲ್ಲ. ಇಂತಹ ಕೃತಿಗಳನ್ನು ಆರಿಸಿ, ಒಂದು ಆವೃತ್ತಿಯ ಪ್ರಕಟಣೆಯ ಹಕ್ಕನ್ನು ಪಡೆಯಲು ಸಾಧ್ಯವಾದ ಸಂದರ್ಭದಲ್ಲಿ ಅದನ್ನು ಆದಷ್ಟು ಸುಲಭ ಬೆಲೆಗೆ ಓದುಗರಿಗೆ ಲಭ್ಯಮಾಡಿಕೊಡಲು ಕನ್ನಡ ಪುಸ್ತಕ ಪ್ರಾಧಿಕಾರವು ಉದ್ದೇಶಿಸಿದೆ.

ಈ ಮಾಲೆಯಲ್ಲಿ ಪುಸ್ತಕಗಳು ಅರಳಲು ನೆರವಾದವರು ನಾವು ಆರಿಸಿದ ಪುಸ್ತಕಗಳ ಕೃತಿಸ್ವಾಮ್ಯವನ್ನು ಪಡೆದಿದ್ದು ಅದನ್ನು ಈ ಮಾಲೆಯಲ್ಲಿ ಸೇರಿಸಲು ಒಪ್ಪಿದ ಮಿತ್ರರು. ಈ ಪುಸ್ತಕವನ್ನು ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು

ಒಪ್ಪಿಗೆಯನ್ನು ನೀಡಿದ ಶ್ರೀ ಎಂ. ಡಿ. ಕುಲಕರ್ಣಿ ಅವರಿಗೆ ನಾವು ಕೃತಜ್ಞರು. ಪುಸ್ತಕವನ್ನು ಅಂದವಾಗಿ ಸಕಾಲಕ್ಕೆ ಮುದ್ರಿಸಿಕೊಟ್ಟ ಮನೋಹರ ಮುದ್ರಣಾಲಯ ಅವರಿಗೂ ನಮ್ಮ ವಂದನೆಗಳು. ಈ ಮಾಲೆಯ ನಿರ್ವಹಣೆಯಲ್ಲಿ ನೆರವಾದ ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಿಗೂ ಜನಪ್ರಿಯ ಪುಸ್ತಕ ಮಾಲೆಯ ಉಪಸಮಿತಿಯ ಸದಸ್ಯರಿಗೂ ನಾನು ಕೃತಜ್ಞ.

ಸಹೃದಯ ಕನ್ನಡಿಗರು ಈ ಪುಸ್ತಕವನ್ನು ಸ್ವಾಗತಿಸುವರೆಂಬ ವಿಶ್ವಾಸ ನಮಗಿದೆ.

ಎಲ್. ಎಸ್. ಶೇಷಗಿರಿ ರಾವ್
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಮುನ್ನುಡಿ

ಬಹುಮುಖವಾಗಿ, ಹೇರಳವಾಗಿ ಬೆಳೆಯುತ್ತಿರುವ ಕನ್ನಡ ಸಾಹಿತ್ಯದಲ್ಲಿ ವ್ಯಕ್ತಿಚಿತ್ರ ಮಾತ್ರ ತುಸು ಕುಂಟುತ್ತ ನಡೆದ ಸಾಹಿತ್ಯಪ್ರಕಾರ. ಕನ್ನಡದಲ್ಲಿ ವ್ಯಕ್ತಿಚಿತ್ರಗಳನ್ನು ಮೂರೋ ನಾಲ್ಕೋ ಜನ ಮಾತ್ರ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅವರಲ್ಲಿ ಗೆಳೆಯ ದತ್ತಾತ್ರೇಯ ಕುಲಕರ್ಣಿ ಒಬ್ಬರು.

ವ್ಯಕ್ತಿಚಿತ್ರಗಳೆಂದರೆ ಜೀವನಚರಿತ್ರೆಗಳಲ್ಲ. ಜೀವನಚರಿತ್ರೆಯಲ್ಲಿ ಒಬ್ಬನ ಜೀವನದ ಘಟನೆಗಳಿಗೆ ಮತ್ತು ಅವುಗಳಿಂದ ಆದ ಪರಿಣಾಮಗಳಿಗೆ ಪ್ರಾಧಾನ್ಯವಿದ್ದರೆ ವ್ಯಕ್ತಿಚಿತ್ರವು ಅವನ ವ್ಯಕ್ತಿತ್ವದ ಕಡೆಗೆ ನೋಟವನ್ನು ಬೀರುತ್ತದೆ. ಜೀವನಚರಿತ್ರೆಯನ್ನು ಅದರ ನಾಯಕನಿಗೆ ಪರಿಚಿತನಲ್ಲದವನೂ—ಏಕೆ, ಅವನ ಕಾಲದಲ್ಲಿ ಇಲ್ಲದವನೂ—ಬರೆಯಬಹುದು. ವ್ಯಕ್ತಿಚಿತ್ರಕಾರನು ತನ್ನ ನೇರವಾದ ಅನುಭವಕ್ಕೆ ಬಂದದ್ದನ್ನೇ ಆಧರಿಸಿ ಬರೆಯುತ್ತಾನೆ. ತನ್ನ ನಾಯಕ ಎಂದು ಹುಟ್ಟಿದ, ಎಂದು ಯಾವ ಪರೀಕ್ಷೆ ಪಾಸಾದ, ಎಂದು ಮದುವೆಯಾದ— ಇತ್ಯಾದಿ ವಿವರಗಳು ಅವನನ್ನು ಹಿಡಿದು ನಿಲ್ಲಿಸುವುದಿಲ್ಲ. ನಾಯಕನೊಡನೆ ತನಗೆ ಬಂದ ಸಂಪರ್ಕದಿಂದ ತನ್ನ ಮನಸಿನಲ್ಲಿ ಮೂಡಿದ ಅವನ ಚಿತ್ರವನ್ನು ನಾಲ್ಕು ಮಾರ್ಮಿಕ ಮಾತುಗಳಿಂದ ಮಾರ್ಮೂಡಿಸಿಬಿಡುತ್ತಾನೆ.

ವ್ಯಕ್ತಿಚಿತ್ರಕಾರನ ಸಾಮಗ್ರಿ ಮುಖ್ಯವಾಗಿ ಆತನ ಸ್ವಂತ ಹೃದಯ. ಆದ್ದರಿಂದ ವ್ಯಕ್ತಿಚಿತ್ರದಲ್ಲಿ ಅದರ ನಾಯಕನ ಪಡಿಯಚ್ಚು ಮೂಡಿದಂತೆ ಬರೆದವನ ಸ್ವರೂಪವೂ ಪ್ರತಿಬಿಂಬಿತವಾಗುತ್ತದೆ.–ಕನ್ನಡಿಯ ಅಂಕುಡೊಂಕುಗಳು ಅದು ತೋರಿಸುವ ಪ್ರತಿಬಿಂಬದಲ್ಲಿಯೂ ಮೂಡುವ ಹಾಗೆ. ಹೀಗೆ ವ್ಯಕ್ತಿಚಿತ್ರದಲ್ಲಿ ನಾವು ಇಬ್ಬರು ವ್ಯಕ್ತಿಗಳ ಒಂದು ಸಮ್ಮಿಶ್ರ-ಧಾರೆಯನ್ನು ಕಾಣುತ್ತೇವೆ. ವ್ಯಕ್ತಿಚಿತ್ರ ಎಂದೂ ಫೋಟೋದ ಹಾಗೆ ವಸ್ತುನಿಷ್ಠ ಸತ್ಯವನ್ನು ಚಿತ್ರಿಸಲಾರದು. ಅದು ತೋರಿಸುವ ಪ್ರತಿಬಿಂಬ ವ್ಯಕ್ತಿತ್ವಯುಕ್ತವಾದುದು, ಆತ್ಮನಿಷ್ಠವಾದುದು. ಈ ಭಾವುಕತೆಯ ವರ್ಣರಂಜಿತತೆಯೇ ವ್ಯಕ್ತಿಚಿತ್ರದ ಸೊಬಗಿಗೆ ಆಧಾರ.

"ಹಕ್ಕಿನೋಟ"ದ ಹತ್ತೂ ಚಿತ್ರಗಳಲ್ಲಿ ಲೇಖಕನ ವ್ಯಕ್ತಿತ್ವದ ವರ್ಣವು ಆಯಾ ನಾಯಕನ ವ್ಯಕ್ತಿತ್ವದ ವರ್ಣದೊಡನೆ ಬೆರೆತುನಿಂತಿದೆ. ಎಲ್ಲ ಭಾವುಕ

ಬರಹಗಳ ಅಂತಿಮ ನಿಕಷ ಪ್ರಾಮಾಣಿಕತೆಯೇ ಆಗಿದೆ. ಕುಲಕರ್ಣಿಯವರ ಈ ಬರಹಗಳಲ್ಲಿ ಅವರ ಪ್ರಾಮಾಣಿಕತೆ ನಿಚ್ಚಳವಾಗಿ ಎದ್ದು ಕಾಣುತ್ತದೆ. ಎಲ್ಲೆಲ್ಲಿಯೂ ಅವರ ವಿನೋದದೃಷ್ಟಿಯೊಡನೆ ಸಹೃದಯತೆಯ ಪರಿಚಯವಾಗುತ್ತದೆ. ಆದ್ದರಿಂದಲೇ ಅವರು ತಮ್ಮ ನಾಯಕನನ್ನು ಕ್ಷ ಕಿರಣದ ಬೆಳಕಿಗೆ ಗುರಿಪಡಿಸಿದರೂ ಒಳಗೆ ಕಾಣಿಸುವ ಹುಳುಕುಗಳು ಸಹ್ಯವಾಗಿ ಮಾತ್ರವಲ್ಲ, ಅವಶ್ಯ ಭಾಗಗಳಾಗಿ ಕಾಣಿಸುತ್ತವೆ. ಆದ್ದರಿಂದಲೇ ಬೇಂದ್ರೆಯವರಿಗೆ 'ಮಾತು ಸಿಕ್ಕಿದರೆ ಮಾರು ಹೊಲ ಸಿಕ್ಕಂತೆ' ಎಂದು ಅವರು ಹೇಳುವಾಗ ಬೇಂದ್ರೆಯವರು ನಮಗೆ ಇನ್ನಷ್ಟು ಪ್ರಿಯರಾಗಿ ಕಾಣಿಸುತ್ತಾರೆಯೇ ಹೊರತು ಒಮ್ಮೆಲೇ ಮನುಷ್ಯನಾದ ದೇವತೆಯಂತೆ ಕಾಣಿಸುವುದಿಲ್ಲ. ಪುಟ್ಟಪ್ಪನವರು "ಕೌಪೀನಕೆ ಚಿಂದಿಯು ಸಿಗದಿಲ್ಲಿ" ಎಂದು ಸ್ತ್ರೀಯರ ಕಡೆ ಮುಖಮಾಡಿ ಹೇಳಿದರೆಂದು ಕುಲಕರ್ಣಿಯವರು ನಮಗೆ ತಿಳಿಹೇಳಿದಾಗ, ಗೊಮ್ಮಟನಂತೆ ಈ ಮೊದಲು ಅಜ್ಞೇಯರಾಗಿ ಕಾಣಿಸುತ್ತಿದ್ದ ಪುಟ್ಟಪ್ಪನವರ ಮೂರ್ತಿಯಲ್ಲಿ ಒಮ್ಮೆಲೇ ರಕ್ತ-ಮಾಂಸ ತುಂಬಿದಂತಾಗಿ ಅವರಲ್ಲಿ ಒಂದು ಆತ್ಮೀಯತೆ ಉದ್ಭವಿಸುತ್ತದೆ. ಇದನ್ನೋದುವಾಗ ನಮಗೆ ನಗೆ ಬರುತ್ತದೆ. ಆದರೆ ಆ ನಗೆ ನಮ್ಮ ಸ್ವಂತ ದೌರ್ಬಲ್ಯಗಳನ್ನು ಕಂಡು ನಕ್ಕಂತೆ ಹೃದ್ಯವಾಗಿರುತ್ತದಲ್ಲದೆ ಪರದೂಷಣೆಯಿಂದ ಬರುವ ತಾಮಸತೃಪ್ತಿಯನ್ನು ಕೊಡುವುದಿಲ್ಲ.

ಕಡಿಮೆ ಮಾತುಗಳಲ್ಲಿ ಹೆಚ್ಚು ಹೇಳುವ ಕಲೆ ಲೇಖಕರಿಗೆ ಸಾಧಿಸಿದೆ. "ಕಾರಂತರು ವ್ಯಾಪಾರಚತುರರೆನ್ನುವುದಕ್ಕಿಂತ ವ್ಯವಹಾರನಿಷ್ಠರೆನ್ನಬಹುದು" ಎಂಬ ಮಾತಿನಲ್ಲಿ ಅವರ ಸ್ವಭಾವದ ಮೇಲೆ ದೊಡ್ಡ ವ್ಯಾಖ್ಯಾನವು ಬೀರಲಾರದಷ್ಟು ಬೆಳಕು ಬೀಳುತ್ತದೆ. ಇಂಥ ವ್ಯವಹಾರ ನಿಷ್ಠರ ಕಾರಂತರೇ ಯಾರೋ ಬಡತನದಿಂದ ಮಕ್ಕಳನ್ನು ಮಾರುತ್ತಾರೆಂದು ಕೇಳಿ ಜೇಬಿಗೆ ಕೈಹಾಕಿ ದೊಡ್ಡ ನೋಟನ್ನು ತೆಗೆದುಕೊಡುತ್ತಾರೆಂದು ಕೇಳಿದಾಗ ಕಾರಂತರ ವಿರೋಧಾಭಾಸಿಕ ವ್ಯಕ್ತಿತ್ವದ ಪೂರ್ಣ ಪರಿಚಯ ನಮಗಾಗುತ್ತದೆ. ಮುಳಿಯ ತಿಮ್ಮಪ್ಪಯ್ಯನವರು "ನನ್ನನ್ನು ತಮ್ಮ ಮನೆಯಂಗಳದಿಂದ ಮನದಂಗಳಕ್ಕೆ ಕರೆದುಕೊಂಡ"ರೆಂದು ಹೇಳುವ ಮಾತಿನಲ್ಲಿ ಮುಳಿಯರವರ ಶೀಘ್ರ ಸಹೃದಯತೆ ಒಂದೇ ವಾಕ್ಯದಲ್ಲಿ ನಮಗೆ ಗೋಚರವಾಗುತ್ತದೆ.

ಈ ಪುಸ್ತಕದಲ್ಲಿ ಒಂದು ಬರಹ ಇನ್ನೊಂದರಂತಿಲ್ಲ. ಆದರೆ ಪ್ರತಿಯೊಂದರಲ್ಲಿಯೂ ಒಂದು ಮಾಂತ್ರಿಕ ಹಸ್ತ ಓಡಾಡುತ್ತಿದೆ. "ಪ್ರೊ. ಬಸವನಾಳರ ನೆನಪು"ನಲ್ಲಿ ೧೯೫೭ ರ ಧಾರವಾಡದ ಸಮ್ಮೇಳನದ ಸ್ವಾಗತಾಧ್ಯಕ್ಷರ ದನಿಯಲ್ಲಿ ದಿವಂಗತ ಪ್ರೊ. ಬಸವನಾಳರ ದನಿ ಆವಿಷ್ಟವಾಗಿತ್ತೆಂಬ ಮಾತು ಎಷ್ಟು ರಮ್ಯವಾಗಿದೆ! ಆ ನಾಲ್ಕು ಪ್ಯಾರಾಗಳು ಶುದ್ಧ ಕಾವ್ಯವೇ ಸ್ವೈಗತಿಸಿದ ಕನ್ನಡವೀರನಿಗೆ ಇದಕ್ಕಿಂತ ಸುಂದರವಾದ ಶ್ರದ್ಧಾಂಜಲಿ ಎಲ್ಲಿದ್ದೀತು? ಶ್ಯಾಮಲಾದೇವಿಯವರನ್ನು ಕುರಿತ ಲೇಖದಲ್ಲಿ ಹೂವೇ ಬಿಸಿಲಾಗಿರುವ ಸಂಭವದ ಉತ್ಪ್ರೇಕ್ಷೆಯೂ ಗದ್ಯದ ಕವಚ ಹೊದ್ದ ಕಾವ್ಯವೇ. ಪೋತದಾರ ಶ್ರೀನಿವಾಸರಾಯರನ್ನು ಕುರಿತ ಲೇಖ ಕನ್ನಡದ ಹಂಬಲದಲ್ಲೇ ಬಾಳಿದ ಅಜ್ಞಾತ ವ್ಯಕ್ತಿಯೊಬ್ಬನ ಜೀವನವನ್ನು ಚಿತ್ರಿಸಿ ಸಾಮಾನ್ಯ ಕನ್ನಡಿಗರೂ ಹೀಗೆ ತ್ಯಾಗಜೀವನ ಮಾಡಿದ್ದಾರೆಯೇ ಎನ್ನಿಸುತ್ತದೆ.

ಆದರೆ ಇಡೀ ಸಂಗ್ರಹದಲ್ಲಿ ಕೊನೆಯದಾದ "ನಾನು ಕಂಡ ಗೌರಮ್ಮ" ಒಂದು ನಾಯಕ ರತ್ನ. ಅದು ಲೇಖಕರ ಲೇಖನಿಯಿಂದ ಬಂದ ಮೊದಲನೇ ವ್ಯಕ್ತಿಚಿತ್ರ; ತೀರ ಯೌವನದಲ್ಲಿ ಬರೆದದ್ದು. ಆದರೆ ಅದರ ಮನೋಹರತೆಯನ್ನು ಸರಿಗಟ್ಟಲು ಲೇಖಕರಿಗೇ ಸಾಧ್ಯವಾಗಿಲ್ಲ. ಅದರಲ್ಲಿ ಲೇಖಕರ ಹೃದಯವೇ ಕರಗಿ ಹರಿದಿದೆ. ಕನ್ನಡದ ಗದ್ಯ ಸಾಹಿತ್ಯದಲ್ಲಿ ಅದನ್ನು ಮೀರಿಸುವ ಕೃತಿಗಳು ಹಲವಿಲ್ಲೆಂದು ಖಂಡಿತವಾಗಿ ಹೇಳಬಹುದು. ಕೀಟ್ಸ ಕವಿ ಸತ್ತಾಗ ಇಂಗ್ಲಿಷ್ ಸಾಹಿತ್ಯದ ಅತ್ಯುದಾತ್ತ ಚರಮಗೀತ ಶೆಲಿಯ ಲೇಖನಿಯಿಂದ ಬಂತಂತೆ. "ನಾ ಕಂಡ ಗೌರಮ್ಮ" ಅಂಥ ಇನ್ನೊಂದು ನಿದರ್ಶನ.

"ಹಕ್ಕಿನೋಟ" ಓದಿ ಮುಗಿಸಿದ ಮೇಲೆ ಇಂಥ ಎಷ್ಟು ವ್ಯಕ್ತಿಚಿತ್ರಗಳು ಬಂದರೂ ಸುಖವಾಗಿ ಓದಬಹುದೆನಿಸುತ್ತದೆ. ದತ್ತಾತ್ರೇಯ ಕುಲಕರಣಿಯವರು ಪುಸ್ತಕ ಹೊತ್ತು ಮಾರುವ ನೆವದಲ್ಲಿ ಕನ್ನಡ ಸಾಹಿತ್ಯ ಪ್ರಪಂಚದ ನೂರಾರು ಜನರ ಪರಿಚಯ ಮಾಡಿಕೊಂಡವರು. ಅವರಿಂದ ಕನ್ನಡನಾಡು ಇನ್ನೂ ಹಲವು ಸಾಹಿತಿಗಳ ವ್ಯಕ್ತಿಚಿತ್ರಗಳನ್ನಪೇಕ್ಷಿಸುತ್ತದೆ. ಅವರು ಈ ಆಸೆಯನ್ನು ಪೂರೈಸಲು ಶಕ್ತರಾಗುವರೆಂದು ಹಾರೈಸುತ್ತೇನೆ.

ಹುಬ್ಬಳ್ಳಿ
೩೧-೮-೫೭

—ಸಾಲಿಗಾರು ವೆಂಕಟರಮಣಾಚಾರ್ಯ

ನಿವೇದನ

"ಹಕ್ಕಿನೋಟ" ಹನ್ನೆರಡು ವರುಷಗಳ ಹಿಂದೆ ಮೊದಲಬಾರಿ ಪ್ರಕಟವಾಗಿತ್ತು. ಒಂದೆರಡು ವರುಷಗಳಲ್ಲಿಯೇ ಆ ಮುದ್ರಣದ ಪ್ರತಿಗಳೆಲ್ಲ ತೀರಿ ಹೋದವು. ನನ್ನ ಮೊದಲ ಬರಹ ಇಷ್ಟು ಜನಪ್ರಿಯುವಾದದ್ದು ನನ್ನ ಮುಂದಿನ ಕೃತಿಗಳ ರಚನೆಗೆ ಹಾದಿ ಮಾಡಿತೆನ್ನಬಹುದು.

"ಹಕ್ಕಿನೋಟ"ದ ಪ್ರತಿಗಳಿಗೆ ಈ ಹತ್ತುವರುಷಗಳಲ್ಲಿ ಬೇಡಿಕೆ ಇದ್ದೇ ಇದ್ದಿತಾದರೂ ಇನ್ನು ಕೆಲವು ನೋಟಗಳನ್ನು ಸೇರಿಸಬೇಕೆಂಬ ನೆಪದಿಂದ ಅದರ ಪುನರ್ಮುದ್ರಣ ಮುಂದೆ ಬೀಳುತ್ತಲೇ ಬಂದಿತ್ತು. ಆಗಾಗ ಬರೆದ ಬೇರೆ ನಾಲ್ಕು ನೋಟಗಳನ್ನು ಸೇರಿಸಿ, ಶ್ರೀ ಬೇಂದ್ರೆ, ಶ್ರೀ ಕಾರಂತರ ನೋಟಗಳನ್ನು ವಿಸ್ತರಿಸಿ ಬರೆದು ಮುದ್ರಣಕ್ಕೆ ಅಣಿಮಾಡಿಕೊಂಡೆ. ಅದೇ ಸಂದರ್ಭದಲ್ಲಿ ಧಾರವಾಡ ಜಿಲ್ಲಾ ಹೈಸ್ಕೂಲುಗಳ ಮುಖ್ಯಾಧ್ಯಾಪಕರ ಮಂಡಲದವರು ತಮ್ಮ ಶಾಲೆಗಳ ಎಂಟನೆಯ ತರಗತಿಯ ಕನ್ನಡ ಉಪಪಠ್ಯ ಪುಸ್ತಕವನ್ನಾಗಿ ಈ ಪುಸ್ತಕವನ್ನು ಒಪ್ಪಿ ನನ್ನನ್ನು ಗೌರವಿಸಿದ್ದಾರೆ. ಅದರಿಂದ ಪುನರ್ಮುದ್ರಣದ ಅವಸರಕ್ಕೆ ಬಲಬಂದಿದೆ. ಈ ಸದವಕಾಶವನ್ನೊದವಿಸಿದ ಮುಖ್ಯಾಧ್ಯಾಪಕರ ಮಂಡಲದ ಸದಸ್ಯರನ್ನು ನಾನು ಮನವಾರೆ ವಂದಿಸುತ್ತೇನೆ.

ಪ್ರಥಮ ಮುದ್ರಣದ 'ನೋಟ'ಗಳಿಗೆ ಮುನ್ನುಡಿ ನುಡಿದ ಗೆಳೆಯ ಪಾ. ವೆಂ. ಆಚಾರ್ಯರು ಈ ವಿಸ್ತೃತ ಆವೃತ್ತಿಗೂ ಬೇರೊಂದು ಮುನ್ನುಡಿಯನ್ನು ಬರೆದು ನೀಡಿದ್ದಾರೆ. ಲಲಿತ ಮುದ್ರಣಾಲಯದ ವ್ಯವಸ್ಥಾಪಕರು ಅತ್ಯಲ್ಪ ಅವಕಾಶದಲ್ಲಿ ಮುದ್ರಿಸಿಕೊಟ್ಟಿದ್ದಾರೆ. ಇವರಿಗೆ ನಾನು ಋಣಿ.

ಧಾರವಾಡ
೧-೯-೫೭

—ದ. ಬಾ. ಕುಲಕರಣಿ

ವಿವರ

೧. ಬೇಂದ್ರೆ

ಕಾವ್ಯಕ್ಕೆ ಇನ್ನೊಂದು ಹೆಸರು!

ಬೇಂದ್ರೆ !

ಕಾವ್ಯಕ್ಕೆ ಇನ್ನೊಂದು ಹೆಸರು—ಎಂಬಷ್ಟು ಬೇಂದ್ರೆಯವರಿಗೆ ಕವಿ ಪಟ್ಟವೂ ಕಾವ್ಯಕ್ಕೆ ಬೇಂದ್ರೆಯವರ ನಂಟೂ ಭದ್ರವಾಗಿ ಬಿಟ್ಟಿವೆ.

ಇದು ಜನತಾ ಯುಗವೆಂಬುದು ಬೇಂದ್ರೆಯವರ ಜನಪ್ರಿಯತೆಯಿಂದ ಕಂಡುಕೊಳ್ಳಬಹುದಾಗಿದೆ. ಮನೆಮನೆಗೆ, ಊರೂರಿಗೆ ಈ ಕವಿಯ, ಅವನ ಕಾವ್ಯದ ಆರಾಧನೆ ನಡೆದಿದೆ. ಪಂಡಿತ-ಪಾಮರರಿಂದ ಅಕ್ಷರಸ್ಥ-ನಿರಕ್ಷರಿ ಗಳಿಂದ, ಜಾಣ-ಧಡ್ಡರಿಂದ ಈ ಕವಿಯ ಕಾವ್ಯಕ್ಕೆ ಮನ್ನಣೆ ದೊರೆಯ ಬೇಕಾದರೆ ಈ ಕಾವ್ಯದ ಕವಿಯಲ್ಲಿ ಏನೋ ಮಾಂತ್ರಿಕತೆ ಇರಬೇಕು—ಎನಿ ಸುವುದಿಲ್ಲವೇ ? ಹೌದು; ಬೇಂದ್ರೆಯವರನ್ನು ಕಂಡು ಬಂದ, ಅವರೊಡನೆ ಮಾತಾಡಿ ಬಂದ, ಅವರನ್ನು ನೋಡಿದ ಯಾರಿಗೂ ಅನಾಕರ್ಷಕವಾದ, ಒಪ್ಪ-ಓರಣ ಕಾಣದ ಅವರ ವೇಷ-ಭೂಷಣದ ಹಿಂದಡಗಿದ,—ಕೇವಲ ಭಾವವೇದ್ಯವಾದ ಮಿಂಚು ಕಾಣದಿರುವುದಿಲ್ಲ. ಒಂದು ಮಾತು, ಒಂದು ನೋಟ, ಒಂದು ಕೈತಿರುವು. ಒಂದು ಕೊರಳಕೊಂಕು, ನಿಲುವಿನ ಆ ತಾದಾತ್ಮ್ಯಭಂಗಿ,—ಇದಾವುದೋ ಒಂದು,—ಇಲ್ಲವೆ, ಇದೆಲ್ಲಾ ಒಂದಾಗಿ ನಿಂದು ಮಾಂತ್ರಿಕನಿಗೊಲಿದ ಹಾವಿನಂತೆ ಜನ ತಮ್ಮನ್ನು ಮರೆತು, ಬೇಂದ್ರೆ ಯವರನ್ನು ಅರಿತೋ ಅರಿಯದೆಯೋ ಅವರ ಆಕರ್ಷಣೆಗೊಳಗಾಗುತ್ತಾರೆ.

ಅಧಿಕಾರದಿಂದ, ಶ್ರೀಮಂತಿಕೆಯಿಂದ, ಶಿಸ್ತಿನಿಂದ, ಒಪ್ಪ-ಓರಣದಿಂದ ಗಾಂಭೀರ್ಯದಿಂದ, ನಾಟಕೀಯತೆಯಿಂದ ಜನರ ಮೇಲೆ ಛಾಪುಹಾಕ ಬಹುದು. ಅಲ್ಲಿ ಛಾಪುಹಾಕುವ ಉದ್ದೇಶವೊಂದೇ ಇರುತ್ತದೆ. ಆದರೆ ಬೇಂದ್ರೆಯವರು ಇದಾವುದರ ಸೋಂಕಿಲ್ಲದೆ, ಅಂಥ ಯಾವ ಉದ್ದೇಶವೂ

ಇಲ್ಲದೆ ನಿರಪೇಕ್ಷಭಾವದಿಂದಲೂ ಅಪೇಕ್ಷಣೀಯವಾದ ಒಲವನ್ನು ಸಂದರ್ಶಕನಿಂದ ಪಡೆದುಬಿಡುತ್ತಾರೆ. ಇಂಥ ಪ್ರಭಾವ ಯಾವುದರಿಂದ ಇದ್ದೀತು ? ಅವರ ಬಹುಶ್ರುತತ್ವದಿಂದ ಇದ್ದೀತೆ ? ಹಾಗೆ ಎಲ್ಲವನ್ನೂ ಅರಿಯಲೆತ್ನಿಸುವ ಕೆಲವರು ಸಿಕ್ಕಬಹುದು... ಆದರೆ ಬೇಂದ್ರೆಯವರಿಗೆ ವಿಷಯ ಅರಿಯುವ ಬಯಕೆಯೊಡನೆ ಅದನ್ನು ತಟ್ಟನೆ ಗ್ರಹಿಸುವ ಚುರುಕಾದ ಬುದ್ಧಿಯೂ ಇದೆ. ಅವರ ಯಂತ್ನವಿರುವುದು "ತನ್ನ ತಾನರಿಯುವುದು". ತನ್ನಲ್ಲೇ ವಿಶ್ವರೂಪವನ್ನಿರಿಸಿಕೊಂಡ ಭಗವಂತ ಎಲ್ಲರಲ್ಲೂ ಅದನ್ನಿರಿಸಿದ್ದಾನು. ಆದರೆ ತನ್ನಲ್ಲೇ ಇರುವ ಪದಾರ್ಥವನ್ನು ಹಿಡಿದೆಳೆದು, ಬೇರೆ ಮಾಡಿ, ಎದುರು ಕೂಡಿಸಿಕೊಂಡು ಅದರ (ಅವನ) ಮೇಲೆ ಅರಿವಿನ ಬೆಳಕು ಚಲ್ಲಿ, ಅವನ ಅಜ್ಞಾನವನ್ನು ಕರಗಿಸಿ, ಮತ್ತೆ ಉಳಿದ ಜೀವಸತ್ವವನ್ನು ತನ್ನಲ್ಲಿ ಸಮಾವೇಶ ಗೊಳಿಸುವ ಈ ತನ್ನ ತಾನರಿವ ಗುರುಭಾವವನ್ನು ಬೇಂದ್ರೆ ಪಡೆದಿರಬಹುದೇ ? ಇರಬಹುದು. ಅವರು ತನ್ನನ್ನು ತಾನು ಗೆದ್ದುದು ಇದ್ದೀತು; ಇರಲಾರದು. ಅವರಿಗೆ ಜನ ಮನಸೋಲುವುದು ಮಾತ್ರ ಅವರಲ್ಲಿಯ ನಿತಾಂತವಾದ ಹೃದಯವಂತಿಕೆಯಿಂದ; ಅದರ ಶ್ರೀಮಂತಿಕೆಯಿಂದ. ಅಧಿಕಾರ, ಶಿಸ್ತು, ಗಾಂಭೀರ್ಯ, ಒಪ್ಪ-ಓರಣಗಳ ಯಾವ ನೆರವೂ ಬೇಕಾಗದ ಈ ಅಂತಃಕರಣ ದರ್ಶನದಿಂದ ಅವರು ತನ್ನನ್ನು ಎಲ್ಲರಲ್ಲೂ, ಎಲ್ಲದರಲ್ಲೂ ಕಾಣುತ್ತಾರೆ; ತನ್ನಲ್ಲಿ ಎಲ್ಲರನ್ನೂ ಎಲ್ಲವನ್ನೂ ಕಾಣುತ್ತಾರೆ. ಈ ತಾದಾತ್ಮ್ಯಭಾವ ಅವರ ಎಚ್ಚರದ ಉಪಾಸನೆಯಾಗಿ, ಮರೆವಿನ ಅರಿವಾಗಿ ಬಂದುದರಿಂದ ಅವರ ಸಾಮೀಪ್ಯ, ಅವರ ಸಾಹಿತ್ಯದ ಸಾಮೀಪ್ಯ ಇವೆರಡರಲ್ಲಿ ಯಾವುದಾದರೂ ಒಂದು ಸೋಂಕಿದವರಿಗೂ ಹಿಡಿದುಬಿಡುತ್ತದೆ — ಈ ತಾದಾತ್ಮ್ಯಭಾವ. ಅದರ ಉತ್ಕಟತೆ ಆರಿದಂತೆ ಬಿಟ್ಟುಬಿಡುತ್ತದೆ. ಆಗ ಅದು ಸುಂದರ ಸ್ವಪ್ನವಾಗಿ, ಚಿಕ್ಕೆಯ ಬೆಳಕಾಗಿ ವ್ಯಾಪಿಸಿ ಮೋದ ಛಾಯೆಯಾಗಿ, ಮಧುರಗೀತದ ಮೆಲ್ಲುಲಿಯಾಗಿ ಬಿಟ್ಟೂಬಿಡದೆ ಉಳಿಕೊಂಡಿರುತ್ತದೆ.

ಬಡತನದ ಬಗ್ಗೆ ಅವರು ತಮ್ಮ ೫೦ನೆಯ ಹುಟ್ಟುಹಬ್ಬದ ಉತ್ಸವದಲ್ಲಿ ಹೇಳಿದರು : "ದಾರಿದ್ರ್ಯದೇವತೆ ನನ್ನ ಬಾಗಿಲಿನ ಹೊರಗೆ ನಿಂತಿದ್ದಾಳೆ. ಆದರೆ ಹೊಸತಿಲಲ್ಲಿ ಕಾಲಿರಿಸಿಲ್ಲ. ನನ್ನ ರೊಟ್ಟಿಯ ಮೇಲೆ ತುಪ್ಪಬೀಳದೆ ನಾನು ಎಂದೂ ಊಟಮಾಡಿಲ್ಲ" ಎಂದು.

ಒಡತನ ಅವರ ಹೃದಯದ ಎತ್ತರ-ಬಿತ್ತರಗಳನ್ನು ತುಡುಕಲಾರದಿದೆ; ಶ್ರೀಮಂತಿಕೆ ಅವರ ಅರಿವಿನ ಬಾಗಿಲನ್ನು ಮುಚ್ಚದಿದೆ; ಲೌಕಿಕ ವ್ಯಾಮೋಹ ಅವರ ಮಾರ್ಗಕ್ರಮಣವನ್ನು ತಡೆಯಲಾರದಿದೆ; ಹಟ ಅವರನ್ನು ಅಹಂಕಾರ ಪಟ್ಟವನ್ನೇರಿಸದಿದೆ; ಬುದ್ಧಿವಂತಿಕೆ ಅವರನ್ನು ಪರಾಕ್ರಮಣಕ್ಕೆ ಪ್ರೇರಿಸದಿದೆ; ಹಾಸ್ಯ ಅವರ ಬಾಳನ್ನು-ಜನದ ಬಾಳನ್ನು ಬೆಳಗೀತಲ್ಲದೆ ಅಪಹಾಸ್ಯವಾಗಿಲ್ಲ; ಹುಡುಗಾಟ ಅವರ ಹಿರಿತನದ ಹೆದ್ದಾರಿಯಾಗಿದೆ. ಕೀರ್ತಿ ಅವರನ್ನು ಜನರಿಂದ ಬೇರ್ಪಡಿಸದಿದೆ. ಇವೆಲ್ಲ ಗುಣ ವಿಶೇಷಗಳು ಮಾನವನ ಬದುಕಿನಿಂದ ಬಂದವುಗಳು. ಇವು ಬದುಕಿನ ಶುಭಕ್ಕೆ ಪ್ರೇರಕಶಕ್ತಿಯಾಗಬೇಕಲ್ಲದೆ ಮಾರಕ ಪ್ರಲೋಭನೆಗಳಾಗಬಾರದು—ಎಂಬುದವರ ಸ್ವಭಾವವಾಗಿದೆ.

ಬೇಂದ್ರೆ ಧುರೀಣರಲ್ಲ; ಅವರು ಸಾಧಿಸಬೇಕಾದುದಕ್ಕೆ ಇನ್ನಿತರರ ಹಿಂಗಾವಲು ಅವರಿಗೆ ಬೇಕಾಗಿಲ್ಲ. ಮಠಾಧಿಪತಿಯಲ್ಲ;— ಅವರಿಗೆ ಯಾವುದೋ ಒಂದು ಪರಂಪರೆಯನ್ನು ಬೆಳೆಸುವ ಹವ್ಯಾಸವಿಲ್ಲ. ಅವರಿಗೆ ತಾವೇ ಬೆಳೆಯುವುದು—ಎಂಬುದಿರುವಾಗ, ಅವರು ಅಪೇಕ್ಷೆ ಮೀರಿ ಬೆಳೆಯುತ್ತ ಬಂದಾಗ ನಾಡು ಹಿಂದುಳಿಯಿತು—ಎಂಬ ಭಯವಿಲ್ಲ. ನಾಡಿನ ಮಣ್ಣಿನಿಂದ, ಜನಮನದ ಜೀವಸತ್ವದಿಂದ ಬೆಳೆದುಬರುತ್ತಿರುವ ತನ್ನತನವನ್ನವರು ನಾಡಿನಿಂದ, ನಾಡಿಗರಿಂದ ಬೇರ್ಪಡಿಸಬಯಸುವದಿಲ್ಲ. ಅವರ ಆಸಕ್ತಿ ತನ್ನ ಪರಿಮಿತಿಯನ್ನು ದಾಟಿ ಅನಾಸಕ್ತಿಯಾಗಿದೆ. ಅವರ ತಾದಾತ್ಮ್ಯಭಾವ ಜೀವಕೋಟಿಯನ್ನೊಳಗೊಂಡಿರುವುದರಿಂದ ಅದು ಬಂಧನಕಾರಿಯಾಗಿಲ್ಲ. ಅವರು ಸಂಪರ್ಕ ಪಡೆದುದು ಮೇರೆಮೀರಿದೆ. ಅವರು ತಮ್ಮಿಂದ ಸಿಡಿದು ನಿಂತುಕೊಳ್ಳಲಾರರು; ಬೇರೆ ನಿಂತೂ ತಮ್ಮನ್ನು ದೂರವಿರಿಸಲಾರರು. ಈ ಸಂಧ್ಯಾಸಂಗಮ ಯುಗಮದ ಕನಸು; ಪುನರುದಯದ ಬಯಕೆಯ ಮೂಲ.

೨

ಬೇಂದ್ರೆಯವರಿಗೆ ಅರವತ್ತು ವರುಷ. ಅವರನ್ನು ಇಂದು ನೋಡುವವರಿಗೆ ಈ ಸುದ್ದಿಯಿಂದಲೇ ಅರಳು-ಮರುಳಾದರೆ ಆಶ್ಚರ್ಯವಿಲ್ಲ.

ಅವರ ಮೀಸೆ ನೆರೆತಿಲ್ಲ. ಕೆನ್ನೆ ತುಂಬಿಕೊಂಡೇ ಇದೆ. ನಡೆಯಲ್ಲಿ ಸುಟಿಯಾಗಿಯೇ ಇದ್ದಾರೆ. ಮಾತಿನಲ್ಲಿ, ಅದರ ದಾಟಿಯಲ್ಲಿ ಮೊದಲಿನ ಚಾಕಚಕ್ಯತೆಯೇ ಇದೆ. ಕಿರಿಯರೊಡನೆ ತುಂಟಾಟದ ಮಾತು; ಸರಿಕ ರೊಡನೆ ಹುಡುಗಾಟದ ರೀತಿ; ಹಿರಿಯರೊಡನೆ ಸೌಜನ್ಯ—ಎಂದಿನಂತೇ ಇದ್ದಾರೆ. ನೋಟದಲ್ಲಿ ಅದೇ ಅಂತರ್ಮುಖತೆ, ಅದರಿಂದಾಗಿ ಒಂದು ಬಗೆಯ ವಿವಶತೆ—ಇದು ಅವರಿಗೆ ಮುಂಚಿನಿಂದಲೇ ರೂಢಿಯಾದದ್ದು. ಅದು ಅರಳೂ ಅಲ್ಲ; ಮರುಳೂ ಅಲ್ಲ. ಅದು ತನ್ಮಯತೆ–ಎನ್ನಬಹುದು; ಅದು ಕವಿ ಸಹಜವಾದದ್ದು ಎನ್ನಬಹುದು. ಇಂಥ ಅಂತರ್ಮುಖತೆಯನ್ನು ವಿವಶತೆಯನ್ನು, ತನ್ಮಯಂತೆಯನ್ನು ಕವಿ ಎಂಬ ಇತರರಲ್ಲಿಯೂ ನಾವು ವಿರಳವಾಗಿ ಕಾಣುತ್ತೇವೆ. ಆದ್ದರಿಂದಲೇ ಈ ವ್ಯಕ್ತಿ ಅಪೂರ್ವವಾದ ಸಹಜ ತೆಯನ್ನು ಪಡೆದು ವಿರಳವಾದ ಕವಿಯಾಗಿದ್ದಾರೆ.

ದೇವರು ಅನೇಕ ಅವತಾರಗಳನ್ನು ಮಾಡಿದ್ದಾನೆ, ಅಂದಂದಿನ ಜನ ರಂತೆಯೇ ಜನಿಸಿ, ಅವರೊಂದಿಗೇ ಬೆಳೆದು, ಮಾನವರ ಮಧ್ಯದಲ್ಲಿಯೇ ದೇವತ್ವವನ್ನು ಪಡೆದದ್ದುಂಟು.

ಗಾಂಧೀಜಿ ಯುಗಪುರುಷರಾಗಿಯೇ ಹುಟ್ಟಲಿಲ್ಲ. ಐನ್‌ಸ್ಟೀನ್ ಹೇಳಿ ದರು : ಇಂಥ ಒಬ್ಬ ಮನುಷ್ಯ, ರಕ್ತ–ಮಾಂಸಗಳನ್ನು ಹೊಂದಿ, ನಮ್ಮಂ ತೆಯೇ ಹುಟ್ಟಿಬೆಳೆದನೆಂದು ನಾಳಿನ ಜನಾಂಗ ನಂಬದೇ ಹೋಗಬಹುದು– ಎಂದು.

ಹಾಗೆಯೇ ಬೇಂದ್ರೆಯವರನ್ನು ನೋಡುತ್ತೇವೆ. ಅವರೊಂದಿಗೆ ಮಾತನಾಡುತ್ತೇವೆ. ನೋಡುವುದಕ್ಕೆ ಎಲ್ಲರಂತೆಯೇ ಒಬ್ಬ ಮನುಷ್ಯ. ಮಾತು ಎಲ್ಲರೂ ಆಡುವಂಥದೇ. ಆದರೂ ಅದರ ರೀತಿ ಬೇರೆ; ಅದರ ಅರ್ಥವ್ಯಾಪ್ತಿ ಬೇರೆ; ಭಾವವಿಕಾಸ ಬೇರೆ; ಧ್ವನಿಯ ಲಹರಿ ಬೇರೆ. ಅದನ್ನು ಕೇಳುವ ಕಿವಿಗೆ, ಆಲಿಸುವ ಹೃದಯಕ್ಕೆ, ವೇದ್ಯವಾಗುವುದು—ಅವರಾಡುವ ಮಾತಿನ ಶಬ್ದಾರ್ಥವಲ್ಲ; ಅರ್ಥಕೋಶದ ತಿಳಿವಲ್ಲ; ಮಾತಿಗೆ ಮೀರಿದ ಮಾನವೀಯ ಅನುಕಂಪ; ಕಂಠ ಸಾಧಿಸದ ಸ್ವರತರಂಗ; ಹೊರಗೆ ಕಾಣದ ಅವ್ಯಕ್ತ ಅಪೂರ್ವದರ್ಶನ. ಅದೇ ಕಾವ್ಯಸಿದ್ಧಿ ಇರಬಹುದೇ ?

ಈ ಸಿದ್ಧಿಗೆ ಮೂಲವಾದದ್ದು, ಪ್ರೇರಕವಾದದ್ದು ಏನಿರಬಹುದು? ಈ ಅಸಾಮಾನ್ಯತೆ ಎಲ್ಲಿಂದಿರಬಹುದು? ಅದೇ ಆ ತಾದಾತ್ಮ್ಯದಿಂದಿರಬಹುದೇ?

೩

ಸಾಹಿತ್ಯವೊಂದೇ ಅಪರ ಮಾತಿನ ವಿಷಯವಲ್ಲ. ಇವರಾಡುವ ಮಾತೇ ಸಾಹಿತ್ಯವಾಗುತ್ತದೆ. ಹಳ್ಳಿಯ ಹಾಲುಮಾರುವಾಕೆಯೊಡನೆ ಮಾತನಾಡುತ್ತಾರೆ; ಪಟ್ಟಣದ ಶೆಟ್ಟಿಯೊಡನೆಯೂ ಮಾತನಾಡುತ್ತಾರೆ. ರಾಜಕಾರಣವಿರಲಿ, 'ಗೃಹಖಾತೆ'ಯ ಕಲಹವೇ ಇರಲಿ,—ವೇದಾಂತವಿರಲಿ,— ವಿಜ್ಞಾನವಿರಲಿ, ಯಂತ್ರ–ಮಂತ್ರ–ತಂತ್ರ ಏನೇ ಇರಲಿ,—ಎಲ್ಲಾ ವಿಷಯ ಇವರಿಗೆ ಕುತೂಹಲಕಾರಿ. ವಾರಪತ್ರಿಕೆ ತೆರೆದರೆ ಮೊದಲು ವಾರದ ಭವಿಷ್ಯ ನೋಡುತ್ತಾರೆ. ಇವರಿಗೆ ತಮ್ಮ ಸ್ನೇಹಿತರ ರಾಶಿ ಯಾವುದೆಂದು ಗೊತ್ತು. ಅವರೆಲ್ಲರ ಭವಿಷ್ಯ ತಿಳಿಯದೆ ಮುಂದೆ ಪುಟ ತಿರುವುವದಿಲ್ಲ. ಇಂಗ್ಲಿಷ ಪತ್ರಿಕೆ ಸಿಕ್ಕರೆ ಮೊದಲು Tit-Bits ನೋಡುತ್ತಾರೆ; ನಗೆಬರಹಗಳಿದ್ದರೆ ಹುಡುಕುತ್ತಾರೆ. ಮಾತಿನಲ್ಲಿ ವಿನೋದ, ಆತ್ಮೀಯತೆಯಿರುವುದರಿಂದ ಇವರಿಗೆ ಎಲ್ಲ ಬಗೆಯುವರಲ್ಲಿ– ಯಾವ ವಿಷಯದ ಬಗೆಗಾದರೂ ಮಾತಿಗೆ ಎಡೆಯಿದೆ. ನಮಗೆ ಸಾಹಿತ್ಯ ಯಾಕೆ ಎನ್ನುವವರು ಇವರ ಮಾತುಗಳನ್ನು ತಾಸುಗಟ್ಟಲೆ ಕೇಳುತ್ತಾರೆ. ಇದೇ ಸಾಹಿತ್ಯ–ಎಂದರೆ ನಮಗದು ಬೇಕು ಎನ್ನುತ್ತಾರೆ. ಬೇಂದ್ರೆಯವರಿಗೆ ರತ್ನನ *ಬೇವಾರ್ಸಿಯಂಥವನು ಬರೆದುಕೊಳ್ಳುವುದಕ್ಕೆ ಒಬ್ಬ ಇದ್ದಿದ್ದರೆ ಬೇಂದ್ರೆ ಸಾಹಿತ್ಯ ಇನ್ನೂ ವಿಪುಲವಾಗಿ ಬಯಲಿಗೆ ಬರುತ್ತಿತ್ತು.

ಬೇಂದ್ರೆಯವರಿಗೆ ಕಾಣುವ ವಸ್ತುವಿನ ಬಗೆಗೆ, ಕೇಳುವ ವಿಷಯದ ಬಗೆಗೆ, ವಿಲಕ್ಷಣವಾದ ಕುತೂಹಲವಿದೆ. ಅವರಿಗೆ ಇಂಥ–ಎಂಥ ಮಾತಿನ ಬಗೆಗೂ ಬೇಸರವೆಂಬುದೇ ಇಲ್ಲ. ಸದಾ ಅವರು ಜಾಗ್ರತಚಿತ್ತದಿಂದ ಲೋಕ ಸಂಗ್ರಹ ಕಾರ್ಯದಲ್ಲಿ ತೊಡಗಿರುತ್ತಾರೆ, ಒಬ್ಬ ಹುಡುಗನಿರಲಿ, ಹಿರಿಯನಿರಲಿ,

---

* ಜಿ. ಪಿ. ರಾಜರತ್ನಂ ಎಂಬ ಕನ್ನಡ ಕವಿ ಹೆಂಡಕುಡುಕರ ಧಾಟಿಯಲ್ಲಿ ಬರೆದ ಪದ್ಯಗಳನ್ನು ನಿರಕ್ಷರಿಯಾದ ರತ್ನನೆಂಬ ಕುಡುಕ ಹಾಡಿಕೊಂಡು ಹೋದುದನ್ನು ಬೇವಾರ್ಸಿ ಎಂಬವ ಬರೆದುಕೊಂಡನೆಂದು ಸೂಚಿಸಿದೆ.

ಬೀದಿಯ ಗಾಯಕನಿರಲಿ, ಆಸ್ಥಾನದ ಸಂಗೀತ ಶಿಖಾಮಣಿಯೋ ಇರಲಿ,—ಪ್ರಾಜ್ಞನಿರಲಿ, ಹುಂಬನಿರಲಿ,—ಭಿಕ್ಷುಕನಿರಲಿ, ದಾನಿಯಿರಲಿ,—ಇವರೆಲ್ಲರ ಒಡನಾಟದಲ್ಲವರಿಗೆ ಏಕಪ್ರಕಾರವಾದ ಪ್ರೀತಿಯಿದೆ. ಸೃಷ್ಟಿಯ ವೈವಿಧ್ಯವನ್ನು, ವೈಚಿತ್ರ್ಯವನ್ನು, ಬಾಳಿನ ಅನಂತತೆಯನ್ನು ಅತ್ಯಂತ ಶ್ರದ್ಧೆಯಿಂದ, ಅವಿರತ ತಾಳ್ಮೆಯಿಂದ ತಿಳಿದುಕೊಳ್ಳುವದು ಅವರ ಸ್ವಭಾವ. ಅವರ ಅಭಿರುಚಿಯೆಂಬುದು ಸರ್ವವ್ಯಾಪಿಯಾದುದು. ಅದೆಲ್ಲದರಿಂದ ಅವರು ಪಡೆದ ದರ್ಶನ ಅಪೂರ್ವವಾಗಿ, ನಿಶಿತವಾದ ಅವರ ಸ್ಮರಣಶಕ್ತಿ, ಆಳವಾದ ಅವರ ವಿಚಾರಶಕ್ತಿ, ಸಂವೇದನಾಶೀಲವಾದ ಅವರ ಭಾವದೀಪ್ತಿಯಲ್ಲಿ ಪುಟಗೊಂಡು ಅವರ ಕಾವ್ಯದಲ್ಲಿ ವಿರಾಜಿಸುತ್ತದೆ.

*   *   *   *

ಬೇಂದ್ರೆಯವರು ಆಲಸಿ; ಯಾವುದೊಂದು ಕೆಲಸವನ್ನೂ ನಿರ್ವಹಿಸುವುದಿಲ್ಲ—ಎಂಬುದೊಂದು ಅಪವಾದವಿದೆ ಅವರ ಮೇಲೆ. ಹೌದು; ಅವರು ಯಾವ ಒಂದು ಕೆಲಸವನ್ನೂ ಮಾಡಿ ಪೂರೈಸುವುದಿಲ್ಲ. ಆದರೆ ಯಾವೊಂದು ಕೆಲಸವನ್ನೂ ನಿರಾಕರಿಸುವುದಿಲ್ಲ. ಅವರ ಕನಸಿನ ಕೆಲಸಗಳಿಗೆ ಲೆಕ್ಕವಿಲ್ಲ. ಮಾಡಬೇಕೆಂಬ ಯೋಜನೆಗಳ ಪಟ್ಟಿ ಯೋಜನದುದ್ದವಾದೀತು. ಆದರೆ ಫಕ್ಕನೆ ಒಂದನ್ನು ಹಿಡಿದು ಅದನ್ನು ಮುಗಿಸುವ ಹವ್ಯಾಸ ಅವರದಲ್ಲ. ಒಂದರ್ಥದಿಂದ ಅವರ ಯಾವ ಕೆಲಸಗಳಿಗೂ ಮುಕ್ತಾಯವೆಂಬುದೇ ಇಲ್ಲ.

'ಕನ್ನಡಕುಲ' ಎಂಬ ಅವರದೊಂದು ವೈಚಾರಿಕ ಕನಸಿದೆ. ಆ ಮಹಾವೃಕ್ಷದ ರೆಂಬೆ-ರೆಂಬೆಗಳನ್ನು ಅವರು ಕೂಲಂಕಷವಾಗಿ ಚಿಂತಿಸಿದ್ದಾರೆ. ಎಲೆ ಎಲೆಗಳ ಸೊಬಗನ್ನೂ ಮನಃಪಟಲದ ಮೇಲೆ ಚಿತ್ರಿಸಿಕೊಂಡಿದ್ದಾರೆ. ಅದನ್ನು ಜನರ ಮುಂದೆ ಕೃತಿರೂಪದಲ್ಲಿಡಲು ಅವರಿಗೆ ಬಿಡುವಿಲ್ಲ. ಅವರ ನಿತ್ಯದ ಲೋಕಸಂಗ್ರಹ ನಡೆಯಲೇಬೇಕು. ಅದು ಅವರು ಉಸಿರಾಡುವಂತೆ ಸಹಜವಾದದ್ದು; ಆವಶ್ಯಕವಾದದ್ದು; ಅನಿವಾರ್ಯ ಸ್ವಭಾವವಾದದ್ದು.

ತಾನು ಪಡೆದ ಅನುಭವವನ್ನೆಲ್ಲಾ ಜಗತ್ತಿಗೆ ಮರಳಿ ನೀಡಬೇಕೆಂಬ ಹಟ ಬೇಂದ್ರೆಯವರದಲ್ಲ. ಆ ಮಟ್ಟಿಗೆ ಜಗತ್ತಿನಿಂದ ಅವರು ಪಡೆದ ಪ್ರಯೋಜನ ಅಷ್ಟಿಷ್ಟಲ್ಲ. ಅಂದರೆ ಅದಾವುದೋ—ಯಾರದೋ ಒಂದು ವ್ಯಕ್ತವಾದ ನಿಧಿಯನ್ನವರು ತಮ್ಮ ಸ್ವಾಧೀನಪಡಿಸಿಕೊಂಡದ್ದಲ್ಲ. ವಿಶ್ವದ ಅನಂತತೆಯ

ವಿದ್ಯಮಾನಗಳ ಸುಳುವು-ಹೊಳವನ್ನವರು ಸ್ವಾಧೀನಪಡಿಸಿಕೊಂಡಿದ್ದಾರೆ. ಆ ಋಣಸಂದಾಯ ವ್ಯಕ್ತಕೃತಿರೂಪದಲ್ಲಿ ಆಗಬೇಕಾದಷ್ಟು ಆದಂತೆ ಕಾಣುವುದಿಲ್ಲ; ನಿಜ. ಆದರೆ ಬೇಂದ್ರೆಯವರು ತಮ್ಮನ್ನು ಕಾಣಬಂದವರೆಲ್ಲರನ್ನೂ ಆ ಕನಸಿನೂರಿಗೆ ಕರೆದೊಯ್ದು, ಅವರನ್ನು ಆ ಆಡುಂಬೊಲದಲ್ಲಿ ವಿಹರಿಸಹಚ್ಚಿ, ಮರಳಿ ಅವರನ್ನು ಅವರ ಅವಸ್ಥೆಗೇ ತಂದು ಬಿಡುತ್ತಾರೆ. ಹಾಗೆ ಅವರನ್ನು ಕಾಣಲು ಸಮಯ ನಿರ್ಬಂಧವೆಂಬುದಿಲ್ಲ. ಅವರನ್ನು ಕಂಡು, ಅವರೊಡನೆ ಮಾತಾಡಿ ಬಂದವರು ಯಾರೂ ಆ ಸಂದರ್ಶನದಿಂದ ಒಂದು ದಿವ್ಯಾನುಭವವನ್ನೇ ಪಡೆದು ಬರುತ್ತಾರೆ. ಈ ರೀತಿಯಿಂದ ಅವರು ಪಡೆದ ಪ್ರಯೋಜನಗಳ ಋಣಸಂದಾಯವೂ ಅವಿರತವಾಗಿ ನಡೆದೇ ಇರುತ್ತದೆ.

ಒಮ್ಮೆ ನಾಲ್ವರು ಗೆಳೆಯರು ಕೂಡಿ ಒಂದೊಂದು ಚೀಟಿಯಲ್ಲಿ ಒಂದೊಂದು ವಿಷಯ ಬರೆದು ಯಾರೊ ಒಬ್ಬರು ಎತ್ತಿದ ಒಂದು ಚೀಟಿಯಲ್ಲಿನ ವಿಷಯದ ಮೇಲೆ ಕವಿತೆ ಬರೆಯುವದೆಂದು ಗೊತ್ತುಮಾಡಿಕೊಂಡೆವು. 'ಹಂಬಲ' ಎಂಬ ವಿಷಯ ಬಂತು—ಎತ್ತಿದ ಚೀಟಿಯಲ್ಲಿ. ಸರಿ; ಸುನೀತ ಬರೆಯುವದೆಂದು ಗೊತ್ತಾಯಿತು. ಸಮಯ ಅರ್ಧ ಗಂಟೆ.

ಎಲ್ಲರೂ ಬರೆದಾದ ಮೇಲೆ—"ನನ್ನದು ಚೆನ್ನ, ನನ್ನದು ಚೆನ್ನ" ಎಂದು ವಾದ ಬಿತ್ತು. ಈ ಒಳಿತು ಕೆಡುಕಿನ ನ್ಯಾಯಾಧೀಶರು ನಾವು ಯಾರೂ ಆಗುವಂತಿರಲಿಲ್ಲ. ಯಾಕೆಂದರೆ ಎಲ್ಲರೂ ಬರೆಯುವ ಅಪರಾಧ ಮಾಡಿದ್ದೆವು. ಬೇಂದ್ರೆಯವರನ್ನು ಕಾಣುವುದೆಂದು ಸರ್ವಾನುಮತದಿಂದ ಒಪ್ಪಿಗೆಯಾಯಿತು.

ಕವಿತೆ ಬರೆಯುವ ಮೊದಲಿಗಿಂತ ಅದರ ಗುಣನಿರ್ಣಯದ ಕಡೆಗೆ ನಮ್ಮ ಲಕ್ಷ್ಯ ಹೆಚ್ಚು ವೇಗವಾಗಿ ಓಡಿತು. ಹೊತ್ತು ನೋಡಲಿಲ್ಲ; ಗೊತ್ತು ನೋಡಲಿಲ್ಲ. ಓಡಿದೆವು ನಮ್ಮ ಮೆಚ್ಚಿನ ಕವಿ-ಗುರು ಬೇಂದ್ರೆಯವರ ಕಡೆಗೆ.

ನಾವು ಹೋದ ಅಡ್ಡ ಹೊತ್ತಿನಲ್ಲಿಯೂ ನಮಗೆ ಮುಗುಳುನಗೆಯ ಸ್ವಾಗತ ದೊರೆಯಿತು. ಬೇಂದ್ರೆಯವರ ಮನೆಗೆ 'ಸುಸ್ವಾಗತ'ವೆಂಬ ಹಲಗೆ

ನೇತುಹಾಕಿಲ್ಲ. ಅದರ ಕಾರಣವೇ ಇಲ್ಲ. ಅಲ್ಲಿ ಹೋಗಿ ಬರುವವರಿಗೆಲ್ಲ ಸದಾ ತೆರೆದೆದೆಯ ಸ್ವಾಗತವಿದೆ.

ಕವಿಗೆ ಈ ಸುದ್ದಿ ಹೇಳಿದೆವು. ಅವರೆಂದರು : ಇಲ್ಲೇ ಬರಬೇಕಾಗಿತ್ತು ನಾನೂ ಕೂಡಿಕೊಳ್ಳುತ್ತಿದ್ದೆ–ಎಂದು. ಅವರನ್ನು ಕೂಡಿ ಸ್ಪರ್ಧಿಸುವ ವಿಚಾರ ನಮಗೆ ಯಾರಿಗೂ ಬರಲಾರದು—ಎಂಬುದನ್ನರಿತ ನಾವು ನಮ್ಮ ಕರಡು ಗಳನ್ನು ಅವರಿಗೊಪ್ಪಿಸಿದೆವು. ಒಂದೊಂದಾಗಿ ನಮ್ಮಿಂದಲೇ ಓದಿಸಿ ಕೇಳಿ—ಅದರಲ್ಲಿನ ಒಳಿತು–ಕೆಡಕುಗಳನ್ನು ನಮ್ಮ ಬಾಯಿಂದಲೇ ಹೊರಡಿಸಿದರು.

ಆಗ ಬೇಂದ್ರೆಯವರು ಸುನೀತ ಕಾವ್ಯದ ಹುಟ್ಟು–ಬೆಳವಣಿಗೆ, ಅದರ ಲಕ್ಷಣಗಳನ್ನು ಉದಾಹರಣೆಗಳಿಂದ ತಿಳಿಸಿಹೇಳಿದರು. ಅಡ್ಡಹೊತ್ತು ಹೇಳದೆ ಇಳಿದುಹೋಗಿತ್ತು.

ಇನ್ನೊಮ್ಮೆ ಬೇಂದ್ರೆಯವರೂ ಇರುವಾಗ ಚೀಟಿ ಕಾವ್ಯಪ್ರಯೋಗ (ಕಾವ್ಯಶಾಸ್ತ್ರವಿನೋದ) ನಡೆಯಿತು. ಆಗ ಚೀಟಿ ಹಾಕಿ ತೆಗೆದ ಒಂದೇ ಸಾರ್ವತ್ರಿಕ ವಿಷಯದ ಮೇಲೆ ಬರೆಯುವದಾಗಿರಲಿಲ್ಲ. ಹತ್ತು ಜನ ಒಂದೊಂದು ವಿಷಯ ಚೀಟಿಯಲ್ಲಿ ಬರೆದು ಹಾಕುವುದು; ಒಬ್ಬೊಬ್ಬರು ಒಂದೊಂದನ್ನು ಎತ್ತಿಕೊಳ್ಳುವುದು; ತಮತಮಗೆ ಬಂದ ವಿಷಯದ ಮೇಲೆ ಬರೆಯುವುದಂ. ಇಂಥದೇ ಛಂದ ಎಂದಿರಲಿಲ್ಲ. ವಿಷಯ ವೈವಿಧ್ಯದಂತೆ ಪ್ರಕಾರವೂ ಬೇರೆಬೇರೆಯಾಗಿರಲಿ—ಎಂದರು ಬೇಂದ್ರೆಯವರು. ಅಂದಿನ ಬರಹಗಾರರಲ್ಲಿ ನುರಿತವರೂ ಕೆಲವರಿದ್ದರು. ಆದರೆ ಅಂದು ನಿರ್ದಿಷ್ಟ ಅವಧಿಯಲ್ಲಿ ಬೇಂದ್ರೆಯವರು ಬರೆದು ಮುಗಿಸಲಿಲ್ಲ.

*　　*　　*　　*

ನೀವು ಅವರನ್ನು ಕಂಡು 'ನಿಮ್ಮಿಂದ ಇಂಥ ಕೆಲಸವಾಗಬೇಕು' ಎಂದು ಕೇಳಿರಿ. ಅವರು ತಟ್ಟನೆ 'ಆಗಲಿ' ಎನ್ನುವವರಲ್ಲ. 'ನಾನು ಈ ಕೆಲಸ ಮಾಡಿಯೇನೆಂದು ನಿಮಗೆ ಅನಿಸಿದರೆ ನಾನು ಮಾಡಲು ನನ್ನ ಅಡ್ಡಿ ಯೇನಿಲ್ಲ'—ಅಂದಾರು. ಕೆಲಸ ಮಾಡಿದರು; ಮುಗಿಸಿದರು : ಅಂದರೆ ಆದರ ಶ್ರೇಯಸ್ಸಿನ ಹೊರೆಯನ್ನೂ ಅವರು ತಾವೇ ಎಂದೂ ಹೊರುವವರಲ್ಲ. ಆ ಕೆಲಸ ಮಾಡಹಚ್ಚಿದವರಿಗೆ ಸೇರಿದ್ದದು—ಎನ್ನುತ್ತಾರೆ. ಕೆಲಸವಾಗಲಿಲ್ಲ;

ಅದರ ಅಪವಾದವನ್ನೂ ಅವರು ಹೊರುವದಿಲ್ಲ. "ನಾನಿದನ್ನು ಮಾಡಬಲ್ಲೆನೆಂದು ತಿಳಿದವರು ಅವರು; ನಾನಲ್ಲ"—ಎಂದು ಬಿಡುತ್ತಾರೆ. ಇಂಥ ನಿಷ್ಕಾಮ ಕರ್ಮ ಅವರದು.

ಆದರೆ ಅಂಥದೊಂದು ಕೆಲಸ ಯಾರದೇ ಪ್ರೇರಣೆಯಿಂದವರು ನಿರ್ವಹಿಸಿರಲಿ, ಅದನ್ನು ಪೂರೈಸದೆ ಇರಲಿ, ಅವರು ಮಾತ್ರ ಅದನ್ನೆಂದಿಗೂ ಬಿಟ್ಟಿರುವದಿಲ್ಲ. ಅದರ ಇತಿ–ಮಿತಿಯನ್ನು 'ಪಾತಾಳ ಗಡೆ' ಹಾಕಿ ಮಥಿಸುತ್ತಲೇ ಇರುತ್ತಾರೆ.

* * * *

ಅವರ ಸ್ಫೂರ್ತಿ ಕರೆದಾಗ ಬರುವಾಕೆಯಲ್ಲ. ಎಂತಲೇ ಅವರಿಂದ ಏನಾದರೂ ಲೇಖನ ಕಾರ್ಯ ಮಾಡಿಸುವುದು ಅಷ್ಟು ಸುಲಭವಲ್ಲ. ಅವರಿಂದ ಲೇಖನ ಅಪೇಕ್ಷಿಸಿದವರು ಅವರನ್ನು ಕಂಡು ಮಾತನಾಡುವಾಗ ತಾವು ಹೋದ ಕಾರಣ ಮರೆತು, ಅವರ ಮಾತು ಕೇಳಿ ಸುಮ್ಮನೆ ಮರಳಿ ಬಂದುದುಂಟು. ಅವರು ಲೇಖನ ಬರೆಯಲು ಒಪ್ಪುವುದು ಸುಲಭ; ಕೆಲಸವಾಗುವುದು ಅಪೇಕ್ಷಿಸಿದವರ ಗ್ರಹಬಲದ ಮೇಲೆ. ಅವರೆಂದೂ ಗಡಿಯಾರದ ದಾಸರಲ್ಲ. ಸಮಯಕ್ಕೆ ಹೊರಡುವ ರೈಲು ಅವರಿಗೆಂದೂ ಸಿಕ್ಕುವುದಿಲ್ಲ. ಯಾರಾದರೊಬ್ಬರು ಅವರನ್ನು ಗಾಡಿ ಹತ್ತಿಸಿ ಬರಬೇಕು; ನಿರ್ದಿಷ್ಟ ಸ್ಥಳದಲ್ಲಿ ಯಾರಾದರಿನ್ನೊಬ್ಬರು ಇಳಿಸಿಕೊಳ್ಳಬೇಕು. ಮಧ್ಯೆ ಎಲ್ಲಿಯಾದರೂ ಗಾಡಿ ಬದಲಿಸುವುದಿದ್ದರೆ ಇವರು 'ಭೂಮಿ ದುಂಡಗಿದೆ' ಎಂಬುದಕ್ಕೆ ಸಾಕ್ಷಿಯಾಗಿ ಹೊರಟ ಸ್ಥಳಕ್ಕೇ ತಿರುಗಿ ಬಂದಾರು. ಒಂದು ವೇಳೆ ಬದಲಿಸಿದರೆ ಇಳಿಯುವಾಗ ಇವರ ಸಾಮಾನು ಇವರ ಬಳಿ ಇರುವದಿಲ್ಲ.

ಇವರು ಸದಾ ಕಾವ್ಯ ಚಿಂತನೆಯಲ್ಲೇ ಇರುತ್ತಾರೆಂದು ಭಾವಿಸಲಾಗದು. ಇವರಿಗೆ ಮಾತು ಸಿಕ್ಕರೆ ಮಾರು ಹೊಲ ಸಿಕ್ಕಂತೆ. ಇವರು ನೋಡುವ ದೃಷ್ಟಿ ದುರ್ಬೀನು ದೃಷ್ಟಿ. ಇವರಿಗಿರುವ ಜಿಜ್ಞಾಸೆ ಸರ್ವಜ್ಞನ ಜಿಜ್ಞಾಸೆ.

ಬೇಂದ್ರೆಯವರು ಮೂಕರನ್ನೂ ಮಾತನಾಡಿಸಬಲ್ಲರು— ಎಂದರೆ ಉತ್ಪ್ರೇಕ್ಷೆಯಾದೀತು. ಒಮ್ಮೆ ಅವರೇ ಮೂಕರಾಗಬೇಕಾದ ಸಂದರ್ಭ ಬಂತು. ಮುಂಬೈ ಸಾಹಿತ್ಯ ಸಮ್ಮೇಳನದ (೧೯೩೪) ಕವಿಗೋಷ್ಠಿಗೆ ಬೇಂದ್ರೆ

ಯವರು ಅಧ್ಯಕ್ಷರಾಗಿದ್ದರು. ಆಗ ಪುಣೆಯಲ್ಲಿ ಪ್ರೊ. ಗೋಕಾಕರಿದ್ದರು. ಗುಂಪಿನ ಗೆಳೆಯರೆಲ್ಲ ಎರಡು ದಿನ ಮುಂಚಿತವಾಗಿ ಪುಣೆಯಲ್ಲಿ ಕೂಡಿದರು. ಹಗಲಿರುಳೆನ್ನದೆ ದೂರದಿಂದ ಬಂದ ಗೆಳೆಯರೊಡನೆ ಬೇಂದ್ರೆಯವರು ಮಾತ ನಾಡಿದರು. ಅದರ ಪರಿಣಾಮವಾಗಿ ಅವರ ದನಿ ಒಡೆಯಿತು. ಗಂಟಲು ಹಿಡಿಯಿತು. ಮುಂದೆ ಮೂರನೆಯ ದಿನ ಅವರ ಅಧ್ಯಕ್ಷ ಭಾಷಣ. ಒಬ್ಬರು ಇವರು ಎರಡು ದಿನ ಮಾತನ್ನೇ ನಿಲ್ಲಿಸಬೇಕೆಂದು ಸೂಚಿಸಿದರು. ಅದು ಎಲ್ಲರಿಗೂ ಸರಿ ಕಂಡಿತು. ಬೇಂದ್ರೆಯವರಿಗೆ ಈ ಮಾತಿನ ಉಪವಾಸದಿಂದ ಬಹಳ ತೊಳಲಾಟವಾಯಿತು. ಇವರನ್ನು ಮಾತನಾಡಗೊಡದ ಹಾಗೆ ಒಬ್ಬ ಗಟ್ಟಿಗನಾದ ಗೆಳೆಯನ ಕಾವಲಿರಿಸಲಾಯಿತು. ಬೇಂದ್ರೆಯವರು ಮೂಕ ಸನ್ನೆ ಸುರು ಮಾಡಿದರು. ಅಂದು ಮುಂಬೈಗೆ ಹೊರಟ ಗಾಡಿಯಲ್ಲಿ ಈ ಮೂಕ ಪ್ರಹಸನ ನಡೆಯಿತು. ದಾರಿಯ ನೋಟದ ಬಗ್ಗೆ, ಗಾಡಿಯ ಜನರ ಬಗ್ಗೆ ಇವರ ಸನ್ನೆ ಸುರುವಾಯಿತು. ಕೈಯಲ್ಲಿ ಬೆರಳಿನಿಂದ ಬರೆದು ಕೇಳಿ ದರು! ಕಾವಲು ಗೆಳೆಯ ಇವರ ಕಾಟ ತಾಳಲಾರದೆ ಬೇಸತ್ತ. ಇವರ ಮೂಕ ಪ್ರಶ್ನೆಗಳಿಗೆ ಉತ್ತರ ಕೊಡಲಾರದೆ ಸೋತುಹೋದ. ಆಗ ಬೇಂದ್ರೆ ಯವರು ಮಾತಿನ ಉಪೋಷಣೆ ಮುರಿದರು. ಮೊಗದಲ್ಲಿ ಗೆದ್ದ ಗಾಂಭೀರ್ಯವಿತ್ತು.

❖

ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ ದಿ॥ ಬಿ.ಎಂ. ಶ್ರೀಯವರು ಕನ್ನಡ ಜೈಮಿನಿ ಭಾರತ ಸಂಗ್ರಹ ಮಾಡಲು ಇವರನ್ನು ಒಪ್ಪಿಸಿದರು. ಅಂದು ಜೈಮಿನಿ ಭಾರತದ ಅಭ್ಯಾಸಕ್ಕೆ ಮತ್ತೆ ತೊಡಗಿದ ಬೇಂದ್ರೆಯವರು ಇಂದಿಗೂ ಅದನ್ನು ತಡಕಾಡುತ್ತಲೇ ಇದ್ದಾರೆ. ಅದರ ರಚನೆ, ಅದರ ಛಂದಸ್ಸು, ಅದರ ನಾದ,— ಅದರ ಕಾಲ ಇವುಗಳ ಬಗೆಗೆ ದೊರೆವ ಎಲ್ಲ ಸಾಧನಗಳನ್ನೂ ಬಳಸಿಕೊಂಡರು. ಕೈಗೆ ಸಿಕ್ಕ ಓಲೆ ಪ್ರತಿಗಳನ್ನೂ ಹಸ್ತಪ್ರತಿಗಳನ್ನೂ ನೋಡಿ ದಷ್ಟೂ ಅವರಿಗೆ ತೃಪ್ತಿಯಿಲ್ಲ. ಒಂದೊಂದು ಪಾಠದಲ್ಲೂ ಒಂದೊಂದು ಸೊಬಗನ್ನು ಕಾಣುತ್ತಾರವರು. ಆ ಕಾವ್ಯ ಅವರಿಗೆ ದಿನದ ಪ್ರಾರ್ಥನೆಯಷ್ಟು ಪೂಜ್ಯವೂ ಸಹಜವೂ ಆಯಿತು.

ಅದರಲ್ಲಿಯ ಕಥೆಗಳ ಬಗೆಗೆ, ಪಾತ್ರಗಳ ಬಗೆಗೆ— ಅವರು ಯೋಚಿಸಿದ್ದು ಅಷ್ಟಿಷ್ಟಲ್ಲ. ಮೂಲ ಸಂಸ್ಕೃತ ಕಾವ್ಯದ ಜತೆಗೆ ಸಮಕಾಲೀನ ಇತರ ಕಾವ್ಯಗಳ ಬಗೆಗೆ ತುಲನಾತ್ಮಕವಾಗಿ ವಿಮರ್ಶಿಸಿದರು; ಅಂದರೆ ವಿಷಯದ ಟಿಪ್ಪಣಿ ಮಾಡಿಕೊಂಡರು. ಮುನ್ನುಡಿಯೇ ಒಂದು ಪುಸ್ತಕವಾಯಿತು. ಸಂಗ್ರಹವು ಇನ್ನೂ ಬರಬೇಕು. ಇನ್ನೊಬ್ಬರಿಂದ ಒಂದು ಸಂಗ್ರಹ ಆಗಲೆ ಬಂದು ಆಗಿದೆ. ಆದರೆ ಬೇಂದ್ರೆಯವರಿಗೆ ಇಂದೂ ಅವಸರವಿಲ್ಲ. ತಮ್ಮ ಕೆಲಸ ಮುಗಿಯಲಿಲ್ಲವೆಂಬ ಬೇಸರವೂ ಇಲ್ಲ. ಈಗ ಪ್ರಕಟವಾದ ಸಂಗ್ರಹದಲ್ಲೂ ಗುಣ–ವೈಶಿಷ್ಟ್ಯ ಹುಡುಕುತ್ತಾರೆ. ಇಂದಿಗೂ ಒಂದು ಓಲೆಯ ಪ್ರತಿ ಸಿಗಲಿ, ಯಾರೋ ಪ್ರತಿ ಮಾಡಿಟ್ಟ ಹಳೆಯ ಕಡತವೇ ಸಿಗಲಿ—ಅದನ್ನವರು ಅದೇ ಮೂಲದ ಶ್ರದ್ಧೆಯಿಂದ, ಅದೇ ತಾಳ್ಮೆ—ಕುತೂಹಲಗಳಿಂದ ಓದಿ ನೋಡುತ್ತಾರೆ.

ಜೈಮಿನಿಭಾರತ ಅವರ ಕಾಲು ಶತಮಾನದ ಅಭ್ಯಾಸವೇ ಆದಂತೆ ಕಾಲಿದಾಸನೂ ಅವರ ಕೈಯಲ್ಲಿ ಸಿಕ್ಕಿಕೊಂಡಿದ್ದಾನೆ. "ಮೇಘದೂತದ ಬೇಂದ್ರೆ ಅವತಾರವು ಕಾಲಿದಾಸನಿಂದ ಯಥಾವತ್ತಾದ ಪ್ರೇರಣೆ ಪಡೆದಿರಲಿ, ಆದರೆ ಅದು ಬೇಂದ್ರೆಯವರ ಸ್ವಂತ ರಚನೆ"— ಎಂದು ಶ್ರೀ ಮಾಸ್ತಿ ಹೇಳಿದರು.

ಶಾಕುಂತಲದ ಮೇಲೇ ಒಂದೆರಡು ವಾರ ಅವರು ಮಾತನಾಡಬಲ್ಲರು. ಆದರದು ಕೇವಲ ಬಾಹ್ಯರೇಖೆ ಎಂದವರು ಹೇಳುತ್ತಾರೆ.

ಹೀಗೆ ಪ್ರತಿ ಲಕ್ಷ್ಮೀಶ, ಪ್ರತಿ ಕಾಲಿದಾಸರು ಬೇಂದ್ರೆಯವರ ಚಿತ್ತ ಮಾನಸದಲ್ಲಿ ಹುಟ್ಟಿ ಬೆಳೆಯುತ್ತಲೇ ಇದ್ದಾರೆ.

ಆಗ ಮುಂಗಿವು ಎಲ್ಲಿ ?

ಒಂದು ವ್ಯಕ್ತಿಯ ಜೀವಮಾನ ಇಂಥ ನಿರಲಸ ಅಭ್ಯಾಸಿಗಳಿಗೆ ಎಷ್ಟೂ ಸಾಲದು ಎನಿಸುವುದಿಲ್ಲವೇ ?

೬

ನಗೆ ಬೇಂದ್ರೆಯವರ ಬಾಳ ಬೆಳಕು. ಇವರದು ಯಾವಾಗಲೂ ನಕ್ಕು ನಗಿಸುವ ನಗೆ. ಅದರಿಂದಲೇ ಅವರು ಬಾಳ ಗೋಳನ್ನು ಸಹಿಸಬಲ್ಲರು; ಇನ್ನೊಬ್ಬರನ್ನೂ ಸಾಂತ್ವನಗೊಳಿಸಬಲ್ಲರು. ಕೆಲ ವರುಷಕ್ಕೆ ಮೊದಲು ಕೈಗೆ

ಬಂದ ಅವರ ಹಿರಿಯು ಪ್ರಾಗ ತೀರಿಕೊಂಡ. ಆ ದುಃಖ ತಡೆದುಕೊಳ್ಳಲು ಅವರ ಆತ್ಮಕ್ಕೆ ಇರುವ ಯಾವ ಸಂಸ್ಕಾರ ಬಲ ಸಹಾಯವಾಯಿತೋ! ವಿಶಾಲ ಜಗತ್ತಿನ ದುಃಖ ತನ್ನದಾಗಿ ಮಾಡಿಕೊಂಡವನ ದುಃಖ ವಿಶಾಲ ಜಗತ್ತಿನಲ್ಲಿ ಹಂಚಿಹೋಗುತ್ತದೆ. ಬೇಂದ್ರೆಯವರೇ ಹೇಳಿದ್ದಾರೆ :

ತನ್ನವರ ಸುಖ-ದುಃಖ
ತನ್ನದೆನ್ನುವ ಲೆಕ್ಕ
ತನ್ನ ಸುಖ-ದುಃಖ ತನ್ನವರದೆಂಬ !
ಸಾನುಭೂತಿಯು ಸೊಗವು
ಸ್ವಾನುಭೂತಿಯು ಜಗವು
ಇದುವೆ ಜೀವನವು; ಉಳಿದದ್ದು ಜಂಬ !

ಈ ಆಳವಾದ ಅನುಭವವನ್ನು ತಮ್ಮ ಜೀವನದಲ್ಲಿಯೇ ಕಂಡುಂಡು ಜೀವನವನ್ನು ಕಟುವಾದರೂ ಮಧುರವಾಗಿ ಕಾಣುವ ಈ ಕವಿ, ನಗೆಯಿಂದ ತಾ ಬೆಳಗಿ ಜಗ ಬೆಳಗುವ ಶಕ್ತಿಯನ್ನು ಪಡೆದಿದ್ದಾರೆ.

ಉಣ್ಣುವ ಊಟ, ಕುಡಿಯುವ ನೀರು ಇವೆರಡರಿಂದಲೇ ಮಾನವ ಬದುಕಬಲ್ಲನೇ ? ಮನೋವಿಕಾಸಕ್ಕೆ, ಆತ್ಮದರ್ಶನಕ್ಕೆ ಇನ್ನೇನೆಲ್ಲಾ ಬೇಕಾಗ ಬಹುದು. ಆದರೆ ನಗೆ ಒಂದು ಅಗತ್ಯದ ಸಾಧನವೆಂದು ಬೇಂದ್ರೆಯವರನ್ನು ಕಂಡ ಎಲ್ಲರಿಗೂ ಅನಿಸದಿರುವುದಿಲ್ಲ. ಸಂವಾದದಲ್ಲಿ ಇವರು ನಗೆಯನ್ನು ಹೇಗೆ ತೇಲಿಸುತ್ತಾರೆ—ಎನ್ನುವದಕ್ಕೆ ಕೆಳಗಿನ ಎರಡು ಮಾತು ನಿದರ್ಶನವಾಗ ಬಲ್ಲವು.

ಮೊನ್ನೆ ಒಬ್ಬರ ಕೂಡ ಸಂವಾದ ನಡೆದಿತ್ತು. ಒಂದು ವಿಷಯದ ನಿರೂಪಣೆ ಜತೆಯವರಿಗೆ ತಿಳಿಯಲಿಲ್ಲ. ಬೇಂದ್ರೆಯವರು ಒಂದು ಉದಾ ಹರಣೆಯನ್ನು ಕೊಟ್ಟರು.

ರಾಮು, ಕೃಷ್ಣ ಯಾವುದೋ ಕಾರಣಕ್ಕಾಗಿ ೧೯೩೪ ರಲ್ಲಿ ಜಗಳಾಡಿ ದರು; ಮಾತುಬಿಟ್ಟರು. ಮುಂದೆ ೧೯೪೦ ರಲ್ಲಿ ಎಲ್ಲಾ ಮರೆತು ಗೆಳೆಯ ರಾದರು. ಮುಂದೆ ಒಂದು ದಿನ ರಾಮು, ಕೃಷ್ಣನಿಗೆ ಕೇಳಿದ : "ನಾವೆಲ್ಲಾ

ಗೆಳೆಯರಾದೆವು. ಆದರೆ ನಮ್ಮ ೧೯೩೪ ರ ಜಗಳವೊಂದು ಹಾಗೇ ಉಳಿಯಿತಲ್ಲಾ"—ಎಂದು.

* * * * *

ಒಬ್ಬ ಔಷಧ ವ್ಯಾಪಾರಿ ಮಾರುವ ಎಲ್ಲಾ ಔಷಧಿಗಳನ್ನು ತಾನು ಉಪಯೋಗಿಸಿದ ಹಾಗೆ, "ಅನುಭವದಿಂದ ಹೇಳುತ್ತೇನೆ, ಇದು ಬಹಳ ಗುಣಕಾರಿಯಾಗಿದೆ—ಹಾಗೆ. ಹೀಗೆ" ಎಂದು ಹೇಳುತ್ತಿದ್ದ. ಒಂದು ಔಷಧ ಹತ್ತು ರೋಗಗಳ ನಿದಾನಕ್ಕೆ ಬರುವದೆಂದೂ ಹೇಳುತ್ತಿದ್ದ. ಬೇಂದ್ರೆಯವರಿಗೆ ಒಂದು ಶಕ್ತಿವರ್ಧಕ ತ್ರಾಣಿಕ (ಟಾನಿಕ್) ಬೇಕಾಗಿತ್ತು. ಅವನು ಒಂದನ್ನು ತೆಗೆದುಕೊಡುತ್ತ, ಅದರ ಗುಣವರ್ಣನೆ ಮಾಡುತ್ತ 'ಅದು ಶಕ್ತಿಯನ್ನು ಕೊಡುವದಲ್ಲದೆ ನಪುಂಸಕತೆಯನ್ನೂ ಕಳೆಯುತ್ತದೆ'—ಎಂದು ಹೇಳಿದ. "ಇದನ್ನೂ ಅನುಭವದಿಂದ ಹೇಳುತ್ತೀರಾ ?" ಎಂದರು ಬೇಂದ್ರೆ.

* * * * *

ಒಮ್ಮೆ ಒಬ್ಬ ಕವಿ ಮಿತ್ರರು ಬೇಂದ್ರೆಯವರ ಮುಂದೆ ತಾವು ಹೊಸದಾಗಿ ಬರೆದ ಒಂದು ಸುದೀರ್ಘ ಕವನ ಓದುತ್ತಿದ್ದರು. ಬೇಂದ್ರೆಯವರ ಎಳೆಮಗು ಅವರ ಮಡಿಲಲ್ಲಿ ಆಟವಾಡುತ್ತಿತ್ತು. ಕವಿತೆಯ ಓದು ಸಾಗಿತ್ತು. ಸ್ವಲ್ಪ ಹೊತ್ತಿನಲ್ಲಿ ಮಗು ಅಲ್ಲೇ ನಿದ್ರೆಮಾಡಿತು. ಆಗ ಬೇಂದ್ರೆಯವರು ಆಕಳಿಸುತ್ತ ಹೇಳಿದರು :

"ಈ ಹುಡುಗನ ಮೇಲಂತೂ ನಿಮ್ಮ ಕವಿತೆ ಪ್ರಭಾವ ಬೀರಿತು !"

೭

ಹಿಂದಿನ ಋಷಿಗಳು ತಪಸ್ಸು ಮಾಡಿದರು; ಸಾಯುಜ್ಯ ಪಡೆದರು. ಅವರಿಂದ ಲೋಕೋಪಕಾರವೇನಾಯಿತು ?— ಎಂದು ಇಂದಿನ ವ್ಯವಹಾರ ಜಗತ್ತು ಕೇಳುತ್ತದೆ. ಬೇಂದ್ರೆ ಕಾವ್ಯರ್ಷಿಯಾಗಿದ್ದಾರೆ. ಚಲಿಸುವ ವಿಶ್ವಕೋಶವಾಗಿದ್ದಾರೆ. ಕಂಡವರನ್ನು ತಮ್ಮ ಮಾತಿನಿಂದ ಸಾಯುಜ್ಯಕ್ಕೆ ಒಯ್ದು ಮರಳಿಸುತ್ತಾರೆ. ಇನ್ನೇನಾಗಬೇಕು ?

ಹತ್ತಾರು ಅವರ ಕವನ ಸಂಗ್ರಹಗಳಿವೆ. ಬೇಂದ್ರೆಯವರ ಲೆಕ್ಕದಲ್ಲಿ ಜನ ಪ್ರಯೋಜನ ಪಡೆಯ ಬಯಸಿದರೆ ಒಂದು ಸಂಗ್ರಹ ಸಾಕು; ಒಂದು ಪದ್ಯವೂ ಸಾಕು.

ಅವರ ಬರಹದ ಒಂದು ನುಡಿ, ಒಂದು ಮಾತು ಬಂದಿರುವುದು ಮೇಲಿನಿಂದ ಉದುರಿ ಬಂದಿಲ್ಲ. ಅವರ ಹೃದಯ ಗರ್ಭದಲ್ಲಿ ಕಾವು ಪಡೆದು, ಪ್ರತಿಭೆಯಿಂದ ಕಾಂತಿ ಪಡೆದು, ಅಭ್ಯಾಸದ ಬಲ ಪಡೆದು, ವಿಚಾರದ ಗಾಳಿಯಿಂದ ಪುಟಗೊಂಡು ಬರುವ ಒಂದು ನುಡಿ. ಒಂದು ಶಬ್ದ ಒಂದೊಂದೂ ಪೂರ್ಣ ಫಲ.

ಕವಿವರ ಬೇಂದ್ರೆಯವರು ಶಾಲೆ–ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರು. ಈ ಶಾಲೆ–ಕಾಲೇಜಿನ ಶಿಷ್ಯಪಡೆಗಿಂತ ಅವರ 'ಮಾನವ ಕಾವ್ಯ'ಕ್ಕೆ ಮನಸೋತು ನಾಡಿನಲ್ಲೆಲ್ಲ ಹಬ್ಬಿದ, ಹಬ್ಬುತ್ತಿರುವ ಶಿಷ್ಯರ ಪಡೆಯೇ ದೊಡ್ಡದು. ಅವರು ತಮ್ಮ ಶಿಷ್ಯರಿಗೆಲ್ಲ ಗೆಳೆಯರೆಂದೇ ಹೇಳುತ್ತಾರೆ. ಅವರ ಬಾಳಿನುದ್ದಕ್ಕೂ ಈ ಶಿಷ್ಯಸ್ನೇಹ ಸಾಲುಮರದ ಹಾಗೆ ಇವರು ನಡೆವ ದಾರಿಯ ನೆಳಲಾಗಿ, ಸಂಗಾತಿಯಾಗಿ, ಮೈಲುಕಲ್ಲುಗಳಾಗಿ ಬೆಂಬಿಡದೆ ಸಾಗುವಂಥದೇ. ಅವರು ತಮ್ಮ ಬಾಳ ಪಯಣದಲ್ಲಿ ಈ ಸಂಗಾತಿಗಳ ಜೀವನ ವೃಕ್ಷಗಳನ್ನು ವಸಂತನಾಗಿ ಚಿಗುರಿಸಿದ್ದಾರೆ; ಅರಳಿಸಿದ್ದಾರೆ. ಹೂ ಬಿಟ್ಟ ಮರ ಪ್ರಕೃತಿ ನಿಯಮವಂತೆ ಫಲ ಬಿಡುತ್ತಲಿರುವುದನ್ನು ತಾವೂ ಕಂಡು ಸಂತಸಗೊಂಡಿದ್ದಾರೆ. ಇವರು ಚೆಲ್ಲಿದ ಬೆಳಕಿನಲ್ಲಿ ದಾರಿಗಂಡವರು, ಕೊಟ್ಟ ದೃಷ್ಟಿಯಲ್ಲಿ ಬಾಳನರಿತವರು ಅತೃಪ್ತಿಯಿಂದ ತೃಪ್ತಿಯೆಡೆಗೆ, ಅಸಹನೆಯಿಂದ ತಾಳ್ಮೆಯ ಕಡೆಗೆ, ನಿರಿಚ್ಛೆಯಿಂದ ಸದಾಶಯದ ಕಡೆಗೆ — ತನ್ಮೂಲಕ ವಿರಸದಿಂದ ಸಮರಸದ ಕಡೆಗೆ ಸಾಗಿರುವರಲ್ಲದೆ ಕಲ್ಲೆದೆಯವರು ಕರಗಿದೆದೆಯವರಾಗಿ ಕತ್ತಲೆಯಿಂದ ಉಷೆಯ ಚುಮು–ಚುಮು ನಸುಕಿನಲ್ಲಿ ಬಂದು ನಿಂತಿದ್ದಾರೆ.

ಬೇಂದ್ರೆಯವರ ಈ ತಪದ ಫಲವನ್ನು ಈ ಒಂದೇ ಕಾಲಕ್ಕೆ ತಿಂದು ತೇಗೇನೆಂದು ಇಂದಿನ ನಾವು ಬಯಸುವುದು ಸ್ವಾಭಾವಿಕ. ಆದರೆ ಬರುವ ಎಲ್ಲ ಕಾಲಕ್ಕೂ ಅದರ ಮಕರಂದ ಮಗಮಗಿಸಲಿದೆ. ಅವರ ಪ್ರತ್ಯಕ್ಷ ಮೇರುಕೃತಿ ಮೂಡಿ ಬಂದೀತು. ಅದು ಬರುವ ಎಲ್ಲ ಕಾಲಕ್ಕೂ ಗೌರೀಶಂಕರವಾದೀತು. ಆದರೆ ಇಂದಿನ ನಾವು ಪ್ರತ್ಯಕ್ಷ ಬೇಂದ್ರೆಯವರನ್ನೇ ಪಡೆದ ಭಾಗ್ಯಕ್ಕೆ ಎಣೆಯುಂಟೆ ?

(೧೯೫೬)

೨. ಶಿವರಾಮ ಕಾರಂತ

"ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ"

ಪ್ರೊ. ಗೋಕಾಕರ ಇಂಗ್ಲೆಂಡಿನ ಪ್ರಯಾಣದಲ್ಲಿ ಒಬ್ಬ ವಿದೇಶೀ ಪ್ರವಾಸಿ 'ನಿಮಗೆ ಕಾರಂತರ ಪರಿಚಯವಿದೆಯೋ' ಎಂದು ಕೇಳಿದರಂತೆ ! ಕನ್ನಡ ವಾಚಕಲೋಕದಲ್ಲಂತೂ ಕಾರಂತರನ್ನು ಕಾಣದವರು ಅಪರೂಪ. ನಮ್ಮ ನಾಡಿನಲ್ಲಿ ಅವರು ಸುತ್ತದ ಮೂಲೆಯಿಲ್ಲ. ಭಾರತದ ಉದ್ದಗಲವನ್ನೆಲ್ಲಾ ಅಳೆದಿದ್ದಾರೆ. ಮೊಳಕೈ ವರೆಗೆ ಒಂದು ಅಂಗಿ, ಆರೇಳು ಮೊಳದ ಒಂದು ಚುಂಗು ಪಂಜೆ. ಜಾಕೀಟು ಒಂದಿದ್ದರೆ ಇತ್ತು—ಇಲ್ಲದಿದ್ದರೆ ಇಲ್ಲ. ಹೆಗಲ ಮೇಲೊಂದು ಬೈರಾಸು (ಟಾವೆಲ್). ತಲೆತುಂಬ ಕೂದಲು ಕೆದರಿಕೊಂಡು ಹೊರಟರೆ, ಮುಂಬೈಗೆಂದು ಹೊರಟು ಕಲಕತ್ತೆಗಾಗಿ, ಮದರಾಸು ಹಾದು ಮಂಗಳೂರಿಗೆ ಬರುತ್ತಾರೆ. ಏನು ಕೆಲಸವೋ-ಸದಾ ಸಂಚಾರಿ ಜೀವ.

ಕೆಲವು ವರುಷಗಳ ಹಿಂದೆ ಕಾರಂತರು ಗಡ್ಡ ಬೆಳಸಿ ಬ್ರಹ್ಮಚರ್ಯದ ಬೆನ್ನು ಹತ್ತಿ ತಿರುಗುತ್ತಲಿದ್ದ ಕಾಲದಲ್ಲಿ ಒಮ್ಮೆ ವಿಜಾಪುರದ ಗೋಳಗುಮ್ಮಟದ ಮುಂದೆ ಕುಳಿತಿದ್ದರಂತೆ. ಹುಬ್ಬಳ್ಳಿಯ 'ಜ್ಞಾನಭಿಕ್ಷು' ಒಬ್ಬರು ದೇವರನ್ನು ತೋರಿಸೆಂದು ಕಂಡವರನ್ನು ಕೇಳುತ್ತಿದ್ದ ಕಾಲ. ಅವರು ಗೋಳಗುಮ್ಮಟದ ಹತ್ತಿರ ಕಾರಂತರನ್ನು ಕಂಡರು. ಒಳ್ಳೇ ಠೀವಿಯ ಈ ಗಡ್ಡದ ಸಾಧುವನ್ನು ನೋಡಿ ಇವರಿಗೂ ದೇವರನ್ನು ತೋರಿಸೆಂದು ಗಂಟುಬಿದ್ದರು. 'ದೇವ ರಿಲ್ಲದ ಜಗತ್ತಿನ' ಈ ಗಡ್ಡಮಾತ್ರದ ಸನ್ಯಾಸಿಗೆ ದಿಗಿಲಾಯಿತು. ತನ್ನ ಗಡ್ಡವೇ ಈ ಅನಾಹುತಕ್ಕೆ ಮೂಲವೆಂದರಿತು ಅಂದೇ ಗಡ್ಡ ತೆಗೆಸಿದರು. ಜ್ಞಾನ ಭಿಕ್ಷುವಿಗೆ ಸ್ನೇಹಭಿಕ್ಷೆ ನೀಡಿದರು.

ಈ ತಿರುಗಲತಿಪ್ಪ-ಜೀವದ ನೆಲೆ ಪುತ್ತೂರಿನ ಬಾಲವನ. ೧೯೩೫ ರಲ್ಲಿ ಪುತ್ತೂರಿಗೆ ಹೋಗಿದ್ದೆ. ಆಗ ಬಾಲವನ ಕಟ್ಟುತ್ತಿದ್ದರು. ಕಾರಂತರು ಊರಲ್ಲಿದ್ದಿಲ್ಲ. ಎರಡು ದಿನದಲ್ಲಿ ಬರುತ್ತಾರೆಂದು ತಿಳಿದೆ. ಧರ್ಮಸ್ಥಳದ ಕಡೆಗೆ ಎರಡು ದಿನ ತಿರುಗಾಡಿಕೊಂಡು ಬಂದರಾಯಿತೆಂದು ಹೊರಟೆ. ನಾನು

ಬರುವಾಗ ನಾಲ್ಕು ದಿನವಾಗಿತ್ತು. ಕಾರಂತರು ಎರಡು ದಿನಕ್ಕೇ ಬಂದುಬಿಟ್ಟಿದ್ದರು. ಅವರು ಬರುತ್ತೇನೆಂದ ದಿನ ಬರುತ್ತಾರೆ; ಹೋಗುತ್ತೇನೆಂದ ದಿನ ಹೊರಡುತ್ತಾರೆ. ಅವರ ದಾರಿಯಲ್ಲಿ ಯಾವ ಗ್ರಹಗಳೂ ಅಡ್ಡ ಬರುವುದಿಲ್ಲ. ಆರು ತಿಂಗಳಿನ ಮುಂಗಡ ಪ್ರವಾಸಪತ್ರಿಕೆ ಸಿದ್ಧವಾಗಿರುತ್ತದೆ. ಅವರದು, ಆದರೆ ಅವರು ಪುತ್ತೂರಿನಲ್ಲಿದ್ದರೆ ಮಂಗಳೂರಿನಲ್ಲಿದ್ದಂತೆ; ಮಂಗಳೂರಿನಲ್ಲಿದ್ದರೆ ಪುತ್ತೂರಿನಲ್ಲಿದ್ದಂತೆ. ಮಧ್ಯದಲ್ಲಿ ಬರೇ ಮೂವತ್ತಾರು ಮೈಲು ಅಂತರ; ಅಷ್ಟೇ. ಇವರ ಕೈಯಲ್ಲಿಯ ಗಡಿಯಾರಕ್ಕೆ ಸರಿಯಾಗಿ ಇವರ ಕಾಲಂ ಓಡುತ್ತವೆ.

ಬಾಲವನ ಕಟ್ಟುತ್ತಿದ್ದರೆಂದೆನಲ್ಲ— ಅದರ ಬಾವಿಗೆ ಮೊದಲು ಸವಳು ಸೆಲೆ ಹತ್ತಿತ್ತು. ಕಾರಂತರು ಸ್ವಲ್ಪ ಸಕ್ಕರೆ ಬೆರಸಿ ಕುಡಿದರಾಯಿತೆಂದರು. ಆಗ ರೇಶನ್ ಕಾಲವಲ್ಲ. ಆದರೂ 'ಸಕ್ಕರೆ ನೀರಿಗೆ ಹೊಯ್ದರೆ ಹೇಗೆ? ಎಂದೆ. 'ನೀರು ಉಪ್ಪಾದರೆ ಹೇಗೆ' ಎಂದರವರು. ಮತ್ತೊಂದು ಸಲ ಹೋಗುವಾಗ ನೀರು ಸೀಯಾಗಿತ್ತು. ಈ ಪ್ರಾಣ ಸಕ್ಕರೆ ಚೀಲ ಸುರುವಿಸಿರ ಬೇಕು— ಎಂದುಕೊಂಡೆ.

ಕಾರಂತರು ಪ್ರಯೋಗಿಸದ ವಿದ್ಯೆಯೇ ಇಲ್ಲ. ಸಿನೆಮಾ ಮಾಡಿದರು. ಅದಿನ್ನೂ ಇವರ ಮನೆಯ ಮೂಲೆಯಲ್ಲಿ ಬಿದ್ದಿದೆ. ಬಾಲವನ ಮೊದಲು ಮಕ್ಕಳ ಶಾಲೆಗೆಂದು ಕಟ್ಟಿದರು. ಒಂದು ಆಟದ ಬಯಲು: ಒಂದು ರಂಗ ಸ್ಥಳ. ಒಂದು ಪ್ರಾಣಿ ಸಂಗ್ರಹಾಲಯ (ಝೂ) ವೂ ಇತ್ತು. ಹಾವು ಸಾಕಿದ್ದರು; ಪಕ್ಷಿಗಳು ಹಲವು; ಕೋತಿಗಳು ಕೆಲವು. ಒಂದು ಆಟದ ರೈಲು ಇತ್ತು. ಕೆಂಪು ಅಳಿಲೊಂದನ್ನು ಹೆಗಲಮೇಲೆ ಕೂರಿಸಿಕೊಂಡು ಮಂಗಳೂರಿಗೆ ಹೋಗುತ್ತಿದ್ದರಂತೆ. ಮಕ್ಕಳ ಮನೋಭಾವವನ್ನು ಅರಳಿಸುವ ಎಲ್ಲ ಸನ್ನಾಹ ಮಾಡಿದ್ದರು. ಬಾಲವನ ನಿಂತಿತು. ಕಾರಂತರ ಈ ಆಸೆ ಪ್ರಯೋಗದಲ್ಲಿಯೇ ಕಮರಿತು.

ಇದಕ್ಕೂ ಮುಂಚೆ 'ಮಕ್ಕಳ ಕೂಟ' ನಡೆಸಿದರು. ಕನ್ನಡ ಜಿಲ್ಲೆಯ ಶಾಲೆಗಳನ್ನು ನೋಡಿ, ಒಂದು ರಂಗಸ್ಥಳದ ಏರ್ಪಾಟು ಇದ್ದೇ ಇರುತ್ತದೆ, ಶಾಲೆಗಳಲ್ಲಿ ಮಕ್ಕಳ ನಾಟಕ ನಡೆಸಲು ಕಾರಂತರೇ ಪ್ರೇರಕರಾದವರು— ಎನ್ನುತ್ತಾರೆ.

ರಾಯಚೂರು ಸಾಹಿತ್ಯ ಸಮ್ಮೇಳನದಲ್ಲಿ 'ಮುಕ್ತದ್ವಾರ' ನೃತ್ಯ ನಾಟಕದ ಪ್ರಯೋಗ ನಡೆಯಿತು. ಮುಂದೆ ಇವರ 'ನೃತ್ಯ ಕರ್ಣಾಟಕ' ಮಂಗಳೂರಿನಿಂದ ಮುಂಬಯಿ ವರೆಗೆ ಮಜಲು ಬೆಳೆಸಿತು. ವಿ.ಸೀ. ಅವರು ಕಾರಂತರನ್ನು ಕಾಲನಟನೆಂದು ಕರೆದು ಹಾಡಿದರು :

ಮೈಗೆ ಬಣ್ಣ ಬಳಿದುಕೊಂಡು, ಕಾಗದಗಳ ಕುಚ್ಚನುಟ್ಟು,
ಕಾಲಗೆಜ್ಜೆ ಝಣಝಣರೆನುತಿರೆ ಕುಣಿಯುತಾನೆ—
ಹೊಸತು ಕಾಲಪುರುಷನಿವನು ಕುಣಿಯುತಾನೆ

* * * * *

ಮೊದಲಿನಿಂದ ಕಾರಂತರು ಕನ್ನಡಲೋಕಕ್ಕೆ ತಮ್ಮ ಲೇಖನಿಯ ಮೂಲಕ ಪರಿಚಿತರು. ಇಂದಿಗೂ ಅದೇ ಅವರ ಬಾಳಬಂತ್ತಿ. ಅಂದು 'ವಸಂತ'ದಿಂದ ಇಂದು 'ಮುಗಿದ ಯುದ್ಧ'ದ ವರೆಗೆ ಅವರ ಲೇಖನಿ ವಜ್ರಕಠಿಣವಾಗಿ, ಕುಸುಮಕೋಮಲವಾಗಿ ಆಟವಾಡಿದೆ. ಕಾರಂತರ ಮಾತಿನ ವ್ಯಂಗ್ಯ ಅವರ ಕೃತಿಯಲ್ಲಿ ಯಥಾವತ್ತಾಗಿ ಇಳಿದು ನಾಳಿನ ಜಗತ್ತಿಗಾಗಿ ಉಳಿದಿದೆ. 'ದೇವ ದೂತರ'ನ್ನು ಬರೆದ ಕೈ 'ಮರಳಿ ಮಣ್ಣಿಗೆ'ಯನ್ನು ರಚಿಸಬಹುದೆಂದು ಯಾರು ನೆನಸಿದ್ದರು ? ಈ ವಿಶ್ವಸಂಚಾರಿಯ ಸಾಹಿತ್ಯ ಕ್ಷೇತ್ರವೆಂದರೆ ಒಂದು ಕನ್ನಡ ಜಿಲ್ಲೆ. ಆ ಜಿಲ್ಲೆಯ ಜನರ ಬಾಳನ್ನು— ಗೋಳನ್ನು, ಸೊಗಸನ್ನು- ಸೋಜಿಗವನ್ನು, ಅವರ ಆಟ–ಪಾಟಗಳನ್ನು, ಹಾಡು–ಕುಣಿತಗಳನ್ನು ಒಂದೂ ಬಿಡದೆ ವಿಧವಿಧವಾಗಿ ಚಿತ್ರಿಸಿದ್ದಾರೆ; ಇನ್ನೂ ಚಿತ್ರಿಸುತ್ತಲೇ ಇದ್ದಾರೆ ಚಿತ್ರವೆಂದರೆ ಶಬ್ದದಲ್ಲಿ ಜೀವನ ಚಿತ್ರಿಸಿದಂತೆ ರೇಖೆಯಲ್ಲೂ ಚಿತ್ರಿಸುತ್ತಾರೆ. ಛಾಯಾಚಿತ್ರವನ್ನೂ ಚೆನ್ನಾಗಿ ಬಲ್ಲರು. 'ಬಾಲ ಪ್ರಪಂಚ'ದ ಗೆಯ್ಮೆ ಅವರ ಸಾಹಸ ಜೀವನದ ಕೀರ್ತಿಸ್ತಂಭ. ವಿಷಯ ಸಂಗ್ರಹವೇನು? ಒಂದು ಸಾಹಿತ್ಯವೆ? ಒಂದು ವಿಜ್ಞಾನವೆ? ಕೈಗಾರಿಕೆಯೆ? ಶಿಲ್ಪವೆ? ಜನಾಂಗ ಚರಿತ್ರೆಯೆ? ಇನ್ನೇನು ಬೇಕು—ಅದೊಂದು ವಿಶ್ವಕೋಶ. ಅದರಲ್ಲಿಯ ಚಿತ್ರಸಂಗ್ರಹ ನೋಡಿ,— ಕಾರಂತರ ಕೃತಿಗಳೇ ಬಹುಮಟ್ಟಿಗೆ. ಬಾಲ ಪ್ರಪಂಚದ ವಿಷಯ ವಿಸ್ತಾರ— ಅವರ ಅಭ್ಯಾಸಬಲದ ಜತೆಗೆ ಸ್ವಪ್ರಯೋಗದಿಂದ ಅನುಭವಪಡೆದು ಬರೆದದ್ದೂ ಕೆಲಮಟ್ಟಿಗಿದೆ. ಬಾಲವನದ ಅವರ ಪ್ರಾಣಿಸಂಗ್ರಹಾಲಯ ಇಂಥ ಗರಡಿಗಳಲ್ಲೊಂದು.

ಈಗ ಅವರ ಮನೆಯಲ್ಲಿ ಎರಡು ನಾಯಿಗಳಿವೆ. ನಾಯಿಯೆಂದರೆ ಬೀದಿ ತಿರುಗುವ ಡೊಂಕುಬಾಲದ ಪ್ರಾಣಿಯೊಂದೇ ಲಕ್ಷ್ಯಕ್ಕೆ ಬರುತ್ತದೆ. ಆದರೆ ಕಾರಂತರ ನಾಯಿ ಹುಲಿಯಾಗಿವೆ. ಕಾರಂತರ ಕುಟುಂಬದ ಊಟದ ವೆಚ್ಚದಷ್ಟೇ ನಾಯಿಗಳ ಆಹಾರ ವೆಚ್ಚ. ನಾಯಿಗಾಗಿ ಎಮ್ಮೆ ಸಾಕಿದ್ದಾರೆ. ರೇಶನ್ ಅದೇ ಬಂದಾಗ ನಾಯಿಗೆ ರೇಶನ್ ಬೇಡಿದರು ಕಾರಂತರು. ರೇಶನ್ ಕೋಶದಲ್ಲಿ ನಾಯಿಗೆ ಕಾಳಿಲ್ಲ. ಕಾರಂತರು ಊರನ್ನೇ ಬಿಟ್ಟುಹೋಗುವಷ್ಟು ಮನಸ್ತಾಪ ಮಾಡಿಕೊಂಡರು. ನಾಯಿಗೆ ಅಕ್ಕಿ ಇಲ್ಲವೆಂದರೆ ಹೇಗೆ— ಎಂದಿತು ಅವರ ಮನಸ್ಸು. ಹೊತ್ತುಮುಳುಗಿ ಕಾರಂತರ ಮನೆಗೆ ಹೇಳದೆ ಕೇಳದೆ ಯಾರೂ ಹೋಗುವಂತಿಲ್ಲ ಆ ಅರಣ್ಯವಾಸಕ್ಕೆ ನಾಯಿಯೇ ಭದ್ರ ಕೋಟೆ; ಕಾವಲು.

ಕಾರಂತ ಒರಟು ಪ್ರಾಣಿಯೆಂದು ಕಂಡವರು ಹೇಳುವದುಂಟು. ಒಮ್ಮೆ ಒಬ್ಬ ಮಿತ್ರರು ತಮ್ಮ ಸಂಘದ ಸದಸ್ಯರ ಪರಿಚಯ ಮಾಡಿಕೊಡುತ್ತ "ಇವರು ನಮ್ಮ ಕೋಶಾಧ್ಯಕ್ಷರು" ಎಂದು ಒಬ್ಬರನ್ನು ತೋರಿಸಿದರು. "ಏನು ಶೋಕಾಧ್ಯಕ್ಷರೇ" ಎಂದರು ಕಾರಂತರು. ಇವರ ಪುಸ್ತಕ ಓದಿ ಇವರಲ್ಲಿ ಗೌರವವಿಟ್ಟ ಆ ಮಿತ್ರರ ಆತ್ಮಗೌರವ ಕೆಣಕಿತು. ಅವರು ಇಂದಿಗೂ 'ಕಾರಂತರೆಂದರೆ ನಯವರಿಯದ ಪ್ರಾಣಿ' ಎನ್ನುತ್ತಾರೆ. ಮೇಲು ನೋಟಕ್ಕೆ, ಬಾಯಿಮಾತಿಗೆ ಅವರು ಒರಟೇ. ಹಲಸಂಗಿಯ ಮಿತ್ರರಿಗೆ ಹೊಲಸಂಗಿ ಯವರೆನ್ನುತ್ತಾರೆ ಕಾರಂತರು. ಇವರ ಇರುವಿಕೆ ಹೇಗೋ ಹಾಗೆ ಮಾತಿನಲ್ಲೂ ಆಡಂಬರವಿಲ್ಲ; ಅಲಂಕಾರವಿಲ್ಲ. ಯಾವಾಗಲೂ ವಕ್ರಮಾತು. ಮಾತಿನಲ್ಲಿ ಮಾರ್ದವವಿಲ್ಲವೆಂದಾಕ್ಷಣಕ್ಕೆ ಹೃದಯ ಪರೀಕ್ಷೆಯಾಗಲಿಲ್ಲ. ಬೆಣ್ಣೆ ತುಂಬಿದ ಮಡಿಕೆ ಕಠಿಣವಾಗಿರಬಹುದು. ಆದಕ್ಕೆ ಬಿಸಿಲು ತಾಕಿದರೆ ಒಳಗಿನ ಬೆಣ್ಣೆ ಕರಗದಿರುತ್ತದೆಯೆ ? ಕಾರಂತರು ಕಲಾವಿದರೆನ್ನುತ್ತೀರಿ. ಇರುವಿಕೆ ಯಲ್ಲಿ ನಯ ಬೇಡವೇ ಎನ್ನಬಹುದು. ನಯ ವಿನಯದ ಪ್ರದರ್ಶನವೇ ಒರಟು ಲಕ್ಷಣವೆಂಬ ಸಿದ್ಧಾಂತ ಕಾರಂತರದು. ಸಂಸ್ಕಾರವುಳ್ಳ ಹೃದಯ, ಕರಗುವ ಮನಸ್ಸಿಗೆ ನಯ-ವಿನಯದ ಆವರಣವೇಕೆ? ಬಾಳಿನುದ್ದಕ್ಕೂ ಕಷ್ಟ ನಿಷ್ಠುರಗಳನ್ನೆದುರಿಸಿ, ಕಲ್ಲು-ಮುಳ್ಳಿನಲ್ಲೇ ನಡೆದು ದೇಹಕ್ಕೆ ಒರಟುತನ ಕಲಿಸಿದ್ದಾರೆ ಕಾರಂತರು. ಮಾನವ ಜೀವನಕ್ಕೆ ಅನಿವಾರ್ಯವಾಗಿ, ಆಕಸ್ಮಿಕವಾಗಿ,

ಉದ್ದೇಶಪೂರ್ವಕವಾಗಿ, ಮನಸ್ಸಿನ ಚಿಲ್ಲರೆತನ,—ತೋರಿಕೆಯ ಔದಾರ್ಯ ದಿಂದಾಗಿ ನಡೆಯುವ ಅನ್ಯಾಯಂಗಳನ್ನು ಕಂಡುಂಡು, ಕೊರಗಿ ಮರುಗಿದ್ದಾರೆ. ಸುಖ, ದುಃಖ ಓದಿನಿಂದ, ನೋಟದಿಂದ ಸಿಕ್ಕುವ ವಸ್ತುಗಳಲ್ಲ. ಕೊಂಡೇನೆಂದರೆ ಪೇಟೆಯ ಮಾಲಲ್ಲ. ಸ್ವಂತವಾಗಿ ಅನುಭವಿಸಿ ಪಡೆದ ಅನುಭವ ಎಷ್ಟು ಕಟುವಾದರೂ ಅದು ಮಧುರವೇ. ಕಷ್ಟ ಎಷ್ಟಾದರೂ ಅದು ಸುಖದ ಹೆದ್ದಾರಿಯೇ. ಸುಖದ ಸುತ್ತಿನ ದಾರಿ ಬಳಸಿ ಹೋಗುವದು ಧೀರತೆಯ ಲಕ್ಷಣವಲ್ಲ. ಬಿಟ್ಟ ಬಾಣ ಸುತ್ತಿ ಹೋದೀತೇನು? ಅದಕ್ಕೆ ಕೂರಲಗಿನ ರಕ್ಷಣೆಯಿರುವಂತೆ ಕಾರಂತರಿಗೆ ಕಷ್ಟ ಸಹಿಷ್ಣುತೆ ಅಭ್ಯಾಸವಾಗಿಹೋಗಿದೆ. ಅವರದು ಕೆಚ್ಚಿನ ಹೃದಯ. ಕಾಸಿ ಪರಿಶುದ್ಧಗೊಂಡ ಕಬ್ಬಿಣದ ಕದಿರು ತೆಗೆದಂತೆ ಅವರ ಮಾತು–ಕೃತಿ.

"ಜೀವನಕ್ಕೆ ಎರಡು ಮುಖ; ಒಂದು ಸುಖ, ಒಂದು ದುಃಖ !"* ಈ ಅನುಭವ ಅವರ ಸಾಹಿತ್ಯಸಿದ್ಧಿಗೆ ಕೈಮರ (ತೋರುಕಂಬ) ವಾಯಿತು. ಎಂತಲೇ ಅವರ ಕಾದಂಬರಿಯ ಸ್ತ್ರೀ ಪಾತ್ರ ಶಿಲ್ಪ ಆದರ್ಶಪ್ರಾಯವಾಯಿತು. 'ಮರಳಿ ಮಣ್ಣಿಗೆ'ಯ ಪಾರೋತಿ, ಸರಸೋತಿ, ನಾಗವೇಣಿ—ಕಾಲದ ಸೆಳತಕ್ಕೆ ಸೋಲದೆ ಪುಟವಿಟ್ಟ ಚಿನ್ನದಂತೆ ಸಹನೆಯಲ್ಲಿ ಸುಟ್ಟು ತಾಳ್ಮೆಯ ಒಪ್ಪಗೊಂಡು ಮಾದರಿಯ ಹೆಣ್ಣು ಬಾಳ ಮೆರೆದರು.

* * * * *

"ಮಂಗಳೂರು ಬೆಂಗಳೂರು ಧಾರವಾಡ ಕಾರವಾರ
ಕನ್ನಡಿಗರ ತಂಡಗಳನು ಕರಸುತಾನೆ—
ದಂಡತೆತ್ತು ನಾಳೆಯೊಸಗೆ ಬೀರುತಾನೆ." —ವಿ.ಸೀ.

ದಸರಾ ಉತ್ಸವ ಪುತ್ತೂರಲ್ಲಿ ಕೆಲವು ವರುಷ ನಡೆಯಿತು; ಅದೊಂದು ಅಪೂರ್ವ ಜ್ಞಾನಸತ್ರವಾಗಿತ್ತು. ಕನ್ನಡನಾಡಿನ 'ಮಾತುಬಲ್ಲ'ವರಿಗೆಲ್ಲ ಆಮಂತ್ರಣ ಬರುತ್ತಿತ್ತು. ಒಂಬತ್ತು ದಿನ ಉಪನ್ಯಾಸಗಳು ಬಂದ ಜನರಿಂದ. ದಿನಾಲೂ ಮನರಂಜನೆ ಕಾರಂತರಿಂದ. ಪ್ರತಿವರುಷ ಹೊಸ ಪ್ರಯೋಗ. ಒಮ್ಮೆ ಮಾತಿನ ನಾಟಕಗಳಿಂದ ರಂಜಿಸಿದರು. ಮತ್ತೊಮ್ಮೆ ಗೀತನಾಟಕದ

---

* ಪೇಜಾವರ ಸದಾಶಿವರಾಯರ ಇಟಲಿಯ ನಾಟ್ಯಗೀತ.

ಆಲಾಪನೆ. ವಿವಿಧ ಹಾವಭಾವಗಳಿಂದ ನೃತ್ಯನಾಟಕ, ಛಾಯಾನಾಟಕ (Shadow play)ಗಳು ರೂಪುಗೊಂಡವು. ದಕ್ಷಿಣ ಕನ್ನಡದ ಪರಂಪರೆಯ ಯಕ್ಷಗಾನಗಳೂ ಪ್ರದರ್ಶಿತವಾಗುತ್ತಿದ್ದವು. ಆಗ ಸುತ್ತಲೂ 'ಈ ಸಲ ಪುತ್ತೂರಲ್ಲಿ ಏನು ಹೊಸದು?' ಎಂಬ ಸೊಲ್ಲು ಕೇಳುತ್ತಿತ್ತು. ಉಪನ್ಯಾಸಕ್ಕೆ ಬಂದ ಗೆಳೆಯರನ್ನು ಒಂಬತ್ತು ದಿನ ಸತ್ಕರಿಸಿ, ಉತ್ಸವ ಮುಗಿದಮೇಲೆ ಜಿಲ್ಲೆಯ ಸುಂದರ ಸ್ಥಳಗಳಿಗೆ ಭೆಟ್ಟಿಮಾಡಿಸುತ್ತಿದ್ದರು. ಸಾಹಿತ್ಯಸಮ್ಮೇಳನ ದಷ್ಟೇ—ಅದಕ್ಕೂ ಹೆಚ್ಚು ಆತ್ಮೀಯ ವಾತಾವರಣದಲ್ಲಿ ನಡೆಯುತ್ತಿದ್ದ ಈ ನಾಡಹಬ್ಬ ಕಾರಂತರ ಉತ್ಸಾಹದ, ಸಾಹಿತ್ಯ ಕಲಾಪ್ರಿಯತೆಯ ಸ್ನೇಹಮಯ ವಾದ ಜೀವನದ ನಿದರ್ಶನವಾಗಿತ್ತು. ಯುದ್ಧ ನಿಂತಿತು; ಮತ್ತೆ ಪುತ್ತೂರಿ ನಲ್ಲಿ ಈ ಹಬ್ಬದ ಪರಂಪರೆ ನಡೆಯಬಹುದೇ ?

ಮಕ್ಕಳೆಂದರೆ ಕಾರಂತರಿಗೆ ಪ್ರಾಣ. ಅದಕ್ಕೆ ನಿದರ್ಶನ ಅವರ ಮನೆ 'ಬಾಲವನ'ವಾಗಿರುವುದು. ದಾರಿಯಲ್ಲಿ ಆಡುವ ಮಗುವನ್ನು ಕಂಡು ಕಾರಂತರು ಎತ್ತಿ ಮುದ್ದಾಡುತ್ತಾರೆ; ಬಾಚಿ ತಬ್ಬಿಕೊಳ್ಳುತ್ತಾರೆ. ಬಾಲಭಾಷೆ ಯಲ್ಲಿ ಮಕ್ಕಳೊಡನೆ ತೊದಲು ನುಡಿಯುತ್ತಾರೆ. ಮಕ್ಕಳು ಅನಾರೋಗ್ಯ ದಿಂದಿದ್ದರೆ ಕಾರಂತರು ಬಹಳ ಬೇಸರಪಡುತ್ತಾರೆ; ಉಪಾಯ ಸೂಚಿಸುತ್ತಾರೆ. ಮಕ್ಕಳ ಆಹಾರ–ವಿಹಾರದ ಬಗ್ಗೆ, ಆಟ–ನೋಟಗಳ ಬಗ್ಗೆ ತುಂಬ ಮಾತ ನಾಡುತ್ತಾರೆ. ಮಕ್ಕಳು ನಕ್ಕುನಲಿಯಬೇಕು; ಕಾರಂತರು ಹಿಗ್ಗಿ ಹಾಡುತ್ತಾರೆ.

ನನ್ನ ಗೆಳೆಯನೊಬ್ಬ ತನ್ನ ಮಗನನ್ನು ತುಂಬ ದಕ್ಷತೆಯಿಂದ, ಅಚ್ಚು ಮೆಚ್ಚಿನಿಂದ ನೋಡಿಕೊಳ್ಳುತ್ತಾನೆ. ನನ್ನ ಮಗು ಕಾಯಿಲೆ ಬಿದ್ದುದನ್ನು ಹೇಳುತ್ತ ಆ ಗೆಳೆಯನ ಮಗು ತಂದೆಯ ರಕ್ಷಣೆಯಲ್ಲಿ ಚೆನ್ನಾಗಿದೆ ಎಂದೆ, ಕಾರಂತರ ಹತ್ತಿರ. ಆ ಗೆಳೆಯ ಕಾರಂತರಿಗೂ ಹತ್ತಿರದವ. ಅವರಿಗೂ ಅವನ ಮನೆಯ ವಿಷಯ ಗೊತ್ತು. 'ಅಷ್ಟು ದಕ್ಷತೆ ಸಾಲದು' ಎಂದರು ಕಾರಂತರು.

ಇವರಿಗೆ ಒಂದು ಗಂಡು; ಒಂದು ಹೆಣ್ಣು ಸಂತಾನ. ಚೊಚ್ಚಿಲ ಮಗನಿಗೆ '**ಹರ್ಷ**' ಎಂದು ಹೆಸರಿಸಿದ್ದಾರೆ. ಮಕ್ಕಳಲ್ಲಿ ಹರ್ಷ ವರ್ಧಿಸ

ಲೆಂಬ ಸಂಕೇತವೇ ಇದು. ಇವರ ಬಾಲವನ ನಡೆದು ಬಂದಿದ್ದರೆ 'ಹರ್ಷ ಚಿತ್ತ ಪೀಳಿಗೆ'ಯನ್ನು ನಾವು ನಿರೀಕ್ಷಿಸಬಹುದಿತ್ತು.

ಒಮ್ಮೆ ಮಾತನಾಡುತ್ತ ಕುಳಿತಿದ್ದೆವು. ೧೯೪೨ರ ಘಟನೆಗಳಲ್ಲಿ ಜೇಲಿಗೆ ಹೋದವರ ಒಂದು ಕುಟುಂಬ ಬಹಳ ಕಷ್ಟದಲ್ಲಿದೆಯೆಂದು, ಮಕ್ಕಳ ಪಾಲನೆ ಅಸಾಧ್ಯವಾಗಿ ಮಕ್ಕಳ ಮಾರಾಟ ನಡೆದಿದೆಯೆಂದು, ಒಂದು ನಿಧಿಯ ಪ್ರಯತ್ನದಲ್ಲಿದ್ದ ದೇಶಭಕ್ತ ಹಿರಿಯರೊಬ್ಬರು 'ನಿನ್ನ ಪಾಲಿನ ಸಹಾಯ ಕೊಡು' ಎಂದು ನನ್ನನ್ನು ಕೇಳಿದರು. ನಾನಿನ್ನೂ ವಿಚಾರದಲ್ಲಿದ್ದೆ. 'ಮಕ್ಕಳ ಮಾರಾಟ!' ಇದನ್ನು ಕೇಳದಾದರು ಕಾರಂತರು. ಕಿಸೆಗೆ ಕೈಹಾಕಿ ನಿಲುಕಿದ ಒಂದು ದೊಡ್ಡ ನೋಟನ್ನು ತೆಗೆದುಕೊಟ್ಟರು.

* * * * *

"ಶಿವರಾಮ ಕಾರಂತ ಕಡಲತೀರದ ನಮ್ಮ
ಭಾರ್ಗವ ತಪೋವನದ ಕಲಿ, ಸರ್ಪ ದಮನ,
ಹಿಂಸ್ರಜೀವಿಗಳಾರು ಈ ನಾಡಿನಲಿ ತಮ್ಮ
ಕ್ಷುದ್ರತೆಯ ತೆರೆವರವರಿಗೆ ನೀನು ಯಮನ
ಮೊಗವ ತೋರುತಲಿರುವೆ................"

'ಶ್ರೀನಿವಾಸ'

ಕಾರಂತರು ವ್ಯಾಪಾರಚತುರರೆನ್ನುವದಕ್ಕಿಂತ ವ್ಯವಹಾರನಿಷ್ಠರೆನ್ನ ಬಹುದು. ಅವರು ಕೈಕೊಂಡ ಕೆಲಸಗಳೆಷ್ಟೋ ಇನ್ನೂ ಮುಗಿಯದಿವೆ. ಅನೇಕ ಕೆಲಸಗಳ ರುಚಿ ನೋಡಿಬಿಟ್ಟಿದ್ದಾರೆ. ಇವರ ಕಾರ್ಯನಿಷ್ಠೆ ಮಾತ್ರ ಸದಾ ಜಾಗ್ರತವಾಗಿದೆ. ಯುದ್ಧಾರಂಭದಲ್ಲಿ ಮಕ್ಕಳಾಟಿಕೆಯ ಕಾರಖಾನೆ ತೆಗೆದರು. ಇವರದು ಕೇವಲ ಪೇಟೆಯ ರುಚಿಯ ಮಾಲನ್ನು ಒದಗಿಸುವ ತಯಾರಿಕೆಯಲ್ಲ. ಜನರ ಅಭಿರುಚಿಯನ್ನು ತಿದ್ದಹೊರಟ ಕಲಾಪೂರ್ಣ ದೃಷ್ಟಿಯ ತಯಾರಿಕೆ. ಅದು ಅಗ್ಗದರಲ್ಲಿ ಹೇಗೆ ನಡೆದೀತು ? ಯುದ್ಧ ಕಾಲದಲ್ಲಿ ಅದು ಬಾಳಿ ಒದುಕುವುದು ಅಸಾಧ್ಯವೆನಿಸಿತು; ನಿಲ್ಲಿಸಿಬಿಟ್ಟರು.

ಈ ಹತ್ತು ಬಗೆಯ ವ್ಯವಹಾರ ನಡೆಸಿದ ಕಾರಂತರು ಅನೇಕ ಬಗೆಯ ವ್ಯಾಪಾರದ ಏಟು ತಿಂದಿದ್ದಾರೆ. ಎಂತಲೇ ತಾತ್ಪೂರ್ತಿಕ ವ್ಯವಸ್ಥೆಯೇ ಇರಲಿ, ಯಾವ ಚಿಕ್ಕಪುಟ್ಟ ವ್ಯವಹಾರವನ್ನೂ ಶಾಸನಬದ್ಧವಾಗಿ ಮಾಡು

ತ್ತಾರೆ. ಸ್ನೇಹದಲ್ಲಿ ಮೃದುವಾಗಿ ಕಾಣುವ ಕಾರಂತರು ವ್ಯವಹಾರದಲ್ಲಿ ನ್ಯಾಯನಿಷ್ಠುರವಾಗಿಯೇ ವರ್ತಿಸುತ್ತಾರೆ. ಎಂತಲೇ ಇವರು ಕಾರ್ಯಸಾಧನೆಯ ವ್ಯಾಪಾರ ಚತುರರಲ್ಲ—ಕಾರ್ಯನಿಷ್ಠೆಯ ವ್ಯವಹಾರ ಕುಶಲಿಯೆನ್ನಬಹುದು.

ಮೂಢ ರೂಢಿಗಳನ್ನು, ಮಠಗಳಲ್ಲಿಯ ಅನ್ಯಾಯಗಳನ್ನು, ಸಮಾಜದ ಮುಂದಾಳುಗಳ ಅಧಿಕಾರಲಾಲಸೆಯನ್ನು ತಮ್ಮ ಸಾಹಿತ್ಯರೂಪದಲ್ಲಿ ಡೊಂಕಾಗಿ, ವ್ಯಂಗ್ಯವಾಗಿ, ಕಟುವಾಗಿ ಟೀಕಿಸಿದ ಕಾರಂತರು ಹಲವರ ಕಣ್ಣಿಗೆ ಅಪಥ್ಯವಾಗಿದ್ದರು. ಇವರು ಮದುವೆಯಾದಾಗ ಮದುವೆಯ ವಿಜಾತಿ ಸಂಬಂಧವನ್ನು ಒಂದು ಪತ್ರಿಕೆ ಟೀಕಿಸಿತು. ಕಾರಂತರು ಈ ಸಲ ಸಾಹಿತ್ಯದ ಅಸ್ತ್ರದಿಂದ ತಿವಿಯದೆ ಮಾನಹಾನಿಯೆಂದು ಕೋರ್ಟಿನ ಕಟ್ಟೆ ಹತ್ತಿದರು. ಪತ್ರಿಕಾಕರ್ತರು ಶಾಸನ ಹೊಂದಬೇಕಾಯಿತು.

* * * * *

ಕಾರಂತರ ಅನೇಕ ಸಾಹಸ ಪ್ರಯೋಗಗಳಲ್ಲಿ ಅವರ ಮದುವೆಯೂ ಒಂದು. ತಮ್ಮ ಹೋರಾಟದ ಜೀವಕ್ಕೆ ವಿಶ್ರಾಂತಿಯ ಆವಶ್ಯಕತೆಯಾದಾಗ ಮದುವೆಯಾದರು. ಮದುವೆಯಾದ ಹೊಸದರಲ್ಲಿ ಮಡದಿಯೊಡನೆ ನಾಡ ಸುತ್ತಿದರು. ಒಂದು ಮೋಟಾರ್ ಕಾರು ಕೊಂಡು ತಿರುಗಾಡಿ ಬಂದರು. ಕಾರು ನಾದುರಸ್ತ್ ಆಯಿತು. ಅನೇಕ ಅವಯವ ಕಳೆದುಕೊಂಡು ಇವರ ಮದುವೆಯ ಸವಿನೆನಪಾಗಿ ಬಾಲವನದ ಬಾಗಿಲಲ್ಲಿ ನಾಲ್ಕುಗಾಲಿಯ ಮೇಲೆ ಅದು ಮೊನ್ನೆ ಮೊನ್ನೆಯವರೆಗೂ ನಿಂತಿತ್ತು.

ಶ್ರೀಮತಿ ಲೀಲಾ ಕಾರಂತರು ಶ್ರೀ ಶಿವರಾಮ ಕಾರಂತರ ಕಲಾಜೀವನದ ನೆರವಿಗೆ, ಇವರ ಸಾಹಸ ಜೀವನದ ನೆಳಲಾಗಿ ಬಂದ ಗೆಳತಿ. ಈ ವಿಶ್ವ ವ್ಯಾಪಿ ವಿಚಾರದ ಮಹಾ ಪುರುಷನನ್ನು ನೋಡಿಕೊಳ್ಳುವವರೊಬ್ಬರು ಬೇಕೆಂದೆನಿಸಿದ ಸಮಯದಲ್ಲಿ ಜೀವನಸಂಗಾತಿಯಾಗಿ ಬಂದ ಶ್ರೀಮತಿ ಲೀಲಾ ಕಾರಂತರು ಶ್ರೀ ಕಾರಂತರ ಓಡುವ ರಥದ ಇನ್ನೊಂದು ಗಾಲಿಯಾಗಿದ್ದಾರೆ. ಇವರು ಕಾರಂತರ ಜತೆಗೆ ನಾಟ್ಯವಾಡಿದ್ದಾರೆ. ಒಳ್ಳೆಯ ಲೇಖಕಿ. ಇವರೇ ಬರೆದ ಕಾರಂತರ ವ್ಯಕ್ತಿಚಿತ್ರ ('ಕನ್ನಡ ನುಡಿ'ಯಲ್ಲಿ 'ನಾ ಕಂಡ ಕಾರಂತ') ನೋಡಿದರೆ ಪತಿಯನ್ನು ಕಂಡ ಈ ಸತಿಯ ಕಲ್ಪನೆ ಬರುತ್ತದೆ.

೧೯೪೪ರ ಡಿಸೆಂಬರಿನಲ್ಲಿ ಧಾರವಾಡದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು ನಡೆಯಿತಷ್ಟೆ. ಸಮ್ಮೇಳನ ಅವಸರದಲ್ಲಿ ಕರೆಯಲಾಗಿತ್ತು. ಯಾರನ್ನು ಅಧ್ಯಕ್ಷರನ್ನಾಗಿ ಆರಿಸಬೇಕೆಂಬ ವಿಚಾರ ನಡೆದಾಗ ಕಾರಂತರ ಸ್ವಾರಿ ಧಾರವಾಡಕ್ಕೆ ದಯಮಾಡಿಸಿತ್ತು. ಅವರಲ್ಲಿ ಈ ಪ್ರಸ್ತಾಪ ಮಾಡಿದಾಗ ಆವರು ಒಬ್ಬರ ಹೆಸರು ಹೇಳಿ ಅವರನ್ನು ತುಂಬ ಶ್ಲಾಘಿಸಿದರು. “ಕಾರಂತರು ಒಂದು ವ್ಯಕ್ತಿಯನ್ನು ಹೀಗೆ ಹೊಗಳಿದ್ದನ್ನು ಅವರ ಇಷ್ಟು ದಿನದ ಸ್ನೇಹದಲ್ಲಿ ನಾನು ಕಂಡಿರಲಿಲ್ಲ. ಆದ್ದರಿಂದ ಕಾರಂತರು ಸೂಚಿಸಿದ ಈ ವ್ಯಕ್ತಿ ಯಥಾಯೋಗ್ಯವಾದ ವ್ಯಕ್ತಿಯೆಂದು ನಾವು ಗೊತ್ತುವಳಿ ಸ್ವೀಕರಿಸಿ, ಶ್ರೀ ಜಿನರಾಜ ಹೆಗಡೆಯವರಿಗೆ ಆಮಂತ್ರಣ ಕಳಿಸಿದೆವು” ಎಂದು ಪ್ರೊ. ಜಾಗಿರದಾರರು ಸಮ್ಮೇಳನದ ಸಮಾರೋಪ ಭಾಷಣದಲ್ಲಿ ಹೇಳಿದರು. ಶ್ರೀ ಜಿನರಾಜರ ಕಣ್ಣಂಚಿನಲ್ಲಿ ನೀರು ತುದುಕಳಿಸಿತು. ಕಾರಂತರಿಂದ ಒಳ್ಳೆಯ ಮಾತು ಆಡಿಸಿಕೊಳ್ಳಲು ಯೋಗ್ಯತೆ ಬೇಕು. ಅದಿಲ್ಲದ ದೈವವನ್ನೂ ಭಾಗ್ಯವನ್ನೂ ಅವರು ಒಪ್ಪುವದಿಲ್ಲ.

(೧೯೪೫)

೨*

ಶ್ರೀ ಶಿವರಾಮ ಕಾರಂತರು ಈ ಸಲದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. ಈ ಮೊದಲು ಇಂಥ ಮೂವತ್ತಕ್ಕಿಂತ ಹೆಚ್ಚು ಜನ ಸಾಹಿತ್ಯಾಚಾರ್ಯರು (ಒಬ್ಬರೊಬ್ಬರು ಎರಡೆರಡು ಚಾನ್ಸ್ ಹೊಡೆದದ್ದರಿಂದ ಮೂವತ್ತಾರು ಅಲ್ಲ) ಈ ಗದ್ದುಗೆಯನ್ನೇರಿ ಇಳಿದಿದ್ದಾರೆ.

ಇವರಲ್ಲಿ ಇಂದು ಎಲ್ಲರು ಇಲ್ಲವಾಗಿದ್ದರೂ ಇಂಥ ಅಧ್ಯಕ್ಷರ ಪಡೆಯೊಂದು ಕನ್ನಡ ಸಾಹಿತ್ಯದ ಗೌರವರಕ್ಷೆಯಾಗಿ ನಿಂತಿದೆ.

---

* **ಶ್ರೀ ಕಾರಂತರು ಮೈಸೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಸಂದರ್ಭದಲ್ಲಿ (೧೯೫೫) ಬರೆದದ್ದು.**

ಸಾಧಾರಣ ಅರ್ಧ ಶತಕದ ನಂತರದ 'ತರುಣ' ಪರಿಣತರೇ ಈ ಗದ್ದುಗೆ ಯನ್ನೇರಲು ಪಾತ್ರರಾಗಿದ್ದಾರೆ. ಆಚಾರ್ಯ ಪಟ್ಟ ಅದಕ್ಕೂ ಮೊದಲು ನಮ್ಮ ನಾಡಿನಲ್ಲಿ ಕಷ್ಟಸಾಧ್ಯ.

ಶ್ರೀ ಕಾರಂತರು ಐವತ್ತರ ಮನೆ ದಾಟಿದ್ದರೂ ತಮ್ಮ ಬರಹದ ಕೆಚ್ಚಿ ನಿಂದಾಗಿ ತರುಣರಾಗಿಯೇ ಕಾಣುತ್ತಾರೆ. ಇವರ ವಿಪುಲ ಕೃತಿಗಳ ಅಭ್ಯಾಸ ದಿಂದ ಯಾರಾದರೂ ಮುಪ್ಪನ್ನಬಹುದಾದರೂ ಬರೆದ ಕಾರಂತರಿಗೆ, ಅವರು ಬರೆದ ಬರಹಕ್ಕೆ ಮುಪ್ಪು ಬಂದಂತೆ ಕಾಣುವದಿಲ್ಲ.

ಪಕ್ವವಾಗುವದಕ್ಕೂ ವಯೋಮಾನಕ್ಕೂ ಸಂಬಂಧವಿದ್ದಂತೆ ಶ್ರೇಯೋ ಮಾನದ ಸಂದರ್ಭ ಅನಿವಾರ್ಯವಲ್ಲ.

ಅಂತೇ ಬರೆವ ಎಲ್ಲ ಮುದುಕರೂ ಅಧ್ಯಕ್ಷರಾಗುವಂತಿಲ್ಲ. ಇಂಥವರ ಸಂಖ್ಯೆ ಬೆಳೆದು ನಿಂತಿರುವಂತೆ ಸಮ್ಮೇಳನಗಳ ನಡುವಿನ ಅಂತರ ಬೆಳೆಯುತ್ತಿದೆ.

ಕುಮಟೆಯ ಸಮ್ಮೇಳನ ನಡೆದು ಒಂದೂವರೆ ವರುಷವಾಗಿ ಹೋಯಿತು. ಈ ಅರೆ–ಕೊರೆಯಲ್ಲಿ ಇನ್ನೊಬ್ಬ ಅಧ್ಯಕ್ಷರ ಅರ್ಧ ಫಾಲು ಹೋಯಿತು.

ಇದನ್ನು ತುಂಬಿಕೊಡಲು ಒಂದು ಯೋಜನೆ ಮಾಡಿ, ಅಧ್ಯಕ್ಷರಾಗಲು ಅರ್ಹರಾದ ಪ್ರಾಯದವರನ್ನು ಕರೆದು, ಒಂದು ಅಧ್ಯಕ್ಷ ಸಮ್ಮೇಳನವನ್ನೇ ನಡೆಸಿ ಬಾಕಿಯನ್ನು ತೀರಿಸಿ ಬಿಡುವುದು ಅನಪೇಕ್ಷಣೀಯವೇನಲ್ಲ.

ಮತ್ತೆ ಹೊಸ ಅಧ್ಯಕ್ಷರಿಗೆ ಕೊರತೆ ಬೀಳುವ ಭಯವಿಲ್ಲ. ಮಣವೇಕೆ, ಟನ್ನಿನ ತೂಕದ ಸಾಹಿತ್ಯ ನಿರ್ಮಾಣ 'ಚಿತ್ತ–ರಂಜನ' ಕಾರಖಾನೆಯಲ್ಲಿ ತಯಾರಾಗುತ್ತಲೇ ಇದೆ.

* * * * *

ಅಧ್ಯಕ್ಷರನ್ನು ಮಾಡಿದ ಮೇಲೆ ಸಮ್ಮೇಳನ ನಡೆಸುವವರ ಕೆಲಸ ಕೇವಲ ಅತಿಥಿ ಸತ್ಕಾರ.

ಆದ ಅಧ್ಯಕ್ಷರ ಕೆಲಸವೆಂದರೆ ಒಂದು ಭಾರಿ ಆರಂಭ ಭಾಷಣ; ಅದೇ ಸಂಹಾರ ಭಾಷಣ. ಇನ್ನೊಂದು ಉಪಸಂಹಾರ !

ಮತ್ತೆ ಕೆಲವು ಚುಟುಕು ಚತುರೋಕ್ತಿಗಳು. ಮಧ್ಯೆ ಹಲವರ ಭಾಷಣಗಳಿಗೆ ಎಡೆಕೊಡುವುದು. ಶ್ರೋತೃಗಳ ಹೂಂಕಾರ, ಹೇಷಾರವಗಳಿಗೆ ಶಿಸ್ತಿನ ಮಂತ್ರ ಹಾಕಿ ನಿಯಂತ್ರಿಸುವುದು.

ಭಾಷಣಕಾರರ ಭಾಷಣ-ಬಾಲಗಳನ್ನು ಸಮಯಪ್ರಜ್ಞೆಯಿಂದ ಬೆಳೆಯಗೊಡದಿರುವುದು.

ಆಯಿತು !

ಅಧ್ಯಕ್ಷತೆಯೆಂದರೆ ಪರೋಪದೇಶಕ್ಕೆ ಮೂರು ದಿನದ ಲೈಸನ್ಸ್ ಇದ್ದಂತೆ.

ಯಾರಾರು ಏನೇನು ಮಾಡಬೇಕೆಂದು ಒಂದು ಪಟ್ಟಿ ಮಾಡಿ ಹಿಂದೆ ಮುಂದೆ ಹೂಮಾಲೆ ಹಾಕಿ ಬಾಣ ಬಿಡುವುದು.

ಈ ಮನ್ಮಥ ಶರ ಶಾರದೆಯ ಉಪಾಸಕರನ್ನು ಮೃದುವಾಗಿ ಗಾಸಿಗೊಳಿಸಲೇಬೇಕು.

* * * * *

ಆದರೆ ನಮಗೆ ತಿಳಿದಂತೆ ಶ್ರೀ ಕಾರಂತರಿಗೆ ಉಪದೇಶ ಮಾತ್ರೆಗಳ ಕೊರತೆಯಿದೆ.

ಹೂಗಳು ಅವರ ತೋಟದಲ್ಲಿದ್ದರೂ ಅವರ ಮನದಲ್ಲಿ, ಬಾಯಲ್ಲಿ ಹೂವಿನ ಸುಳಿವಿಲ್ಲ. ಪುಷ್ಪಗಳಿದ್ದಾವು; ಕಾರಂತರು 'ಪುಷ್ಪಾರ್ಚನೆ'ಯಲ್ಲಿ ಮಾತ್ರ ಪ್ರವೀಣರು.

ಅವರು ಅಧ್ಯಕ್ಷರಾಗದೆಯೂ ಈ ಪೂಜೆಯಲ್ಲಿ ಪರಿಣತರು. ಹೂಬಾಣಗಳು ತಾಗುವಲ್ಲಿ ತಾಗಿಯೂ ತಾಗದೆಯೂ ಇವರ ಎದೆಗೋ ಹೆದೆಗೋ ಬಂದು ಕೂಡುವುದುಂಟು.

ಆದರೂ ಇವರ ಬತ್ತಳಿಕೆ ಬರಿದಾಗುವುದಿಲ್ಲ.

ರಾಡಿಯ ಎರಚಾಟಕ್ಕಿಂತ ಈ ಪುಷ್ಪಕೇಳಿ ಒಳ್ಳೆಯದೇ ಅಲ್ಲವೇ ?

* * * * *

ಇಂಥ ಕಾರಂತರಿಗೆ ನಮ್ಮ ನಾಡಿನ ಮೂರು ಶೂನ್ಯಗಳು ಕಾಣುತ್ತಿವೆ; ಕಾಡುತ್ತಿವೆ.

ಒಂದು, ಹೃದಯಶೂನ್ಯತೆ. ಇನ್ನೊಂದು, ಬುದ್ಧಿಶೂನ್ಯತೆ... ಮತ್ತೊಂದು ಕ್ರಿಯಾಶೂನ್ಯತೆ.

ನಿಸರ್ಗದ ಸಂಪತ್ತು ಅವರಿಗೆ ಸಾಕಷ್ಟೆನಿಸಿದೆ. ಕನ್ನಡ ನಾಡಿನ ಕಾಡು ಅವರ ಅನೇಕ ಕಾದಂಬರಿಗಳಿಗೆ ಅನ್ನ ಕೊಟ್ಟಂತೆ,— ಶ್ರೀ ಕಾರಂತರು ಅದರಿಂದ ಅನ್ನ ಬೇಯಿಸಿಕೊಂಡಂತೆ—ಅದೇ ಕಾಡಿನಿಂದ ನಾಡಿನ ಸಂಪತ್ಸಮೃದ್ಧಿಯನ್ನು ಸಾಧಿಸಬಹುದು ಎಂದು ಎನ್ನುತ್ತಾರವರು.

ಆದರೆ ಆವರಿಸಿದ ಈ ಮೂರು ಶೂನ್ಯಗಳನ್ನು ಎತ್ತ ಕಳಿಸೋಣ? ಯಾರು ಕಳಿಸಬೇಕು ?

ಶೂನ್ಯದಿಂದಲೇ ಎಲ್ಲಾ—ಎನ್ನುವ ನಂಬುಗೆ ನಮ್ಮದು.

ಶೂನ್ಯದಲ್ಲಿ ಶೂನ್ಯ ಕಳೆದರೆ ಮತ್ತೆ ವರತೆಯ ನೀರಿನಂತೆ ಬತ್ತದೆ ಉಳಿಯುವುದು ಶೂನ್ಯವೆ !

ಈ ಶೂನ್ಯಸಂಪತ್ತನ್ನು ಕಾರಂತರ ಉಪದೇಶದಿಂದ ನಾಡು ನೀಗಿಕೊಳ್ಳಬಹುದೇ ? ಬದಲು ಯಾವ ಸಂಪತ್ತು ಪಡೆದೀತು ?

ಕಾರಂತರು ಉಪದೇಶ ಕೊಡುವುದು ಅನಿವಾರ್ಯವಾಗುತ್ತದೆ. ಜನ ಅದೊಂದನ್ನೇ ಧಾರಾಳವಾಗಿ ಕೊಡುತ್ತದೆ—ಎಂದು 'ಪ್ರಪಂಚ' ಸಾರುತ್ತದೆ.

ಶ್ರೀ ಕಾರಂತರು ಇದಕ್ಕೆ ಅಂಥ ಉದಾರಿಗಳಲ್ಲವಾದರೂ ಆ ಪೀಠದ ಮಹಿಮೆಯಿಂದ ಈ 'ಜನರಾಸಿಟಿ' ಅನಿವಾರ್ಯ.

ಮೂರು ದಿನವಾದರೂ ಶೋಭೆಗೆ ಅವರು ಉಪದೇಶವನ್ನಲ್ಲದೆ ಬೇರೆ ಏನು ಕೊಡಬಲ್ಲರು ?

* * * * *

ಶ್ರೀ ಕಾರಂತರನ್ನು ಶ್ರೀ ಮಾಸ್ತಿಯವರು 'ಕಡಲ ತೀರದ ನಮ್ಮ ಭಾರ್ಗವ' ಎಂದು ಕೊಡಲಿಯೆತ್ತಿದ ಪರಶುರಾಮನಿಗೆ ಹೋಲಿಸಿದರು. ಶ್ರೀ ಕಾರಂತರು ಇನ್ನೂ ಅಂಥ ಕೆಚ್ಚನ್ನು ಮೆರೆಯುತ್ತಲೇ ಇದ್ದಾರೆ.

'ಕುಣಿಯುತಾನೆ' ಎಂದು ಕಾಲನಟನಿಗೆ ಹೋಲಿಸಿ ಶ್ರೀ ವಿ. ಸೀ. ಹಾಡಿದರು. ಕಾರಂತರು ಕುಣಿಯುವುದನ್ನು, ಕುಣಿಸುವುದನ್ನು ಪ್ರತ್ಯಕ್ಷವಾಗಿ

ಬಿಟ್ಟಿರಬಹುದು. ಆದರೆ ಅವರ ಸಾಹಿತ್ಯದ ಪಾತ್ರಸೃಷ್ಟಿ, ಕಣ್ಣಿಗೆ ಕಟ್ಟಿದಂತೆ ಕುಣಿಯುತ್ತಿವೆ; ಕುಣಿಸುತ್ತಿವೆ.

ಈ ಬಹುಮುಖದ ಬಾಳಿನ ಈ ವಿರಾಟ್ ಪುರುಷನಿಗೆ ಅನುಭವದ ಹಸಿವು ಚಿರಂತನವಾಗಿದೆ. ಅದಕ್ಕೆ ಅವರು ಬಹುಮೂಲ್ಯವಾದ ತಮ್ಮ ಆಯುಷ್ಯವನ್ನೇ ಮುಡಿಪಿಟ್ಟಿದ್ದಾರೆ. ಅದರಿಂದ ಅವರು ತಮ್ಮ ವೈಯಕ್ತಿಕ ಸಂಸ್ಕಾರವನ್ನು ಹೆಚ್ಚಿಸಿಕೊಂಡರು; ಸಾಹಿತ್ಯದ ಮೇಲ್ಮೆಯನ್ನು ಸಾಧಿಸಿದರು.

'ಸಂಘಟನೆ' ಯೂ ಒಂದು ಪ್ರಯೋಗ. ಅದೂ ಒಂದು ಅನುಭವ. ಈ ಮಣ್ಣಿನಿಂದ, ಇದೇ ಜೀವಕೋಟಿಯಿಂದ ಜನರನ್ನಾಯ್ದು, ಅವರೊಂದಿಗೆ ಕೂಡಿ, ನಾಡಿನ ಬಹುವಿಧದ ಸಂಪತ್ತನ್ನು ನಿರ್ಮಿಸಲು ಕಾರಂತರಿಗೆ ಇನ್ನು ಏಕೆ ಸಾಧ್ಯವಾಗಬಾರದು ?

ಜನ ಕಾರಂತರನ್ನು ಆರಿಸುತ್ತಾರೆ. ಆದರೆ ಅವರು ಜನರನ್ನು ಆರಿಸುವುದು ಕಷ್ಟ. ಅವರ ಈ ಅತೃಪ್ತಿಯೂ ಒಂದು ಶಕ್ತಿ; ಅಸಡ್ಡೆಯೂ ಒಂದು ಮಾಂತ್ರಿಕತೆ ! ನಾವು ಈ ವರೆಗೆ ಕಾರಂತರಿಂದ ಸಣ್ಣ ಮಾದರಿಯ ಸಂಘಟನೆಗಳನ್ನು ಕಂಡು ಹಿಗ್ಗಿದಂತೆ ನಾಡಿನ ಶುಭದ ದೊಡ್ಡ ಯೋಜನೆಗಳೂ ಸಾಧಿಸುವಂತಾಗಲಿ. ಕಾರಂತರ ಅತೃಪ್ತ ಜೀವಕ್ಕೆ ಒಂದಿಷ್ಟು ತೃಪ್ತಿ ದೊರೆಯಲಿ. ಅದು ನಾಡಿನ ತೃಪ್ತಿ.

ನಮ್ಮ ಸರಕಾರಗಳು ಬೇರೆ ಕೆಲವು ಉಪಯುಕ್ತ ಬಾಬುಗಳಂತೆ ಸಾಹಿತ್ಯ—ಸಂಸ್ಕೃತಿಯ ಸಂಘಟನೆಯಲ್ಲೂ ಹಣ ವಿನಿಯೋಗಿಸುತ್ತಲಿವೆ. ಕಾರಂತರಂಥ ಕ್ರಿಯಾಶೀಲರು ಅವರ ಯೋಜನೆಗಳಲ್ಲಿ ಕಾಣುವದಿಲ್ಲ. ಹಾಗಿದ್ದರೆ ಕಾರಂತರ ಕನಸಿನ ಭೀಮಸಾಹಸಗಳನ್ನು ನಾವು ಕಣ್ಣಾರೆ ಕಾಣುತ್ತಿದ್ದೆವು; ಪ್ರಯೋಜನವನ್ನೂ ಪಡೆಯುತ್ತಿದ್ದೆವು.

ಅಂತೂ ನಮ್ಮ 'ಶೂನ್ಯಸಿಂಹಾಸನ'ವನ್ನೇರುವ ಶ್ರೀ ಕಾರಂತರು ಈ ಶೂನ್ಯಗಳ ಹಿಂದೆ ಅಂಕೆಯಾಗಿ ನಿಲ್ಲಲಿ. ಆಗ ಶೂನ್ಯಗಳು ಹೆಚ್ಚಿದಷ್ಟೂ ಮೊತ್ತ ಬೆಳೆಯುತ್ತದೆ.

(೧೯೫೫)

೩. ಗೋಕಾಕ ವಿನಾಯಕರಾಯರು

ಎಡಿಂಬರೋ ಆಸ್ಪತ್ರೆಯಲ್ಲಿ ಗುಣಹೊಂದುತ್ತಿದ್ದ ಗೋಕಾಕರಿಗೆ ಪರೀಕ್ಷೆಯ ಪರಿಣಾಮ ಅನಿರೀಕ್ಷಿತವಾಗಿ ಬಂತು—ಪ್ರಥಮಶ್ರೇಣಿಯ ತೇರ್ಗಡೆಯೆಂದು. ಅವರ ಬಾಯಿ-ಪರೀಕ್ಷೆ (viva voce) ಯೊಂದು ಇನ್ನೂ ಉಳಿದಿತ್ತು. ಅದಕ್ಕೆ ಈ ಬೇನೆಯೊಂದು (ಅಪೆಂಡಿಸೈಟಿಸ) ಮೂಲಾಗಿತ್ತು. ಬಾಯಿ--ಪರೀಕ್ಷೆ ಹಿಂದಿನಿಂದ ತೆಗೆದುಕೊಳ್ಳಬಹುದಾಗಿ ಆಕ್ಸಫರ್ಡ ವಿಶ್ವವಿದ್ಯಾಲಯದವರು ತಿಳಿಸಿದ್ದರು. ಆದರಿಂದ ಇವರ ಪರಿಣಾಮ ಹಿಂದಿನಿಂದ ಪ್ರಕಟವಾಗುವದಿತ್ತು. ಈ ಎಲ್ಲಾ ವಿಧಿ ಮುಗಿವ ಮುನ್ನವೇ ಈ ಪ್ರಥಮ ಶ್ರೇಣಿ ! ಗೋಕಾಕರಿಗೆ ನಂಬುಗೆಯಾಗಲಿಲ್ಲ. ಆದರೆ ಅವರ ಉತ್ತರ ಪತ್ರಿಕೆಗಳನ್ನು ನೋಡಿದ ಪರೀಕ್ಷಕರಿಗೆ ಈ ಉಮೇದುವಾರನ ಪರಿಣಾಮವನ್ನು ಬಾಯಿ-ಪರೀಕ್ಷೆಗಾಗಿ ತಡೆಯುವುದು ಉಚಿತವಾಗಿ ಕಾಣಲಿಲ್ಲ. ಉತ್ತರಗಳಲ್ಲಿ ಸ್ಪಷ್ಟ ಪ್ರಥಮಶ್ರೇಣಿ. ಕಾರಣ, ಬಾಯಿ-ಪರೀಕ್ಷೆಗಾಗಿ ತಡೆಯುವದು ಅವಶ್ಯಕಾಣಲಿಲ್ಲ. ವೈಸ್‌ಚಾನ್ಸಲರ್‌ರ ಅಪ್ಪಣೆ ತೆಗೆದುಕೊಂಡು ಅದನ್ನು ನಿಲ್ಲಿಸಿದರು. ಗೋಕಾಕರಿಗೆ ಪ್ರಥಮಶ್ರೇಣಿ ಮುಂಬಯಿ ವಿಶ್ವವಿದ್ಯಾನಿಲಯದಲ್ಲೇ ಬೆನ್ನು ಬಿದ್ದಿತ್ತು. ಅದನ್ನು ರಕ್ಷಿಸುವುದು ಅವರ ಕರ್ತವ್ಯವಲ್ಲವೇ ?

ಭಾರತದಲ್ಲಿ ಈ ಶ್ರೇಯಸ್ಸು ತಂದ ಮೊದಲಿಗರು ಗೋಕಾಕರು. ಗೋಕಾಕರು ಕನ್ನಡಿಗರು; ಅಚ್ಚುಮೆಚ್ಚಿನ ಕನ್ನಡಿಗರು.

ಗೋಕಾಕರನ್ನು ಇಂಗ್ಲಂಡಿಗೆ ಬೀಳ್ಕೊಡುವಾಗ ಧಾರವಾಡದಲ್ಲಿ ಒಂದು ಸಂತೋಷಕೂಟ ಏರ್ಪಟ್ಟಿತ್ತು. ಎಂದೋ ವಿದ್ಯಾರ್ಥಿಯಾಗಿದ್ದ ಹಿರಿಯರಿಂದ ಎಂದೂ ಕಲಿಯುವ ಚಿಂತೆಮಾಡದ ರಸಿಕರವರೆಗೂ ಜನ ನೆರೆದಿತ್ತು. ಆಗಲೆ ಗೋಕಾಕರು ಕನ್ನಡದಲ್ಲಿ ಹಲವು ಕೃತಿಗಳನ್ನು ಬರೆದು ಪ್ರಸಿದ್ಧರಾಗಿದ್ದರು. ರಾಯಚೂರು ಸಾಹಿತ್ಯ ಸಮ್ಮೇಳನದ ಗದ್ಯ-ಪದ್ಯ ಲೇಖಕರ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಕವಿ–ಕಾವ್ಯ ಮಹೋನ್ನತಿಯನ್ನು ಸಾರಿದ್ದರು. ಇವರನ್ನು ಪ್ರೊಫೆಸರರನ್ನಾಗಿ ಪಡೆದ ಭಾಗ್ಯ ಪುಣೆಯ ಫರ್ಗ್ಯೂಸನ್ ಕಾಲೇಜಿನ

ದಾಗಿತ್ತು. 'ಫರ್ಗ್ಯೂಸನ್' ಕಾಲೇಜುಗಳ ರಾಣಿಯೆಂದು ಹೆಸರಾಗಿದೆ. ಅವಳು ಕನ್ನಡದ ಈ ಗುಲಾಬಿಯನ್ನು ಕೈಚಾಚಿ ಮುಡಿದುಕೊಂಡಳು — ಎಂದು ಗೋಕಾಕರ ಗುರು ಥಕಾಕಾವ್ ನುಡಿದಿದ್ದರು. ಉತ್ತರ ಕನ್ನಡದ ನಾಡಿನವರಿಗೆ ಮುಂಚೆ ಪುಣೆಯೇ ವಿದ್ಯಾಕೇಂದ್ರವಾಗಿತ್ತು. ಕರ್ನಾಟಕ ಕಾಲೇಜು ಧಾರವಾಡ ದಲ್ಲಿ ಸುರುವಾದಾಗಲೂ ಪುಣೆಯ ದಾರಿ ಕನ್ನಡಿಗರಿಗೆ ತಪ್ಪಿದ್ದಿಲ್ಲ. ಈಗ ಹೋಗುವ ವಿದ್ಯಾರ್ಥಿಗಳಿಗೆ ರಾಣಿ ಕಾಲೇಜಿಗಿಂತ ಗುಲಾಬಿ ಗುರುವಿನ ಆಕರ್ಷಣೆಯೇ. ಗೋಕಾಕರ ಇಂಗ್ಲಿಷ್ ಎಂದರೆ ಮೋಹಿನಿಯಂತೆ. ಅಲ್ಲದೆ ಇವರಿಗೆ ಕನ್ನಡ ವಿದ್ಯಾರ್ಥಿಗಳೆಂದರೆ ಸೋದರ ಭಾವ. ಮತ್ತೆ ಗೋಕಾಕರದು ಎಳೆಯ ವಯಸ್ಸು. ಹುಡುಗರೊಡನೆ ಹುಡುಗರಾಗಿ ಆಡಂಬರವಿಲ್ಲದೆ ಬೆರೆತಂ ಸುಖ-ದುಃಖದ ಪಾಲುಗಾರರಾಗಿರುವುದು ಅವರ ಹೃದಯ ಗುಣ. ಅವರನ್ನು ಮುಂದೆ ತಂದದ್ದೂ ಅದೇ ದೊಡ್ಡ ಗುಣ...

ಸಂತೋಷಕೂಟ ಕೂಡಿತ್ತೆನ್ನಲಿಲ್ಲವೇ ? ಈ ಪ್ರಿಯ ಗೆಳೆಯನನ್ನು, ಗುರುವನ್ನು, ಕವಿಯನ್ನು, ವಿಮರ್ಶಕನನ್ನು ಬೀಳ್ಕೊಡುವಾಗ ನಮಗೆಲ್ಲ ಅಂತಃಕರಣ ಉಕ್ಕಿ ಬಂದಿರಲಾರದೇ ? ಆದರೆ ಈ ಆತ್ಮೀಯ ಸಂದೋಹ ವನ್ನು, ಕನ್ನಡದ ನೆಲವನ್ನು, ಅದರ ನೆಲೆಯನ್ನು ಎತ್ತರಿಸಿದ ಹಿರಿಯರನ್ನು, ಸೇವಾಬದ್ಧ ಸಾಹಿತಿಗಳನ್ನು ಬಿಟ್ಟು ಹೋಗಬೇಕಾದರೆ ಗೋಕಾಕರಿಗೆ ಹೇಗಾ ಗಿರಬೇಡ ! ಒಂದು ಕ್ಷಣ ಹೋಗುವುದು ಬೇಡವೆನಿಸಿರಲಾರದೇ ? ನಮ ಗಂತೂ ಹಾಗೇ ಅನಿಸಿತು. ಗೋಕಾಕ ಭಾವಜೀವಿ; ಆದರೆ ಧೀರ ! ಕರ್ತವ್ಯ ಮುಖ್ಯ. ತಾನಂ ತರುವ ಶ್ರೇಯಸ್ಸು ಕನ್ನಡದ್ದು. 'ಅಲ್ಲಿ ಹೋಗಿ ಮಲ್ಲಿಗೆಯನು ತರುವ' ಕಾರ್ಯ ತನ್ನದೆಂದು ಒಂದು ಸಲ ಕಂಡ ಮೇಲೆ ಅದನ್ನು ತಂದೇ ತೀರಬೇಕು. 'ಸಾಧಿಸುತ್ತ ಜೈಸುವುದೇ ಬಾಳುವುದರ ಸಾರವು' ಎಂಬ ಸತ್ಯವನ್ನು ಅವರು ಮೊದಲೆ ಕಂಡಿದ್ದರು.

ಗಾಂಧೀಜಿ ಇಂಗ್ಲೆಂಡಿಗೆ ಹೋಗುವಾಗ ತಾಯಿಗೆ ಮಾತು ಕೊಟ್ಟಂತೆ ಗೋಕಾಕರು ಕನ್ನಡ ತಾಯಮಕ್ಕಳ ಮುಂದೆ "ಕನ್ನಡ ನನ್ನ ಉಸಿರು; ನಾಡು–ನುಡಿಯ ಸೇವೆ ನನ್ನ ಜೀವನ ವ್ರತ. ಕನ್ನಡ ನಾಡಿಗೆ, ನುಡಿಗೆ ನನ್ನ ಬಾಳು ಮುಡಿಪು" ಎಂದು ಮಾತುಕೊಟ್ಟರು. ಗೋಕಾಕರು ತಮ್ಮ ಈ ಮಾತನ್ನು ಪಣವಾಗಿ ಮಾಡಿ ಅದನ್ನು ಪಾಲಿಸಿಕೊಂಡು ಬಂದುದನ್ನು ಕನ್ನಡ

ತಿಳಿದವರೆಲ್ಲ ಬಲ್ಲರು. ಅವರ ಕನ್ನಡದ ಈ ಅಭಿಮಾನ ಅವರನ್ನು ಕನ್ನಡದ ರಕ್ಷೆಯಿಂದ ದೂರ ಹೋಗಗೊಟ್ಟಿಲ್ಲ. ಅವರೂ ಹೋಗಲಾರರು.

ಹಡಗ ಏರಿದ ಮೇಲೆ ಕಡಲ ಪಯಣವನ್ನು ತಮ್ಮ ವಸ್ತುವನ್ನಾಗಿ ಮಾಡಿಕೊಂಡರು. 'ಸಮುದ್ರ ಗೀತೆ'ಗಳು ಬಂದವು. ಇಂಗ್ಲಿಷ್ ಜನರ ಒಡನಾಟವನ್ನು, ಕಾಲೇಜಿನ ಪಾಠಕ್ರಮವನ್ನು, ಅಲ್ಲಿಯ ವಾಸವನ್ನು—ಗ್ರಾಸವನ್ನು ಸಾಹಿತ್ಯ ಚಟುವಟಿಕೆಗಳನ್ನು, ಕವಿಕುಟೀರ ಯಾತ್ರೆಯನ್ನು, ನಾಟಕ ಪ್ರದರ್ಶನಗಳನ್ನು, ಸಿಗದಿದ್ದ ನ್ಯೂಡಿಗೇಟನ್ನು (ಒಂದು ಬಹುಮಾನ), ಕೇಳಿದ, ಮಾಡಿದ ಉಪನ್ಯಾಸಗಳನ್ನು, ನಮ್ಮ ದಾಸ್ಯಕ್ಕೆ ಕಾರಣರಾದ ಆಂಗ್ಲರ ಧೂರ್ತತನವನ್ನು, ಅವರ ಸಾಹಸವನ್ನು—ಚಾಣಾಕ್ಷತನವನ್ನು, ಅವರ ಒಳ್ಳೆಯ ಗುಣಗಳನ್ನೂ ಬಿಡದೆ ರಾಷ್ಟ್ರೀಯ ದೃಷ್ಟಿಯಿಂದ ತೂಗಿ ಬರೆದ ಅವರ ದಿನಚರಿ ಮತ್ತು ಕಾಗದಗಳು 'ಸಮುದ್ರದಾಚೆಯಿಂದ' ಎಂಬ ಹೆಬ್ಬೊತ್ತಗೆಯಾಗಿ ಬಂತು; ಗೋಕಾಕರು ತಮ್ಮ ಮನೆಯವರಿಗೆ, ಗೆಳೆಯರಿಗೆ ವಾರವಾರವೂ ಬರೆಯುತ್ತಿದ್ದ ಕಾಗದಗಳು ರಸಗಂಗೆಯಾಗಿರುತ್ತಿದ್ದವು. ನಮಗೆ ಪ್ರತಿವಾರವೂ. ಅವರ ಕಾಗದ ನಿರೀಕ್ಷಣೆಯೇ ಕೆಲಸವಾಗಿತ್ತು. ಕಾಗದಗಳು ತಪ್ಪದೆ ನಿರ್ದಿಷ್ಟವಾದ ದಿನ ಕೈಸೇರುತ್ತಿದ್ದವು. ಒಮ್ಮೆ ಇವರ ಕಾಗದಗಳು ಬರಲಿಲ್ಲ. ಗೆಳೆಯರಿಗೆ ಹಳಹಳಿ; ಮನೆಯವರಿಗೆ ಗಾಬರಿ. ಆಗ ಇವರ ಪರೀಕ್ಷೆ ಮುಂಗಿದಿತ್ತು. ಬಾಯಿ-ಪರೀಕ್ಷೆಗೆ ಅವಕಾಶವಿತ್ತು. ಆಗ ಸ್ಕಾಟ್ಲಂಡಿನಲ್ಲಿ ಪ್ರವಾಸ ಕೈಕೊಂಡರು. ಅಲ್ಲಿಯ ಗ್ರಾಮ ಜೀವನವನ್ನು ಜಾತ್ರೆಗಳನ್ನು ನೋಡಿ ಆಯಿತು. ಎಡಿಂಬರೋದಲ್ಲಿದ್ದಾಗ ಆಕಸ್ಮಿಕವಾಗಿ ಈ ಘೋರ ಬೇನೆ—ಕರಳು ಬಾಲ—ಕಾಣಿಸಿಕೊಂಡಿತು. ಅಂದು ಶಸ್ತ್ರಕ್ರಿಯೆಯಾಗಲೇ ಬೇಕಿತ್ತು. ಇಲ್ಲವಾದರೆ ಗಂಡಾಂತರ ಕಾದಿತ್ತು. ಆಸ್ಪತ್ರೆಯ ಅಧಿಕಾರಿಗಳು ಸಮ್ಮತಿ ಪತ್ರಕ್ಕೆ ರುಜು ಹಾಕಿಸಿಕೊಳ್ಳುವಾಗ ದೂರದ ದೇಶದಲ್ಲಿ ಅದೆಲ್ಲಾ ಅವಲಕ್ಷಣವಾಗಿ ಕಂಡು ಗೋಕಾಕರಿಗೆ ಮನೆಯವರು, ಮಾನದವರು, ನಾಡು-ನುಡಿ, ತಾನು ಕೈಕೊಂಡ ವ್ರತ, ಎಲ್ಲಾ ನೆನಪಾಗಿ, ಅದಂ ಪೂರೈಸದೆ ತನ್ನನ್ನು ಇದು ಏನು ಮಾಡಿಬಿಡುತ್ತದೋ ಎನಿಸಿ ದೇವರನ್ನು ಮೊರೆಹೊಕ್ಕರು. ನಮ್ಮ ನಾಡಿನ ಪುಣ್ಯಬಲವಿಶೇಷವಿರುವಾಗ ವಿಧಿ ಏನಂ ಮಾಡೀತು? ಇವರು ಆಕ್ಸಫರ್ಡ ಫಸ್ಟ್‌ಕ್ಲಾಸ್ ಎಂದು ತಿಳಿದ ಆಸ್ಪತ್ರೆಯಂ

ಡಾಕ್ಟರರು, ದಾಯಿಗಳು ಇವರನ್ನು ಚೆನ್ನಾಗಿಯೇ ನೋಡಿಕೊಂಡರು. ಗುಣಕ್ಕೆ ಮಾತ್ಸರವುಂಟೇ ?

ಗೋಕಾಕರು ಮುಂಬಯಿಗೆ ಬಂದರು. ಮರುದಿನವೇ ಧಾರವಾಡಕ್ಕೆ ಧಾವಿಸಿದರು. ಎದುರುಗೊಳ್ಳಲು ಸ್ಟೇಶನ್ನಿಗೆ ಹೋಗಿದ್ದೆವು. ಧೋತರ ಉಟ್ಟ, ಟೊಪ್ಪಿಗೆ ಇಟ್ಟ ಈ ಆಕ್ಸಫರ್ಡ ಪದವೀಧರ ಗಾಡಿಯಿಂದ ಇಳಿದ. ಸೋತ ಮೈ. ಬಿಳಿಚೊಡೆದ ಮುಖ. ಚಿಕಿತ್ಸೆ ಮುಗಿದು ತಿಂಗಳೂ ಕಳೆದಿಲ್ಲ. ನಡುವೆ ಒಮ್ಮೆ ರಾಜ್ಯಾರೋಹಣದ ರಜೆಯಲ್ಲಿ ಭಾರತಕ್ಕೆ ಬಂದ ನಮ್ಮ ದಾದಾ (ಗೆಳೆಯರು, ಮನೆಯವರು ದಾದಾ–ಅಣ್ಣ ಎಂದು ಕರೆಯುವ ವಾಡಿಕೆ) ತುಂಬಿಕೊಂಡು ಬಂದಿದ್ದ. ಈಗ ಸೊರಗಿದ್ದು ನೋಡಿ ಕಳವಳ ವಾಯಿತು. ಗಾಡಿ ಮುಗಿಬಿದ್ದೆವು. ಗಾಡಿ ಇಳಿದಂತೆಯೇ ಪ್ರೊ. ಧ್ರುವ ಮುಂದೆ ಬಂದು ತಾವು ಪಡೆಯದೇ ಹೋದುದನ್ನು ಇವರು ಹೊಂದಿದುದಕ್ಕೆ ಅಭಿನಂದಿಸಿದರು. ಗೋಕಾಕರ ಮಡದಿ ಶಾರದಾದೇವಿ ಒಂದು ಕಡೆಗೆ ನಿಂತಿದ್ದರು. ಗಾಡಿ ಬಂದು ಗೋಕಾಕರನ್ನು ಇಳಿಸಿಹೋಗಿದೆ. ಮುಗಿಬಿದ್ದ ಜನರನ್ನು ದಾಟಿ, ತಂದೆ ಇನ್ನೂ ತಮ್ಮ ಕಡೆಗೆ ಬರಲಿಲ್ಲವಲ್ಲಾ ಎಂದೇ ಇರ ಬೇಕು—ಇಬ್ಬರೂ ಮಕ್ಕಳು ತಾಯಿಗೆ ತಕ್ಕೆ ಬಿದ್ದು ಅಳುತ್ತಿದ್ದರು. ಅಂದು ನಾವೆಲ್ಲ ಗೋಕಾಕರ ಬಿಡಾರಕ್ಕೇ—ಶಾರದಾದೇವಿಯವರ ತವರು ಮನೆಗೇ ಹೋಗಿ ಸಂಜೆಯವರೆಗೆ ಅಲ್ಲೇ ಉಳಿದೆವು. ಸುದ್ದಿ ಕೇಳುವುದು, ತಂದ ಸಾಮಾನು ನೋಡುವುದು, ದೊರೆತ ಪ್ರಶಸ್ತಿಗಳನ್ನು ಓದುವುದು—ಇದೇ ಕೆಲಸವಾಗಿತ್ತು. ಅಲ್ಲಿಂದ ಗೋಕಾಕ ತಮಗಾಗಿ ಒಂದು ಗ್ರಾಮೋಫೋನ ತಂದಿದ್ದರು. ಮರುದಿನವೇ ಅದಕ್ಕೆ ಎರಡು ಕನ್ನಡ ರೆಕಾರ್ಡು ಕೊಂಡು ಕೊಂಡರು.

ಡಿ. ಇ. ಸೊಸಾಯಿಟಿಯವರ ಸಾಂಗಲಿಯ ವಿಲಿಂಗ್ಡನ್ ಕಾಲೇಜು ಸೊರಗುತ್ತ ನಡೆದಿತ್ತು. ಹತ್ತಿರದ ಕನ್ನಡದ ವಿದ್ಯಾರ್ಥಿ ಸಂಪತ್ತಿನಿಂದಲೇ ಅದು ನಡೆಯಬೇಕಾಗಿತ್ತು. ಗೋಕಾಕರನ್ನು ಫರ್ಗ್ಯೂಸನ್‌ದಿಂದ ಇಲ್ಲಿಗೆ ತಂದು ಪ್ರಿನ್ಸಿಪಾಲರನ್ನಾಗಿ ಮಾಡಿದರು. ಗೋಕಾಕರಿಗಾಗಿ ಪುಣೆಗೇ ಹೋಗುತ್ತಿದ್ದ ಕನ್ನಡ ವಿದ್ಯಾರ್ಥಿಗಳು ಸಾಂಗಲಿಗೆ ಮುಗಿಬಿದ್ದರು. ಮಹಾರಾಷ್ಟ್ರೀಯರಿಗೆ

ತಾನೆ ಏನು ? ಗೋಕಾಕರ ಇಂಗ್ಲಿಷಿನ ಆಕರ್ಷಣೆಯೋ ಅಲ್ಲವೇ ಅವರನ್ನು ಫರ್ಗ್ಯುಸನ್ನಿಗೆ ಸೆಳೆದದ್ದು ? ಕಾಲೇಜು ತುಂಬಿ ಸೂಸಿತು.

ವಿದ್ಯಾರ್ಥಿಗಳಿಗೆ ಗೋಕಾಕರೆಂದರೆ ಪಂಚಪ್ರಾಣ. ಅವರದು ಕಾವ್ಯ ಪ್ರವೃತ್ತಿ. ಹುಡುಗರನ್ನು ಕೂಡಿಸಿ ಕಾವ್ಯಕೇಳಿಗೆಂದು 'ವರುಣಕುಂಜ' ಕಟ್ಟಿದರು. ಇಂಗ್ಲಿಷು ಇವರಿಗೆ ನೀರು ಕುಡಿದಂತೆಯಾದರೂ ಅದು ಅಗತ್ಯ ಬಿದ್ದಾಗ ಮಾತ್ರ. ಕನ್ನಡ ಯಾವಾಗಲೂ ಇವರ ಪ್ರೀತಿಯ ವಿಷಯವಾಗಿರುವುದರಿಂದ ಹುಡುಗರಿಗೆ ಇವರೊಂದಿಗೆ ನಕ್ಕುನಲಿಯಲು ಅವಕಾಶವಿತ್ತು. ಕಾಲೇಜು ತಾಸು ಬಿಟ್ಟಮೇಲೆ ಗೋಕಾಕರು ಗೋಕಾಕರೇ. ಈ ವಿದ್ಯಾರ್ಥಿ ಮೈತ್ರಿಯಿಂದಲೇ ಅವರು ತಮ್ಮ ಬಾಳನ್ನು ಹಿಗ್ಗಿಸಿಕೊಂಡರು. ಅವರ ಈ ಬೆಳೆದು ಬೆಳೆಯಿಸುವ ಪ್ರವೃತ್ತಿಯೇ ಅವರ ಶಕ್ತಿಯಾಗಿದೆ. ವಿಲಿಂಗ್ಡನ್ ಕಾಲೇಜು ಕನ್ನಡ ಗಡಿಯ ಭದ್ರಕೋಟೆಯಾಗುವುದರಲ್ಲಿತ್ತು. ಆದರೆ ಕಾಲೇಜಿನ ಆಡಳಿತಕ್ಕೆ ಅದೇ ಬರಪಣವಾಯಿತೇನೋ. ಈ ಭಾವವರಿತು ಗೋಕಾಕರು ಡಿ. ಇ. ಸೊಸಾಯಿಟಿಗೆ ಶರಣು ಹೊಡೆದರು.

ಸಾಹಿತ್ಯದಲ್ಲಿ ಇವರ ಕೃತಿ ಹುಲುಸಾಗಿದೆ. ನೀಳ್ಗವಿತೆಗಳು (ಕಲೋಪಾಸಕ) ಭಾವಗೀತಗಳು (ಪಯಣ) ಸಮುದ್ರಗೀತಗಳು, ಪ್ರಗತಿಶೀಲ ಕವಿತೆಗಳು (ಅಭ್ಯುದಯ) ಬಂದಿವೆ. 'ಬಾಳದೇಗುಲದಲ್ಲಿ' ಎಂದು ಒಂದು ದೇಗುಲಕ್ಕೆ ಬರುವ ಯಾತ್ರಿಕರನ್ನು ಕುರಿತ ದೀರ್ಘ ಕಾವ್ಯಮಾಲೆಯೊಂದು ಸಿದ್ಧವಾಗಿದೆ.

ಕಾವ್ಯದಲ್ಲಿ ಇವರದು **Mystic** ಜಾತಿ. ರಸಪಾಕಕ್ಕಿಂತ ಅನುಭಾವದ ಗಾಂಭೀರ್ಯವೇ ಹೆಚ್ಚು. ಕಾವ್ಯದ ಭಾಷೆ ತಿಳಿಯಾಗಿರುತ್ತದೆ. ಅಂತ್ಯಪ್ರಾಸದ ಇವರ ಗೀತಗಳು ಓದಲು ಸೊಗಸಾಗಿರುತ್ತವೆ. ಸ್ವಚ್ಛಂದ ಛಂದದ ನಡೆ ಗಂಭೀರವಾದದ್ದು. ಸರಳ ರಗಳೆಯೂ ಅಷ್ಟೆ.

'ಜನನಾಯಕ' ವೆಂಬ ರುದ್ರನಾಟಕ ಬರೆದಿದ್ದಾರೆ. ಈಚೆಗೆ ಸಾಹಿತಿ-ಸಾಮ್ಯವಾದಿಗಳನ್ನು ವಸ್ತುವಾಗಿಟ್ಟುಕೊಂಡು 'ಯುಗಾಂತರ' ವೆಂಬ ನಾಟಕ ಬರೆದಿದ್ದಾರೆ. ಇವರ 'ವಿಮರ್ಶಕ ವೈದ್ಯ' ವೆಂಬ ವಿಡಂಬನಾ ಪೂರ್ಣ ನಾಟಕ ಕನ್ನಡ ಸಾಹಿತಿಗಳ ಅನೇಕ ಮುಖಗಳನ್ನು ಸ್ಮರಣೆಗೆ ತರುತ್ತದೆ.

ಇಜ್ಜೋಡು ಕಾದಂಬರಿ ಇನ್ನೂ ನಡೆದಿದೆ. ಅದು ಆರಂಭದಿಂದ ಕಟು ವಿಮರ್ಶೆಗಳನ್ನು ಎದುರಿಸುತ್ತಲಿದೆ. ೨೦ನೆಯ ಶತಮಾನದ ಆರಂಭದಿಂದ ಮಧ್ಯಮ ವರ್ಗದ ಸಮಾಜವು ಇದರ ಆವರಣ. ಈ ಶತಮಾನದಲ್ಲಿ ನಡೆದ ಸಮಾಜಕ್ರಾಂತಿಯು ಪ್ರತಿಕ್ರಿಯೆ ಈ ಕಾದಂಬರಿಯ ಪಾತ್ರಗಳ ಆಚಾರ ವಿಚಾರಗಳ ನಿರೂಪಣೆಯು ಉದ್ದಕ್ಕೂ ಹಬ್ಬಿಕೊಂಡಿದೆ. ಸಮಾಜ ಜೀವನದ ವೈಚಿತ್ರ್ಯಗಳು ಅದರ ಪ್ರತಿಬಿಂಬವಾದ ಸಾಹಿತ್ಯದಲ್ಲಿ ಕಲೆಯು ಒಪ್ಪಗೊಂಡು ಮೂಡಬೇಕಾದಾಗ ನೈಜವಾದದ್ದೂ ಅವಾಸ್ತವವೆಂಬ ಆರೋಪಕ್ಕೆ ಗುರಿಯಾಗಬೇಕಾಗುತ್ತದೆ. ಆದರೆ ಜೀವನವೇ ಕಾಲಕ್ರಮದಲ್ಲಿ ಅವಾಸ್ತವವಾಗುತ್ತಿರುವಾಗ ಸಾಹಿತ್ಯ ಹೇಗೆ 'ನೈಜ'ವಾಗಿ ಕಾಣಬಲ್ಲದು ? ಈಗ ಪ್ರಕಟವಾದ ೬೦೦ ಪುಟಗಳ ಈ ಕಾದಂಬರಿಯನ್ನು ಹಿಡಿದವರು ಬಿಡದೆ ಓದಿ ಮುಗಿಸಿದ್ದಾರೆ. ವಸ್ತು ಅನಂತವಾಗಿರುವಂತೆ ನಿರೂಪಣೆಗೂ ಅನಂತ ಮುಖ. ತಾನು ಕಂಡ ಸತ್ಯವನ್ನು ಕವಿ ತಾನು ಕಂಡಂತೆಯೇ ಸಾರಬಲ್ಲ. ಆ ಪ್ರಾಮಾಣಿಕತೆಯೇ ಅವನ ಕಲೋಪಾಸನೆಯ ಧರ್ಮ. ಅದೇ ವಿವರಣೆಯನ್ನು ಬೇರೆ ವಿಧದಲ್ಲಿ ಕೊಡಲು ಸಾಧ್ಯವಿರಬಹುದು. ಅಂಥ ಹತ್ತು ಬಗೆಗಳಲ್ಲಿ ಈಗ ಅನುಸರಿಸಿದ ಮಾರ್ಗವೂ ಒಂದು; ಅಷ್ಟೆ. ಇನ್ನೂ ಕಾದಂಬರಿ ಮುಗಿದಿಲ್ಲ. ಭಿನ್ನಾಭಿಪ್ರಾಯಕ್ಕೂ ವಿಮರ್ಶೆಗೂ ಕಾಲಾವಕಾಶವಿದೆ.

ಗೋಕಾಕರು ಸಹೃದಯ ವಿಮರ್ಶಕರೆಂದು ಹೆಸರಾಗಿದ್ದಾರೆ. ಪಾಶ್ಚಾತ್ಯ ವಿಮರ್ಶಾಶಾಸ್ತ್ರ ಇವರಿಗೆ ಕರಗತವಾಗಿದೆ. ವಿಮರ್ಶೆಯ ಉದ್ದೇಶ ಸಾಹಿತ್ಯದ ಬೆಳವಣಿಗೆಗೆ ಪೋಷಕವಾಗಿರುವಂತೆ ಇವರ ವಿಮರ್ಶಾ ಪದ್ಧತಿ. ತರುಣ ಲೇಖಕರಿಗಂತೂ ಇವರ ಸಲಹೆ–ಸೂಚನೆಗಳು ಚೈತನ್ಯದಾಯಿ. ಆದರೆ ಮೊದಮೊದಲಿನ ಇವರ ವಿಮರ್ಶೆಗಳು ಕಟು ಎನಿಸಿಕೊಳ್ಳುವಷ್ಟು ಕೆಲವರಿಗೆ ನಿಷ್ಠುರವಾಗಿ ಕಂಡವು.

ಇವರು ಇಂಗ್ಲೆಂಡಿನಲ್ಲಿದ್ದಾಗ ಪ್ರಗತಿಶೀಲ ಲೇಖಕರೊಡನೆ ಸಂಬಂಧ ಬೆಳಸಿ ಅದರ ಜೀವನಾಡಿಯನ್ನು ಗುರುತಿಸಿ ಅದರ ವಿಚಾರವಾಗಿ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಪಡೆದಿದ್ದಾರೆ. ಕರ್ನಾಟಕದಲ್ಲಿ ಅದರ ಆಂದೋಲನವೆದ್ದಾಗ ರಾಣೆಬೆನ್ನೂರಿನ ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಇವರು 'ಸಾಹಿತ್ಯದಲ್ಲಿ ಪ್ರಗತಿ' ಎಂಬ ತಮ್ಮ

ದೀರ್ಘ ಉಪನ್ಯಾಸದಲ್ಲಿ ಪ್ರಗತಿಶೀಲ ಸಾಹಿತ್ಯದ ಬಗ್ಗೆ ಬಹು ಜನಸಮ್ಮತ ವಾದ— ಇನ್ನೂ ಸರ್ವಸಮ್ಮತವೆಂಬ ಕಾಲ ಬಂದಿಲ್ಲ— ವಿವೇಚನೆಯನ್ನು ನೀಡಿದರು. ರಬಕವಿ ಸಾಹಿತ್ಯಸಮ್ಮೇಳನದಲ್ಲಿ ಇದೇ ವಿಷಯದ ವಿಚಾರ ಸಂಕಿರಣದ ಅಧ್ಯಕ್ಷರಾಗಿ ಅದೇ ಮಾತನ್ನು ಘೋಷಿಸಿದರು. ಕನ್ನಡದ ಹೊಸ–ಹಳೆಯ, ಹಿರಿ–ಕಿರಿಯ ಸಾಹಿತಿಗಳ ಭಿನ್ನಾಭಿಪ್ರಾಯಗಳನ್ನು ಬಹುಮಟ್ಟಿಗೆ ಕಡಿಮೆ ಮಾಡಿದ ಶ್ರೇಯಸ್ಸು ಇವರಿಗಿದೆ. ಇದೇ ದೃಷ್ಟಿಯಿಂದ ತಾವು ಬರೆದ 'ಅಭ್ಯುದಯ' ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದ್ದಾರೆ.

ಕರ್ನಾಟಕದ ಕೆಲವು ಪಟ್ಟಣಗಳ ಸಾಮಾಜಿಕ–ಐತಿಹಾಸಿಕ ಸ್ವರೂಪ ದರ್ಶನಗಳನ್ನು ಸುಂದರವಾದ ಶಬ್ದಚಿತ್ರದಿಂದ ಮೂಡಿಸುವ ಒಂದು ಹೊಸ ಸೃಷ್ಟಿಯನ್ನು ಇವರು ಆರಂಭಿಸಿದರು. ವ್ಯಕ್ತಿಚಿತ್ರಗಳಂತೆ ಈ ನಗರ-ಗ್ರಾಮ ಚಿತ್ರಗಳೂ ರಂಜಿತವಾಗಿವೆ. ಇದೇ ದೃಷ್ಟಿಯಿಂದ ಇನ್ನಿತರರೂ ಬರೆದ ಕೆಲವು ಚಿತ್ರಗಳೊಡನೆ ಇವರ ಹಲವು ಚಿತ್ರಗಳು **'ಇಂದಿನ ಕರ್ನಾಟಕ'** ಎಂಬ ಪುಸ್ತಕದಲ್ಲಿ ಮೂಡಿ ನಿಂತಿವೆ.

ಇಂಗ್ಲಿಷಿನಲ್ಲಿ ಗೋಕಾಕರ ಹಿಡಿತ ಪ್ರಭುತ್ವವೆನಿಸುವಂಥಾದ್ದು. ಕಾಲೇಜಿನಲ್ಲಿ ಕಲಿಯುವಾಗಿನಿಂದಲೂ ಇಂಗ್ಲಿಷು ಇವರ ಶ್ರೇಯಸ್ಸಿನ ಮುಖವಾಗಿದೆ. ಇವರು ಮೊದಲು ಇಂಗ್ಲಿಷಿನಲ್ಲಿಯೇ ಕವನ ಬರೆಯತೊಡಗಿದ್ದು, ಮುಂದೆ ಕವಿವರ ಬೇಂದ್ರೆಯವರ ಪರಿಚಯ, ಗೆಳೆತನವಾದಾಗ ಇವರು ಕನ್ನಡದಲ್ಲಿ ಬರೆಯತೊಡಗಿದರು. ಬಿ. ಎ. ದ ವರೆಗೆ ಇವರ ಅಭ್ಯಾಸಕ್ರಮ ಸಾಮಾನ್ಯವಾಗಿಯೇ ಇತ್ತು. ಮೊದಲಿನಿಂದಲೂ ಅಭ್ಯಾಸದ ಜೀವ. ಇವರ ಓದನ್ನು ಹಗಲಿರಳು ಕಂಡ ಗೆಳೆಯರು ಇವರಿಗೆ ಗ್ಹೋಕ್–ಹಾಕ್ ಎಂದು ಕರೆದರು. ಬಿ. ಎ. ದಲ್ಲಿ ಎಲಿಸ್ ಪಾರಿತೋಷಕ ಪಡೆದಾಗ ಇವರ ದಿಸೆ ಬೆಳಗಿತು. ಅಂದಿನಿಂದ ಮುಂದೆ ಶ್ರೇಯಸ್ಸು ಇವರನ್ನು ಬಿಡಲಿಲ್ಲ; ಇವರು ಶ್ರೇಯಸ್ಸನ್ನೂ ಬಿಟ್ಟಿಲ್ಲ.

ಇಂಗ್ಲಿಷನ್ನು ಬರೆಯುವಾಗ ಕನ್ನಡದ ಕೀರ್ತಿ ಬೆಳಗಿಸುವ ಸಂದರ್ಭವನ್ನು ಇವರು ಎಂದೂ ಕಳೆದುಕೊಳ್ಳುವದಿಲ್ಲ. **Triveni** ಯಲ್ಲಿ ಇವರ

ಹಲವು ಲೇಖನಗಳು ಬಂದಿವೆ. ಬೇಂದ್ರೆಯವರ ಕಾವ್ಯದ ಮೇಲೆ ಬರೆದ ಲೇಖನ ರಸವಿಮರ್ಶೆಯಿಂದ ಕೂಡಿ ಬಹು ಜನಪ್ರಿಯವಾಗಿದೆ. ಈಚೆಗೆ ಕೈಲಾಸಂರ ಮೇಲೆ ಬರೆದ ಪದ್ಯವೂ ಅಷ್ಟೆ. ಅಲ್ಲದೆ ಅನೇಕ ಪುಸ್ತಕಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಅವು ಕಾಲೇಜಿನ ಅಭ್ಯಾಸಕ್ರಮಕ್ಕೆ ವಿಶೇಷವಾಗಿ ಸಂಬಂಧಪಟ್ಟಂಥವು. ತಮ್ಮ ವಿದ್ಯಾರ್ಥಿ ಜೀವನದ ಯಶಸ್ಸಿನ ಫಲವನ್ನು ಈಗಿನ ವಿದ್ಯಾರ್ಥಿಗಳಿಗೆ ಈ ಬಗೆಯ ಪುಸ್ತಕಗಳ ಮೂಲಕ, ತಮ್ಮ ಅಭ್ಯಾಸ ಪೂರ್ಣ ರಮ್ಯ ಉಪನ್ಯಾಸಗಳ ಮೂಲಕ ನೀಡುತ್ತಿದ್ದಾರೆ. ಇವರ ಉಪನ್ಯಾಸ ಗಳು ಸುರುವಿನಲ್ಲಿ ಸಾವಕಾಶವಾಗಿ, ಮುಂದೆ ಒಳ್ಳೆಯ ರಮ್ಯವಾಗಿ ಬೆಳೆದು ಏರಿಕೆಯಲ್ಲಿ ಮುಗಿಯುತ್ತವೆ.

ಭಾರತದ P. E. N. ಸಾಹಿತಿಗಳ ಸಮ್ಮೇಳನ ಕಳೆದ ವರುಷ ಜಯ ಪುರದಲ್ಲಿ ರಾಷ್ಟ್ರನಾಯಕ ಜವಾಹರಲಾಲರಿಂದ ಉದ್ಘಾಟನ ಹೊಂದಿ ನಡೆಯಿ ತಷ್ಟೆ. ಆಗ ಕನ್ನಡ ಸಾಹಿತ್ಯದ ಪರಿಚಯ ಭಾಷಣವನ್ನು ಗೋಕಾಕರೇ ಮಾಡಿದರು. ಮುಂಬಯಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಭಾಷಾ ಶಾಸ್ತ್ರದ ಮೇಲೆ ಕೆಲವು ಉಪನ್ಯಾಸಗಳನ್ನು ಕೊಟ್ಟು ವಿದ್ವತ್ಪೂರ್ಣ ತತ್ತ್ವಗಳನ್ನು ಪ್ರತಿಪಾದಿಸಿದರು.

ಗೋಕಾಕರು ಗೆಳೆತನವನ್ನು ಬಹುಮುಖವಾಗಿ ಆರಾಧಿಸಿದ ಗೆಳೆಯರ ಗುಂಪಿನವರು. ಗೆಳೆತನದ ಅರ್ಥ ಇವರ ದೃಷ್ಟಿಯಲ್ಲಿ ಬಹಳ ಆಳವಾಗಿದೆ; ವಿಶಾಲವಾಗಿದೆ. ಅದರ ಸಾಧನೆಯನ್ನು ಅವರು ತಮ್ಮ ಜೀವನದೊಂದಿಗೆ ಆಚರಿಸುತ್ತ ಬಂದಿದ್ದಾರೆ. ಮಾನವಜೀವನದ ಅನಂತತೆಯನ್ನು, ಪ್ರೇಮದ ಅಗಾಧತೆಯನ್ನು ಅವರು ಗೆಳೆತನದ ತಪಸ್ಸಿನಲ್ಲಿ ಕಂಡಿದ್ದಾರೆ. ಗೆಳೆತನದ ಅನೇಕ ಪ್ರಯೋಗಗಳು ಫಲಿಸಿವೆ. ಅದರಿಂದ ತಮ್ಮ ಮನಸ್ಸನ್ನು ದಿನ ದಿನಕ್ಕೂ ವಿಕಾಸಗೊಳಿಸಿಕೊಳ್ಳುತ್ತಿದ್ದಾರೆ; ತಿಳಿಗೊಳಿಸಿಕೊಳ್ಳುತ್ತಿದ್ದಾರೆ. ಅವರನ್ನು ಕಾಣುವವರಿಗೆ ಮೊದಲು ಅವರ ಸ್ನೇಹದರ್ಶನವಾಗುತ್ತದೆ. ಅವರ ಸರಸ–ಸಜ್ಜನಿಕೆಯು ಈ ಸ್ನೇಹಪೂಜೆಯಿಂದಲೇ ಬಂದದ್ದು.

ಇವರದು ನಿರಾಡಂಬರವಾದ ಬಾಳು; ನಿರಹಂಕಾರವಾದ ಜೀವ. ನನ್ನ ಮಂಗಳೂರಿನ ಗೆಳೆಯನೊಬ್ಬನನ್ನು ಇವರ ಭೆಟ್ಟಿಗೆ ಕರೆದೊಯ್ದಿದ್ದೆ. ಹಾಸಿನ ಮೇಲೆ ನಗುತ್ತ ಕುಳಿತ ಗೋಕಾಕರು ಸ್ವಾಗತಿಸಿದರು. ಮಾತು

ನಡೆದಿತ್ತು. ನನ್ನ ಗೆಳೆಯ ಅಜ್ಞಾತ ಪುರುಷನೊಬ್ಬನನ್ನು ಕಾಯುತ್ತಿದ್ದ. ಇವರೇ ಗೋಕಾಕ ಎಂದಾಗ ಅವನ ಆಶ್ಚರ್ಯಕ್ಕೆ ಮಿತಿಯಿಲ್ಲದಾಯಿತು. ಇಷ್ಟು ಸಾದಾ ಇರುವಿಕೆ; ಇಂಥ ಸಹಜ ವರ್ತನೆ.

ಈಗ ವೀಸನಗರ(ಬಡೋದಾ ಸಂ.)ದ ಕಾಲೇಜಿನ ಆರಂಭದ ಪ್ರಿನ್ಸಿಪಾಲರಾಗಿದ್ದಾರೆ. ಕನ್ನಡ ಬಾವುಟವನ್ನು ಹೊರನಾಡಿನಲ್ಲಿ ಹಾರಿಸುತ್ತಿದ್ದಾರೆ.

ಎತ್ತರದ ಆಳು. ಗೋದಿಗೆಂಪು ಬಣ್ಣ. ಮೊಗದಲ್ಲಿ ಮೆದುವಾದ ಎಳೆಯ ಕಳೆ. ಸುಲೋಚನದ ಕೆಳಗಿನ ಕಣ್ಣುಗಳು ಮಾತ್ರ ಆಳವಾದ ದೃಷ್ಟಿಯುಳ್ಳವು. ಹಸನ್ಮುಖವು ಮಾತು ಬೆಳೆದಂತೆ ಗಂಭೀರವಾಗುತ್ತದೆ. ಒಂದು ಕೈ ತಲೆಯ ಕಿರಿಗೂದಲನ್ನು ನೇವರಿಸುತ್ತಿರುತ್ತದೆ. ಇನ್ನೊಂದು ಕೈ ಮಾತಿನ ಭಾವ ಸೂಚಿಸುತ್ತದೆ.

ಇವರಿಗಿನ್ನೂ ನಡುಹರೆಯ. ನಾಲ್ವತ್ತರ ಮನೆಗೆ ಇನ್ನೂ ಬಂದಿಲ್ಲ. ಈಗಾಗಲೆ ಅವರು ತಪಸ್ಸಿನಂತೆ ಉಪಾಸನೆ ಮಾಡಿದ ಜ್ಞಾನವನ್ನು ತಾವು ಕಂಡ ಸ್ನೇಹಲತೆಯ ಮೂಲಕ ನಾಡಿಗೆ ನೀಡುತ್ತಿದ್ದಾರೆ. ನಾಡಿನವರ ಸ್ನೇಹವನ್ನು ತಮ್ಮಲ್ಲಿ ತುಂಬಿಕೊಳ್ಳುತ್ತಿದ್ದಾರೆ. ಹೀಗಾಗಿ ಈ ಸ್ನೇಹ ಪರಿಘ ಹಬ್ಬುತ್ತಲಿದೆ. ಇದು ನಾಡಜೀವನದ ಬಳ್ಳಿ. ಇದರ ನಾಡಿ ನಾಡ ಜೀವನದ ನಾಡಿಯಾಗಲಿ. ಸ್ನೇಹ ಇದರೊಡನೆ ಹರಿದಾಡಲಿ.

(೧೯೪೬)

೪. ಕುಲಕರಣಿ ಶ್ರೀನಿವಾಸ

ತುಂಬಿಕೊಂಡದ್ದಲ್ಲವಾದರೂ ಸದಾ ನಗು ತುಂಬಿದ ಮುಖ; ಆರ್ದ್ರ-ವಾದ ನೋಟ; ವಿಶಾಲವಾದ ಹಣೆ. ಭುಜಕ್ಕೆ ತೂನೆದಾಡುವ ವಿರಳವಾವ ಕೂದಲು; ನೀಳವಾದ ತೋಳು; ಆಳು ಎತ್ತರವಲ್ಲವಾದರೂ ನಿಲುವಿಕೆ ಕಿರಿದಲ್ಲ. ದೇಹ ಬಡಕಲು–ಬಡಕಲು.

ಇವರ ಬಾಯೊಡನೆ ಕೈಯೂ ಮಾತಾಡುತ್ತದೆ; ಮೈಯೂ ಮಾತಾಡುತ್ತದೆ. ಒಮ್ಮೆ ಕೈಲಾಸಂ ಬಂದು ಧಾರವಾಡದಲ್ಲಿ ಕೆಲವು ದಿನ ನಿಂತರು. ಶ್ರೀನಿವಾಸರು ಶಿಷ್ಯರಾಗಿ ಅವರನ್ನು ಅನುಸರಿಸಿದರು. ಮುಂದೆ ಸ್ವಯಂ ಅಭಿನಯ ಸುರುವಾಯಿತು. ಕೈಲಾಸಂ ಅವರ ಹೋಂ ರೂಲು, ಗಂಡಸ್ಕತ್ರಿ; ಶ್ರೀರಂಗರ ಎಲ್ಲ ನಾಟಕಗಳ ಎಲ್ಲ ರಂಗಗಳು; ಮ್ಯಾಕ್‌ಬೆತ್‌ದಲ್ಲಿಯ ಖಡ್ಗ ದೃಶ್ಯ ಇವರ ನಟನ ಕಲೆಯ ಕಿಡಿಗಳಾಗಿ ಸಿಡಿದವು. ಶ್ರೀರಂಗರ 'ಎಡವಿದ ಕಂದೀಲು' ಅಭಿನಯಿಸುತ್ತ ಸ್ವಂತ ಅನುಭವವೊಂದು 'ಎಡವಿದ ತಂಬಿಗೆ' ಎಂಬ ದೃಶ್ಯವಾಯಿತು. ನಾಟಕಗಳಲ್ಲಿ ಪಾತ್ರ ವಹಿಸುವುದಕ್ಕಿಂತ ವೈಯಕ್ತಿಕವಾಗಿ ಅಭಿನಯಿಸಿದ್ದೇ ಹೆಚ್ಚು....ಎಂತಲೇ ಶ್ರೀರಂಗರ ನಾಟಕಗಳ ಚಮತ್ಕಾರಪೂರ್ಣ ಮಾರ್ಮಿಕ ಭಾಗಗಳನ್ನು ಇವರು ತಮ್ಮ ಅಭಿನಯದ ಅನುಕೂಲತೆಗೆಂದು 'ಕಾಮದಹನ' ಸಂಗ್ರಹದಲ್ಲಿ ಆಯ್ದು ಪ್ರಕಟಿಸಿದರು.

ಆ ಐದು ವರುಷಗಳಲ್ಲಿ (೧೯೩೦–೩೫) ಇಂಥ ಊರೆನ್ನಲಿಲ್ಲ— ಇಂಥ ಶಾಲೆಯೆನ್ನಲಿಲ್ಲ. ಕಾಡಿ ಬೇಡಿಯಾದರೂ ಆಮಂತ್ರಣ ಪಡೆದು ಉತ್ತರ ಕರ್ನಾಟಕದಲ್ಲೆಲ್ಲ ಓಡಾಡಿದರು. ನಾಲ್ಕು ಜನ ಗೆಳೆಯರು ಸೇರಿದಾಗ ಇವರು ಇದ್ದರಾಯಿತು. ಇವರನ್ನು ಎಬ್ಬಿಸಿದ್ದೇ—ಇವರು ಎದ್ದದ್ದೇ. 'ಧಡ–ಧಡ....ಯಾರದು ?....ನಾನು; ಬಾಗಲ' ಎಂದು 'ಎಡವಿದ ತಂಬಿಗೆ' ಸುರುವಾಯಿತೇ. ಹೆಣ್ಣಿನ ಮಾತು ಬಂದಾಗ ಮೈ ಮಣಿಸಿ, ಕೊರಳು ಕೊಂಕಿಸಿ, ಬೆರಳು ಬಳ್ಳಿಯಾಡಿಸಿ ಮಾತು ಎಳೆಯುವುದನ್ನು ನೆನಸಬೇಕು.

ಸೀರೆಯುಟ್ಟು ವೇಷ ಕಟ್ಟಬೇಕಾಗಿಲ್ಲ. ಎದುರಿಗೆ ಇವರು ಮಾತಾಡುತ್ತಿದ್ದರೆ ಸಾಕು: ಯಾರೋ ಒಬ್ಬಳು ಸುಳಿದಾಡಿ ಮಾತಾಡಿ ಹೋದಂತೆ ಕಣಸು ಕಾಣುತ್ತೇವೆ. ಆಗಿನಿಂದ ಈಗಿನ ವರೆಗೆ ಹಲವರು ಇವರನ್ನು ಅನುಕರಿಸಲು ಯತ್ನಿಸಿದರು. ಆದರೆ ಅವು ಇನ್ನೂ ಪ್ರಯೋಗಗಳೇ.

ಮಲ್ಲಸಜ್ಜನ ವ್ಯಾಯಾಮ ಶಾಲೆಯ ಈ ಲಾಠೀ ಗುರು 'ಮಕ್ಕಳ ಕೂಟ'ಕ್ಕೆಂದು ಕಾರಂತರ ಪುತ್ತೂರಿಗೆ ಹೋದ. ಕಾರಂತರ ಜೀವನ ಸಾಹಸ, ಅವರ ವಿಲಕ್ಷಣ ಪ್ರಯೋಗಗಳು ಇವರ ದೃಷ್ಟಿಯನ್ನೆಳೆದವು ಅಂದಿನಿಂದ ಪ್ರಯೋಗಪಟುವಾಗಿ ಕಂಡ ಕಡೆಗೆ ಕೈಯಿಕ್ಕ ತೊಡಗಿದರು.

೧೯೩೨ ರಲ್ಲಿ ರಾಗಿಣೀ ದೇವಿ ಬಂದಳು ಧಾರವಾಡಕ್ಕೆ. ಅವಳ ಆ ಗಾನ ಮಾಧುರಿ, ನೃತ್ಯವೈಖರಿ ಈ ಪ್ರಯೋಗಶೀಲ ಉತ್ಸಾಹಿ ನಟನನ್ನು ಸೆಳೆದವು. ಅಂದೇ ಗೆಜ್ಜೆ ಕೊಂಡದ್ದು. ಸುರುವಾಯಿತು – ಕೂತಲ್ಲಿ ನಿಂತಲ್ಲಿ ಹೆಜ್ಜೆ ಹಾಕುವುದು. ಕಾಲಿಗೊಂದು ತಾಳ ಹತ್ತಿತೋ—ಅಂದೇ ನಿಲುಗನ್ನಡಿ ತಂದರು. ಎರಡು ಕೈ ಎರಡು ಹಾವಾಗಿ ಆಟವಾಡಿದವು. ಹಸ್ತ ಹೆಡೆಯಾಗಿ, ಬೆರಳು ಕಣ್ಣಾಗಿ ಕುಣಿದವು. ಆ ಸರ್ಪಪ್ರಣಯದ ಆರ್ದ್ರವಾದ ನೋಟ, ಆ ಬೇಟ, ಆ ಕೂಟ—ವಿರಹಿಗಳ ಎದೆ ಉರಿಸಿತು. ಅಂದಿನ ಆ ಪ್ರಥಮ ಪ್ರಯೋಗದಲ್ಲಿ ಇಂದಿನ ಈ ಆಸೆ ನಿಂತಿತ್ತು.

ಆಗಲೇ ಉದಯಶಂಕರರ ನಾಟ್ಯಮಂಡಲ ಹುಬ್ಬಳ್ಳಿಗೆ ಬಂತು. ನೋಡಿ ಅವರ ಹುಚ್ಚು ಹಿಡಿಯಿತು ಇವರಿಗೆ. ಅವರ ಎಲ್ಲ ಪ್ರಯೋಗಗಳಿಗೂ ಹಾಜರ. ಮಂಡಲ ಬೆಳಗಾವಿಗೆ–ಪುಣೆಗೆ ಹೋದರೆ ಶ್ರೀನಿವಾಸರು ಹಿಂದೆ ಹಿಂದೆ ನಡೆದರು. ಮುಂಬೈಗೆ ಹೋದರೆ ಅಲ್ಲಿಗೂ ಬೆನ್ನು ಹತ್ತಿದರು. ಅಷ್ಟರಲ್ಲಿ ಶಂಕರರ ಪರಿಚಯವಾಗಿತ್ತು ಒಂದು ದಿನ ಉದಯ-ಶಂಕರರ ತಾಲೀಮುಖಾನೆಯ ದರ್ಶನ ಲಭಿಸಿತು. ಅಂದಿನಿಂದ ಇವರ ನೃತ್ಯ ಕಲೆಯ ಮೇಲೆ ಒಂದು ಹೊಸ ಬೆಳಕು ಬಿತ್ತು. ನೃತ್ಯಕ್ಕೊಂದು ನಯ ಬಂತು; ಅರ್ಥ ಬಂತು.

ಬಡತನದ ಜೀವನ. ಚಿಕ್ಕಂದಿನಲ್ಲೇ ಮದುವೆಯಾಗಿದೆ. ಕಂಡ ಕಲೆಗೆ ತಕ್ಕೆ ಬೀಳುವ ಈ ಕಾಲೇಜ ಕುವರನಿಗೆ ಮನೆಯವರ ಸಹಾಯ ನಿಲುಕ

ಬೇಕಲ್ಲ. ಹೆಂಡತಿ ಗಂಡನೊಡನೆ ನಿಲ್ಲಬೇಕಷ್ಟೇ. ಕಾಲೇಜ ಅಭ್ಯಾಸದ ಹಟ ಬೇರೆ. ಕಲೆಯದೊಂದು ಹೆಚ್ಚಿನ ಹುಚ್ಚು. ಸಂತೆಗೆ ಹೋಗಿ ಕಾಳು ತಾರದೆ, ಸಿನೆಮಾ ನೋಡಿ ಸರಿ ರಾತ್ರಿಗೆ ಮನೆಗೆ ಬಂದದ್ದೆಷ್ಟು ಸಲವೋ ! ಬರುವಾಗ ಜೇಬು ತುಂಬಿ ತಂದ ಚುರಮುರಿ ಕಾಳೇ ಆಹಾರ–ಈ ನವ ದಂಪತಿಗಳಿಗೆ, ದಾರಿಯಲ್ಲಿ ಕಲಾಪ್ರಿಯ 'ಹುಚ್ಚ'ರೊಡನೆ ಮಾತಾಡುತ್ತ ಅವರನ್ನು ಮನೆಯ ವರೆಗೂ ಸಾಗಿಸಿಕೊಂಡು ಬರುವುದು. ಅವರಿಗೆ ಈ ಸುದಾಮನ ಆತಿಥ್ಯ ಸಲ್ಲಬೇಕು.

ಶ್ರೀನಿವಾಸರಿಗೆ ಮೊದಲು ಹಿಡಿದ ಹುಚ್ಚು ಸಾಹಿತ್ಯ. ಅದಕ್ಕೆ ಪ್ರೇರಣೆ ಯೆಂದರೆ ಇವರ ರಸಮಯ ದಾಂಪತ್ಯ. ಹೆಂಡತಿಯೊಡನಾಡಿದ 'ಹುಚ್ಚು-ಹುಚ್ಚು' ಮಾತುಗಳೇ ಇವರ ಕಲೆಯ ಕುಂಚಿನಿಂದ ಬಣ್ಣಗೊಂಡು 'ಸಂಪಿಗೆ' ಯಾಗಿ ಪರಿಮಳಿಸಿದವು. "ಸಂಪಿಗೆ"ಯಲ್ಲಿಯ ಕತೆಗಳು ನಿಜವಾಗಿ ಪ್ರಣಯದ ಹುಚ್ಚಾಟಗಳೇ. ಅಲ್ಲಿ ಇವರು ಬಾಳುತ್ತಿದ್ದ ಬಡತನದ ಜೀವನಕ್ಕೆ ಎಡೆಯಿಲ್ಲ; ತಾರುಣ್ಯದ ರಸವಿಲಾಸ ಹರಿದಿದೆ ಆ ಕತೆಗಳಲ್ಲಿ. "ಹೊಸ ಬಾಯಿ"ಯ ಉಡುಗೊರೆ; "ಅವಳ ಕಾಗದ"ದ **'ಹೆಡ್ಡತಿಯ ನಮಸ್ಕಾರ'** "ತಲೆ ಶೂಲಿ"ಯ ಆನಂದ, "ಸಂಪಿಗೆ" ಕವನ, "ಒಂದೇ ಬಿಲ್ಲಿ"—ಇವೆಲ್ಲ ಇಂದಿಗೂ ನವೀನವಾಗಿ ಹರಿಯುವ ಪ್ರಣಯಗಂಗೆಯ ಝರಿಗಳು.

ಮುಂದೆ ಪ್ರೇಮ ಪತ್ರಿಕೆ ಕಟ್ಟಿಕೊಂಡರು. ತಾವು ಒಳ್ಳೆಯ ನಟ ರಾಗಿದ್ದುಕೊಂಡು ಎಂ. ಪೀರರನ್ನು ನಟವರ್ಯರನ್ನಾಗಿ ಎತ್ತಿ ಹಿಡಿದು ಒಂದು ಲೇಖನ ಬರೆದರು ತಮ್ಮ ನೃತ್ಯಕಲೆಯ ಸಾಧನೆಯಲ್ಲಿ ಕಂಡ ಉದಯ-ಶಂಕರರ ಪರಿಚಯವನ್ನೂ ಬರೆದು ಪ್ರೇಮದಲ್ಲಿ ಪ್ರಕಟಿಸಿದರು. ಆ ಲೇಖನ ದೊಡನೆ ಉದಯಶಂಕರರ ಒಂದೆರಡು ನೃತ್ಯಭಂಗಿಗಳೂ ಇದ್ದವು. ಆ ಚಿತ್ರ ದಲ್ಲಿಯ ಉದಯಶಂಕರರ ಹೋಲಿಕೆ ಶ್ರೀನಿವಾಸರಲ್ಲೂ ಕಂಡಿತು. ಆದರೆ ಆ ಸುಖ, ಆ ಅನುಕೂಲ ಇವರಿಗೆಲ್ಲಿ ? ಆ ಬೆಂಬಲ ಇವರಿಗೆ ದೊರೆತರೆ ಇವರೊಬ್ಬ ಅಭಿನವ ಶಂಕರರಾದಾರು.

ಮುಂದೆ ಕಾಲೇಜಿನಲ್ಲಿ, ನಾಡಹಬ್ಬದಂಥ ಉತ್ಸವಗಳಲ್ಲಿ ಇವರ ನೃತ್ಯ ಪ್ರಯೋಗಗಳು ನಡೆದವು. ಇವರು ತಮ್ಮ ಕಲೆಯ ವ್ಯಾಪ್ತಿಯನ್ನು

ಧಾರವಾಡದ ವನಿತಾಸೇವಾ ಸಮಾಜದಲ್ಲಿ ಮುಂದುವರಿಸಿದರು. ಅಲ್ಲಿಯ ವಿದ್ಯಾರ್ಥಿನಿಯರಿಗೆ ನೃತ್ಯಕಲೆಯ ಶಿಕ್ಷಣ ಕೊಟ್ಟದ್ದಾಯಿತು.

ಜಮಖಂಡಿ ಸಾಹಿತ್ಯ ಸಮ್ಮೇಲನ ವೇದಿಕೆಯ ಮೇಲೆ ನಮ್ಮ ನಾಡಿನ ಹಿರಿಯ ಸಾಹಿತಿಗಳ ಸಮ್ಮುಖದಲ್ಲಿ ಇವರದೊಂದು ಪ್ರಯೋಗ ನಡೆಯಿತು. 'ತುಂಗಾತೀರ', 'ಭಸ್ಮಾಸುರ-ಮೋಹಿನಿ', 'ರಾಧಾಕೃಷ್ಣ' ನೃತ್ಯಗಳು—ನಮ್ಮ ಜನರ ಕಣ್ಣ ಹಬ್ಬಗಳಾದವು.

ಇಷ್ಟರಲ್ಲಿ ಇವರದೊಂದು ಮೇಳವೇ ಮೇಳೈಸಿತ್ತು. ಬಳ್ಳಾರಿಯ ನಟಶ್ರೇಷ್ಠ ರಾಘವಾಚಾರ್ಯರಿಂದ ಇವರ 'ಕನ್ನಡ ತಾಂಡವ ಮಂಡಲ' ಮೊದಲಾಯಿತು.

ಶ್ರೀನಿವಾಸರು ತುಂಬ ಉತ್ಸಾಹಿತರಾದರು. ಗುಬ್ಬಿ ಕಂಪನಿಯವರಿಗೆ ಒಂದು ನಾಟಕದಲ್ಲಿ ಸಭಾನೃತ್ಯ ಹೊಂದಿಸಬೇಕೆಂದು ಆಸೆಯಾಯಿತು—ಕರೆ ಬಂತು ಶ್ರೀನಿವಾಸರಿಗೆ.

ಅಲ್ಲಿ ದೊರೆತ ಅನುಕೂಲ-ಪ್ರೋತ್ಸಾಹಗಳ ಜತೆಗೆ, ದಕ್ಷಿಣ ಭಾರತದ ಒಂದೆರಡು ಫಿಲ್ಮ್‌ಕಂಪನಿಯವರನ್ನು ಇವರ ಕಲೆ ಆಕರ್ಷಿಸಿತು. ಕೆಲವು ಚಿತ್ರಗಳಲ್ಲಿ ನೃತ್ಯ ದಿಗ್ದರ್ಶಕರಾಗಿ ಕೆಲಸ ಮಾಡಿದರು.

ಇಷ್ಟರಿಂದಲೇ ತೃಪ್ತಿಯಾಗಲಿಲ್ಲ. ಕೇರಳದ ಕಥಕ್ಕಲಿ ನೃತ್ಯ ಕಲಿಯುವ ಹಂಬಲ ಹೇಗೋ ಸರಿಪಡಿಸಿಕೊಂಡು ಹೊರಟರು. ನಾಲ್ಕು ತಿಂಗಳಿನ ತಪಸ್ಸು ಎಂಬಂತೆ, ಗರಡಿ ಸಾಧನದಂತೆ ಆ ಗುರುಪೀಠದಲ್ಲಿ ಅಭ್ಯಾಸ ಮಾಡಿದ್ದಾಯಿತು. ಅಲ್ಲಿಯ ಕಲಾಭ್ಯಾಸವೊಂದು ಇಂದಿನ ವಿದ್ಯಾಶಾಲೆಗಳಲ್ಲಿಯಂತೆ ನಿತ್ಯನಿಯಮವಲ್ಲ. ಗುರುವಿನ ಒಲವರಿತು ನಡೆಯಬೇಕು. ಅಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸಲ್ಲುವ ಗೌರವ ಒಂದೇ ಬಗೆಯದು. ಅದೊಂದು ಪುರಾಣಕಾಲದ ಗುರು-ಶಿಷ್ಯ ಸಂಬಂಧ. ಆದರೆ 'ಫೀ' ಮಾತ್ರ ಇಂದಿನ ಕಾಲೇಜಿಗೂ ಮೀರಿದ್ದು. ಈ ಕಾಲದಲ್ಲೂ ಕಥಕ್ಕಲಿ ನೃತ್ಯಕಲೆ ಬದುಕಿ ಬಾಳುತ್ತಿದೆ.

ಈ ಕಲೋಪಾಸಕನಿಗೆ ನೃತ್ಯಕಲೆ ಶಾಸ್ತ್ರಬದ್ಧವಾಗಿ ಪರಿಚಯವಾಯಿತು. ಕ. ಸಾ. ಪರಿಷತ್ತಿನ ಬೆಳ್ಳಿಯ ಹಬ್ಬದ ಉತ್ಸವದಲ್ಲಿ ನಡೆದ ಇವರ

ಪ್ರಯೋಗ ಅಪೂರ್ವವಾಗಿತ್ತು. ಅಂದು ಜಮುಖಂಡಿಯಲ್ಲಿ ನಡೆದ ಪ್ರಯೋಗ ಇಂದು ಶಾಸ್ತ್ರೀಯವಾಗಿ ಮುಂದುವರಿದು ನಯವಾಗಿ ಬಹುಮುಖವಾಗಿ ಕೊನರಿ ನಿಂತುದನ್ನು ಕಂಡು ಮೆಚ್ಚಿದರು ನಮ್ಮ ಜನ.

'ತಲ್ಲೀ ಪ್ರೇಮ' ಎಂಬ ತೆಲಗು ಚಿತ್ರದಲ್ಲಿ ಶ್ರೀನಿವಾಸರು ಸ್ವತಃ ಕಾಮ-ರತಿ ನೃತ್ಯವೊಂದನ್ನು ಬಹುರಮ್ಯವಾಗಿ, ಕಲಾಪೂರ್ಣವಾಗಿ ತೋರಿಸಿದರು. ಅಲ್ಲಿಯ ಹಸ್ತವಿನ್ಯಾಸ, ಹೆಜ್ಜೆಯ ತಾಳ-ಲಯಗಳು, ದೃಷ್ಟಿಯ ಅರ್ಥಪೂರ್ಣ ಚಲನವಲನ, ಆ ಕೊರಳು, ಆ ಕಟಿ ಅದೆಷ್ಟು ಕಲಾಮಯವಾಗಿ ಆಟವಾಡಿದವು! ಆ ಕೈಚಳಕ ಹೃದಯಂಕ್ಕೊಂದು ಅರ್ಥ ಬೋಧಿಸಿತು. ಆ 'ಮುದ್ರೆ'ಗಳೋ— ನೃತ್ಯದ ಜೀವಜೀವಾಳ. ಮನ್ಮಥನ ಬಾಣ ಹೂವಿನದಾದರೂ ಅದರ ಕೂರ್ಪು ಇನ್ನು ಯಾವುದುಕ್ಕುಂಟು? ಬರಿ ಕೈ ಎಳೆದು ಬಿಟ್ಟ ಬಾಣವೇ ವಿರಹಿಗಳ ಎದೆ ಚುಚ್ಚಿದಂತೆ—ಅಷ್ಟು ಪರಿಣಾಮಕಾರಿಯಾಗಿತ್ತು, ಆ ದ್ವಂದ್ವನೃತ್ಯ. ನಮ್ಮ ನಾಡಿನ ದುರ್ದೈವವೆನ್ನಬೇಕು; ನಮ್ಮಲ್ಲಿಯ ಕಲಾಪ್ರೇಮಿಗಳ ಕಣ್ಣು ಹೊರನಾಡಿನಿಂದ ಇನ್ನೂ ಕಿತ್ತಿಲ್ಲವೆನ್ನಬೇಕು; ನಮ್ಮಲ್ಲಿಯ ಸಿರಿವಂತರ ಹಣಕ್ಕೆ ಬ್ಯಾಂಕಿನ ಬಡ್ಡಿಯಲ್ಲದ ಬಳಕೆ ಬೇಡವಾಗಿರಬೇಕು. ಎಂತಲೇ ಈ ಯುಗದಲ್ಲಿಯೂ ಕನ್ನಡ ಸಿನೆಮಾ ಕಂಪನಿಗಳು ಒಂದು—ಒಂದು. 'ಗುಬ್ಬಿ ಬಾಲಾಜಿ'ಯವರ **'ಸುಭದ್ರ'**ದಲ್ಲಿ ಶ್ರೀನಿವಾಸರು ನೃತ್ಯ ದಿಗ್ದರ್ಶಕರಾಗಿ ಬಹಳ ಚೆನ್ನಾಗಿ ಕೆಲಸಮಾಡಿದ್ದಾರೆ.

ಮದರಾಸಿನಲ್ಲಿ ಒಂದು ನೃತ್ಯಕಲಾಶಾಲೆಯನ್ನು ಸ್ಥಾಪಿಸಿದ್ದಾರೆ. ದಕ್ಷಿಣದ ಸುಪ್ರಸಿದ್ಧ ನಟಿ ಕಾಂಚನಮಾಲೆಗೆ ನೃತ್ಯಗುರುವಾಗಿದ್ದಾರೆ.

ಈ ಕೆಲಸ-ಕಾರ್ಯಗಳಲ್ಲೂ ಇವರು ಸಾಹಿತ್ಯದ ಕೈ ಬಿಟ್ಟಿಲ್ಲ. 'ದೀಪದ ಕೆಳಗೆ' ಎಂಬ ಇವರ ಕಾದಂಬರಿ ಫಿಲ್ಮಕಂಪನಿಗಳಲ್ಲಿ ಕಂಡ ಜೀವನದ ಒಂದು ಭಾವಕಥೆ. ಇಲ್ಲಿಯ ಮನೋವಿಶ್ಲೇಷಣ ಬಹಳ ಕುತೂಹಲಕಾರಿಯಾಗಿದೆ. ಪ್ರೇಮ ಪತ್ರಿಕೆಯನ್ನು ಪುಸ್ತಕ ರೂಪದಲ್ಲಿ ಇಂದಿಗೂ ಪ್ರಕಟಿಸುತ್ತಿದ್ದಾರೆ. ಮದರಾಸಿನ ರೇಡಿಯೋದಲ್ಲಿ ಕನ್ನಡ ಸುದ್ದಿಯ ಸೂರಪ್ಪ ಕೆಲದಿನ ಇವರೇ ಆಗಿದ್ದರು. ಮೈಲಾರಪುರದಲ್ಲಿ ಒಂದು ಕನ್ನಡ ಚರ-ವಾಚನಾಲಯ ನಡೆಸಿದ್ದಾರೆ. ಒಂದು ಕಿಸೆಯಲ್ಲಿ 'ಪ್ರೇಮ', ಒಂದರಲ್ಲಿ ವಾಚನಾಲಯ, ಇನ್ನೊಂದ

ರಲ್ಲಿ ನೃತ್ಯ, ಮತ್ತೊಂದರಲ್ಲಿ ಸಿನೆಮಾ. ಹೀಗೆ ನೂರು ಕೆಲಸ ಕಟ್ಟಿಕೊಂಡರೂ ಹೊಸ ವಿಚಾರ ಬಂದರೆ ಅದನ್ನು ಆರಂಭಿಸುವ ಉತ್ಸಾಹ ಇವರಲ್ಲಿ ಚಿರಂತನವಾಗಿದೆ.

ಕೈಕೊಂಡ ಕೆಲಸ ಪೂರೈಸುವ ಮುನ್ನ ಇನ್ನಷ್ಟು ಕೆಲಸ ಕಟ್ಟಿಕೊಳ್ಳುವ ಹುರುಪು ಇವರ ಮೈಗೂಡಿಕೊಂಡು ಬಂದಿದೆ. ಒಂದರ ವ್ಯವಸ್ಥೆ ಅಷ್ಟು ಕೆಟ್ಟರೆ ಇನ್ನೊಂದರಲ್ಲಿ ಅಷ್ಟು ಒಳ್ಳೆಯ ಕೆಲಸ ಮಾಡಿರುವುದು ಇವರ ರೀತಿ.

ನೃತ್ಯಕಲೆಯ ಹಾಗೆ ಸಾಹಿತ್ಯಕ್ಕೆ ಇವರು ಹತ್ತಿ ಬಿದ್ದಿದ್ದರೆ, ಇಲ್ಲವೆ ಸಾಹಿತ್ಯ ಕಾರ್ಯ ನಡೆದಾಗ ನೃತ್ಯಕಲೆ ಇವರನ್ನು ಸೆಳೆಯದಿದ್ದರೆ ಇವರಿಂದ ಇನ್ನೂ ಅನೇಕ ಬಗೆಯ ಸಾಹಿತ್ಯ ನಿರ್ಮಾಣವಾಗುತ್ತಿತ್ತು. ಆದರೆ ನಮ್ಮಲ್ಲಿ ಸಾಹಿತ್ಯ ಸೇವೆಗೆ ಬದ್ಧಕಂಕಣರಾದ ಸಾಧಕರು ಹಲವರಿದ್ದಾರೆ. **ಸಾಹಿತ್ಯ ಸಿದ್ಧರೂ** ಕೆಲವರಿದ್ದಾರೆ. ಎಂತಲೇ ಇವರಿಂದ ನಿರೀಕ್ಷಿಸಿದ ಸಾಹಿತ್ಯ ಕಾರ್ಯವೊಂದು ಲೋಪವಾಗಿ ಕಂಡುಬರುವದಿಲ್ಲ. ಆದರೆ ಇವರಿಗೆ **'ಕುಣಿತದ ಹುಚ್ಚು'** ಹಿಡಿದಿರದಿದ್ದರೆ ನಮ್ಮ ನಾಡಿನ ನಾಡಿಯೊಂದು ದುರ್ಬಲವಾಗಿರುತ್ತಿತ್ತು.

ಆದರೆ ಈ ಕಲಾವಿದನ ಸೇವೆ ನಮ್ಮ ನಾಡಿಗೆ ಪೂರ್ತಿಯಾಗಿ ಎಂದು ಸಲ್ಲಬೇಕೋ... ಈ ಹಿತ್ತಲಗಿಡ ಎಂದು ಮದ್ದಾಗಬೇಕೋ...

(೧೯೪೦)

೫. ನಾನು ಕಂಡ ಕೆಲ ಕನ್ನಡ ಕವಿಗಳು

ಕವಿಗಳ ಮಟ್ಟಿಗೆ ಕನ್ನಡ ನುಡಿಗೆ ಬಡತನವಿಲ್ಲ. ನಾಡು ಹರಿದು ಹಂಚಿದರೂ ಎಲ್ಲ ಹರಕಲು ನೆಲದಲ್ಲಿಯೂ ಕವಿಗಳ ಬೆಳೆ ಹುಲುಸಾಗಿದೆ. ಎಂತಲೇ ಕವಿಗಳಿಗೆ, ಕವಿಕರ್ಮಕ್ಕೆ ನಿಯಂತ್ರಣ ಅವಶ್ಯಕತೆ ಎನಿಸಲಾರದು. ಕವಿಗಳ ಮೇಲೆ ಮತ್ತು ಕವಿತೆ ಬರೆಯುವ ಕಾಗದದ ಕೋಟಾದ ಮೇಲೆ ನಿಯಂತ್ರಣ ಬೇಕೆಂದು ಕೆಲವರು ವಾದಿಸಬಹುದು. ಆದರೆ ನಾನಿಲ್ಲಿ ಹೇಳಹೊರಟಿರುವುದು ಕಾವ್ಯವಿಮರ್ಶೆಯೂ ಅಲ್ಲ; ಕವಿತಾ ನಿಯಂತ್ರಣದ ಪ್ರತಿಪಾದನೆಯೂ ಅಲ್ಲ.

ಪಾಶ್ಚಾತ್ಯ ಕವಿಗಳು ಜೀವಂತರಾಗಿದ್ದಾಗ ಪ್ರಸಿದ್ಧಿಗೆ ಬರುವುದು ವಿರಳವಂತೆ. ಕನ್ನಡದ ಕವಿಗಳು ಮಾತ್ರ "ಇಹೈವ ಫಲಮಶ್ನುತೇ" ಎಂಬ ಗೀತಾವಾಕ್ಯದ ಮೇಲೆ ವಿಶ್ವಾಸವಿಟ್ಟಂತೆ ಕಾಣುತ್ತದೆ. ಅವರು ಪ್ರತಿಯೊಂದು ಸಭೆ ಸಮ್ಮೇಲನದಲ್ಲಿಯೂ ತಮ್ಮ ಕವಿತೆಗಳನ್ನು ಹಾಡಿತೋರಿಸಿ ಕೀರ್ತಿಪತಾಕೆ ಯನ್ನು ಜೀವನಕಾಲದಲ್ಲಿಯೇ ಹಾರಿಸಿ ಬಿಟ್ಟಿದ್ದಾರೆ.

ಈ ಪರಂಪರೆಯನ್ನು ಹಾಕಿಕೊಟ್ಟವರು ನಮ್ಮ ಹಿರಿಯ ಕವಿಗಳೇ. ಅವರು ಹಾಗೆ ಮಾಡಲೇ ಬೇಕಾಗಿತ್ತು. ಇಂದಿನ ಹಿರಿಯ ಕವಿಗಳಲ್ಲಿ ಹೆಚ್ಚಿನವರು ಈ ಶತಕದ ಮೂರನೆಯ ದಶಕದಿಂದ ಆರಂಭವಾದ ಕನ್ನಡದ ಪುನರುಜ್ಜೀವನ ಕಾಲದಲ್ಲಿ ತಲೆಯೆತ್ತಿದವರು. ಅವರು ಸಾಹಿತ್ಯದ ರಚನೆ ಯಲ್ಲದೆ ಸಾಹಿತ್ಯ ಪ್ರಚಾರದ ಪಂಜನ್ನೂ ಹಿಡಿದು ನಾಡನ್ನು ಎಚ್ಚರಗೊಳಿ ಸಲು ಊರೂರು ಸುತ್ತಬೇಕಾಯಿತು. ಹೀಗೆ ನಮ್ಮ ನಾಡಿನ ಜನರಿಗೆ ನಮ್ಮ ಕವಿಗಳು—ಅನ್ಯಭಾಷೆಯ ಜನರಿಗೆ ಅವರ ಕವಿಗಳಿಗಿಂತ—ಹೆಚ್ಚು ಪರಿಚಿತರಾಗಿದ್ದಾರೆ. ಅನೇಕ ಸಭೆ ಸಮ್ಮೇಲನಗಳಲ್ಲಿ ಭಾಗವಹಿಸಿ ಮತ್ತು ವ್ಯವಹಾರದಲ್ಲಿ ಅನೇಕ ಕವಿಗಳ ನಿಕಟ-ದೂರ ಸಂಪರ್ಕ ಬಂದು, ನಮ್ಮ ಕವಿಗಳ ರೀತಿ-ನೀತಿ, ಭಾವ-ಭಂಗಿ, ಸ್ವಭಾವ-ವೃತ್ತಿಗಳ ಅಪೂರ್ವವೈವಿಧ್ಯ ನನ್ನ ಮನಸಿನಲ್ಲಿ ಅಚ್ಚೊತ್ತಿದೆ. ಕವಿಗಳೆಲ್ಲ ಒಂದು ಜಾತಿ, ಭಾವಜೀವಿ

ಗಳೆಂದು ಹೇಳಬಹುದಾದರೂ ಒಬ್ಬೊಬ್ಬ ಕವಿಗೂ ಒಂದಲ್ಲ, ಹಲವು ವೈಶಿಷ್ಟ್ಯಗಳಿವೆ. ಕೆಲವನ್ನು ಇಲ್ಲಿ ಹೇಳುತ್ತೇನೆ.

* * * *

ಬೇಂದ್ರೆಯವರು ಕಾವ್ಯಗಾಯನ ಮಾಡುವುದನ್ನು ನೋಡಿದ್ದೀರಾ ? ಅವರಂತೆಯೇ ಇತರರೂ ತಾರಸ್ವರದಲ್ಲಿ, ಜಾನಪದ ಧಾಟಿಯಲ್ಲಿಯೇ ಕವಿತೆಗಳನ್ನು ಹಾಡುವುದನ್ನು ನೀವು ಕೇಳಿರಬಹುದು. ಆದರೆ ಅವರ ಆ ಕೊಂಕಿಸಿದ ಕಣ್ಣಿನ ನೇರ ನೋಟ, ಅರೆಬಾಯಿ ಡೊಂಕಲ್ಲದ ನಗೆ, ಹಾವಭಾವದ ಕೈತಿರುವು ಅವರವೇ. ಅದು ಬೇಂದ್ರೆ ಭಂಗಿ, "ಕಾಪಿರೈಟ್!" ಕವಿತೆ ಹೇಳಲು ಬಾಯಿ ತೆರೆದಾಗ "ಕಣ್ ಒಳಗ ಹೊರಳೀಸಿ, ಎದೆ ಮುಗುಳನರಳೀಸಿ, ಹೂನೀರನುರುಳೀಸಿ" ಅಂದ ಹಾಗೆ ಹೊರಳಿ, ಅರಳಿ, ಉರುಳಿಸಿಯೇ ತೋರಿಸುತ್ತ ಹೋಗುವ ಬೇಂದ್ರೆಯವರನ್ನು ನೀವು ಒಮ್ಮೆ ಕಂಡರೆ ಆ ಕವಿತೆಯನ್ನೋದುವಾಗೆಲ್ಲ ಅಕ್ಷರ ಅಕ್ಷರವೂ ಬೇಂದ್ರೆ ಮೂರ್ತಿಯಾಗಿ ಎದ್ದು ನಿಲ್ಲುತ್ತದೆ. ಆದರೆ ಇಷ್ಟು ತನ್ಮಯತೆಯಲ್ಲಿ ಅವರು ಮುಳುಗಿದಂತೆ ಕಂಡರೂ ಶ್ರೋತೃಗಳ ಮೇಲೆಯೇ. ಅವರ ದೃಷ್ಟಿ–ಮಾಂತ್ರಿಕದೃಷ್ಟಿ.

ಅದೇ 'ಕುವೆಂಪು'ವನ್ನು ನೋಡಿರಿ. ಅವರು ಕವಿತೆ ಓದುವವರು; ರಾಗವಾಗಿ ಹಾಡುವವರಲ್ಲ. ಅವರ ತನ್ಮಯತೆ ಅದ್ಭುತವಾದದ್ದು. ಅವರ ಕವಿತೆ ಕೇಳುತ್ತ ಸಭೆ ಮಂತ್ರಮುಗ್ಧವಾಗುವುದು. ಆದರೆ ಅವರ ದೃಷ್ಟಿ ಸಭೆಯ ಮೇಲಿರುವುದಿಲ್ಲ. ತಮ್ಮ ಲೋಕದಲ್ಲೇ ಅವರ ಸಂಚಾರ. ಅವರನ್ನು ನಾನು ಮೊಟ್ಟಮೊದಲು ನೋಡಿದ್ದು ಹುಬ್ಬಳ್ಳಿಯ ಸಾಹಿತ್ಯ ಸಮ್ಮೇಲನದ ಕವಿಸಮ್ಮೇಲನಕ್ಕೆ ಅವರು ಅಧ್ಯಕ್ಷರಾಗಿ ಬಂದಿದ್ದಾಗ. ಅವರು ಆಗ ತಮ್ಮ 'ಕಲ್ಕಿ' ಕವನವನ್ನೋದಿದ ದೃಶ್ಯ ನನ್ನ ಕಣ್ಣಲ್ಲಿ ಕುಳಿತು ಬಿಟ್ಟಿದೆ. ಅವರ ಒಂದು ಪಕ್ಕದಲ್ಲಿ ಪುರುಷರೂ ಇನ್ನೊಂದರಲ್ಲಿ ಸ್ತ್ರೀಯರೂ ಕುಳಿತಿದ್ದರು. ಪುಟ್ಟಪ್ಪನವರು ತಮ್ಮ ಗಂಭೀರ ಸ್ವರದಲ್ಲಿ ಪುರುಷ ಸಭೆಯ ಕಡೆಗೊಮ್ಮೆ, ಸ್ತ್ರೀ ಸಭೆಯ ಕಡೆಗೊಮ್ಮೆ ಮುಖ ಹೊರಳಿಸಿ ಒಂದೊಂದೇ ಪಂಕ್ತಿಯನ್ನು ಉಚ್ಚರಿಸುತ್ತಿದ್ದರು. "ಆ ಕಡೆ ಉದ್ಯಾನ" ಎಂದರು; "ಈ ಕಡೆ ಸ್ಮಶಾನ" ಎಂದರು. ಪುನಃ "ಪೀತಾಂಬರಗಳ ಹೊದೆಯುವರಲ್ಲಿ" ಎಂದಾಗ, ಅವರ ಮುಖ, ಅಲ್ಲಿಯೇ ಪೀತಾಂಬರವನ್ನು ಹೊದ್ದವರೆಲ್ಲ

ಇರುವರೋ ಎಂಬಂತೆ ಪುರುಷರ ಕಡೆ ನೀಡಿತು; ಕೊನೆಯ ಸಾಲಿನ "ಕೌಪೀನಕೆ ಚಿಂದಿಯು ಸಿಗದಿಲ್ಲಿ" ಎಂದಾಗ ನಿಜವಾಗಿ ಪಿತಾಂಬರಗಳನ್ನೇ ಉಟ್ಟ ಸ್ತ್ರೀಯರ ಕಡೆ, ಅಲ್ಲಿಯೇ ತಾವು ಹೇಳುತ್ತಿರುವ ವಸ್ತುವನ್ನು ನಿರ್ದೇಶಿಸುವಂತೆ ಅವರ ಮುಖ ನೀಡಿತ್ತು. ಆದರೆ ಯಾರೂ ನಗಲಿಲ್ಲ; ಈ ಪ್ರಮಾದವನ್ನು ಗಮನಿಸಿರಲಿಕ್ಕಿಲ್ಲ ಕೂಡ. ಪುಟ್ಟಪ್ಪನವರು "ಗೋಮಟೇಶ್ವರ" ಕವನದಲ್ಲಿ "ಎದೆಯಿದ್ದರಿಲ್ಲಿ ನಗು, ನೋಡುವಂ" ಎಂದು ಆಹ್ವಾನವಿತ್ತಿದ್ದಾರೆ. ಸ್ವತಃ ಅವರೇ ಒಂದು ಗೋಮಟೇಶ್ವರ; ನಗ್ನತೆಗೂ ಗಾಂಭೀರ್ಯದಾನ ಮಾಡುವ ಆ ಸನ್ನಿಧಾನದಲ್ಲಿ ನಗುವ 'ಎದೆ' ಯಾರಿಗೆ?

* * * * *

ಕೀರ್ತಿಯನ್ನು 'ಶನಿ' ಎಂದವರು 'ಕುವೆಂಪು'. ಆದ್ದರಿಂದಲೆಯೋ ಏನೋ, ಯಾರು ಯಾವ ಸಂದರ್ಭದಲ್ಲಿ ಭಾಷಣಕ್ಕೆ ಕರೆದರೂ ಅವರು ತಮ್ಮ ಕಾವ್ಯಯೋಗದಿಂದೆದ್ದು ಬಂದವರೇ ಅಲ್ಲ. ಅವರನ್ನು ಅವರ ಗುಹೆಯಲ್ಲೇ ಕಾಣಬೇಕು. ಏಳು ವರ್ಷಗಳ ನಂತರ ೧೯೪೦ರಲ್ಲಿ ಧಾರವಾಡದ ಸಾಹಿತ್ಯ ಸಮ್ಮೇಲನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಅವರು ಬರಲೇಬೇಕಾದಾಗ ಅವರನ್ನು ಪುನಃ ಕಂಡೆ. ಅಂದು ಅವರು "ಸೂರ್ಯೋದಯ—ಚಂದ್ರೋದಯ"ವನ್ನು ತಮ್ಮದೇ ಆದ ಗಾಂಭೀರ್ಯದಿಂದ ಹಾಡಿದರು. ಮತ್ತೆ ಅವರನ್ನು ಕಾಣುವ ಯೋಗ ಇತ್ತ ಕಡೆಯ ಜನಕ್ಕೆ ಬರಲೇ ಇಲ್ಲ.

ಮತ್ತೊಮ್ಮೆ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕೋಣೆಯಲ್ಲಿ 'ಕುವೆಂಪು' ದರ್ಶನ, "ನೀವು ಯಾರು?" ಎಂದು ಕೇಳಿದರು. "ಅವರೇ ನೀವು?" ಎಂದರು. "ಜನ ಕರೆದರೆ ನೀವು ಯಾಕೆ ಬರುವುದಿಲ್ಲ?" ಎಂದೆ. "ಕೂತು ಮಾಡುವುದಕ್ಕೇ ಬೇಕಾದಷ್ಟು ಕೆಲಸವಿದೆ" ಎಂದರು. ನಿಜ, ಅವರಿಂದು ಕಂಡುಬರುವಂತೆ ಕೆಲಸ ಮಾಡಿದ್ದಾರೆ. ಇವರು ಕುಳಿತು ಬರೆದ ಸಾಹಿತ್ಯವನ್ನು ಬಹಳ ಜನ ಅರಗಿಸಿಕೊಂಡಾರೆನ್ನುವಂತಿಲ್ಲ; ಅಷ್ಟು ವೈಪುಲ್ಯ–ಅಂಥ ವಿವಿಧತೆ. ಆದರೆ ಅವರ ಪುಸ್ತಕಗಳಿಗಿರುವಷ್ಟು ಗಿರಾಕಿ ಇನ್ನಾವ ಕನ್ನಡ ಕವಿಗೂ ಇಲ್ಲವೆಂದು ಪುಸ್ತಕ ಭಂಡಾರಿಗಳು ಹೇಳುತ್ತಾರೆ. ಪುಟ್ಟಪ್ಪನವರ ಬರಹ ಬಹಳ; ಮಾತು ವಿರಳ, ಎಷ್ಟು ಬೇಕೋ ಅಷ್ಟೆ.

ಅವರು ವಾದವಿವಾದಕ್ಕಿಳಿಯುವುದೇ ಇಲ್ಲವೆಂದರೂ ಸಲ್ಲುವುದು. ಆದರೆ ಬೇಂದ್ರೆಯೋ ! ಮಾತಿಗಿಳಿದರೆ ಹಗಲು ರಾತ್ರಿ ಉರುಳಿದ್ದೂ ಅವರಿಗೆ ಗಮನ ವಿಲ್ಲ. ನಿಮ್ಮ ಸಮಸ್ಯೆಗಳು, ತಾಪತ್ರಯಗಳು, ಸಾಂಸಾರಿಕ ಕ್ಲೇಶ–ಕಲ್ಮಷ–ವೈಷಮ್ಯಗಳು, ಎಲ್ಲವನ್ನೂ ಬಗೆಹರಿಸಲು ಅವರು ಸದಾಸಿದ್ಧ. ತರ್ಕಕ್ಕಿಳಿದರೆ ಅವರ ಮಾತೇ ಕೊನೆಯಾಗಬೇಕು. ಬೇಕಾದಷ್ಟು ಹೊತ್ತು ಹೋಗಲೊಲ್ಲ ದೇಕೆ ! ಅವರು ಬರೆಯಬಯಸಿದ್ದನ್ನೆಲ್ಲ ಬರೆದಿದ್ದರೆ ಅವರು ಗ್ರಂಥ ನಿರ್ಮಾಣದಲ್ಲಿ ಪ್ರತಿ ಪುಟ್ಟಪ್ಪನೇ ಆಗುತ್ತಿದ್ದರು. ಆದರೆ ಅವರಿಗೆ ವೇಳೆಯೇ ಇಲ್ಲ. ಅವರಿಗೂ ಒಬ್ಬ ಬಾಸ್ವೆಲ್ಲ ಸಿಕ್ಕಿದ್ದರೆ ಅವರ ಸಂಭಾಷಣೆಗಳ ವರದಿ ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ರತ್ನವಾಗುತ್ತಿತ್ತೆಂದು ಒಮ್ಮೊಮ್ಮೆ ಅನಿಸುತ್ತದೆ.

* * * * *

ನಮ್ಮ 'ಯೆಂಡ್ಕುಡ್ಕ ರತ್ನ' ಮಡಿಕೇರಿಯಲ್ಲಿ (೧೯೩೦) ಕುಣಿದು—ಕುಣಿಸಿದ್ದನಂತೆ. ಮೊದಲಸಾರೆ ಅವರನ್ನು ಮುಂಬಯಿ ಸಾಹಿತ್ಯ ಸಮ್ಮೇಲನದಲ್ಲಿ (೧೯೩೫) ಕವಾಸಜೀ ಜಹಾಂಗೀರ ಭವನದಲ್ಲಿ ಕಂಡೆ.

"ಎಲ್ಲೋ ಚಂದ್ರ ಪೆಂಗೆ"

"ನಾಚ್ಕೆ ಇಲ್ವೇ ನಿಂಗೆ"—

ಎಂದಾಗ ಅವರು ಕುಡಿದಿಲ್ಲವೆಂದು ನಾನೆಣಿಸಲಿಲ್ಲ. ಆದರೆ ಆ ಮೂರ್ತಿ ನೋಡಿ ನಮಗೂ ಮದಿರೆಯಾಯಿತಂ. ಆಗ ಎಲ್ಲಾ 'ಹಸಿ' ದಿನಗಳು. ಈಗಿನಂತೆ 'Dry' ಅಲ್ಲ. ಎಂತಲೇ ಕುಡಿಯದ ಪೋಲೀಸರೂ ಇದ್ದಿಲ್ಲ. ಅದರಿಂದಲೇ ನಮ್ಮನ್ನು ಹಿಡಿಯಲೂ ಇಲ್ಲ. ಈ ಕವಿ ಬರಹದಲ್ಲಿ ಧಾರಾಳ. ಕಾಫಿ ತಿಂಡಿಗೂ ಪರವಾಯಿಲ್ಲ. ದೋಸೆ ಮಸಾಲೆಯೇ ಆಗಬೇಕೆಂದು 'ವಿ. ಸೀ.' ಹಾಗೆ ಹಟವಿಲ್ಲವಾದರೂ 'ಖಾಲಿ'ಯ ಹಟವೂ ಇಲ್ಲ. ಆದರೆ ವೇಷ ಮಾತ್ರ ತೀರ ಸಾದಾ. ಬುದ್ಧ ವಚನ ಪರಿಚಯ ಬರೆದಾಗಲಂತೂ ಬುರ್ಲಿ ಬಿಂದುಮಾಧವರ (ಇವರು ಕವಿಗಳಲ್ಲವಾದರೂ ವೇಷ ಯಾವ ಕವಿಗೂ ಕಡಿಮೆಯದಲ್ಲ.) ಸರಿಸಾಟಿ. ಬುರ್ಲಿ ಕಚ್ಚೆ ಹಾಕಿ ಪಂಚೆ ಉಟ್ಟು ನಾಲ್ಕು—ಇಲ್ಲವೇ ಮೂರು ಮೊಳ 'ಹಾಳು' ಮಾಡುತ್ತಾರೆ. ಆದರೆ ರತ್ನ ದುಂಡು ದಟ್ಟಿ ಸುತ್ತಿ ಅಂಥದನ್ನೇ

ಒಂದು ಅಷ್ಟರಲ್ಲೇ ಹೊದ್ದು ಹೊರಟರೆ ತೀರಿತು. ಆದರೂ ಈಚೆಗೆ ಒಂದು ಪುಟ್ಟ ಕಾಲೇಜ ಮೇಷ್ಟ್ರ ಅದಂದಿನಿಂದ ಒಂದು ರವಿಕೆ ಹಾಕುತ್ತಾರೆ. ಕಾಲೇಜಿನಲ್ಲಿ ಒಂದು ಕಾವಿ ಚಣ್ಣ–ಒಂದು ಕೋಟು ನೇಲಿಸುತ್ತಾರಂತೆ—ಪೋಲೀಸು ಡ್ಯೂಟಿ ಮೇಲೆ ಇದ್ದಂತೆ !

ಬೇಂದ್ರೆ ವೇಷದಂತೆ ಇನ್ನೊಬ್ಬ ಯಾರಾದರೂ ವೇಷಕಟ್ಟಲು ಸಾಧ್ಯವಿದೆಯೇ ? ಸಿಂಪಿಗನಿಗೆ . ಅವರು ಹೊಲಿಗೆಯ ಕಲೆಯ ಬಗ್ಗೆ, ತಮ್ಮ ರುಚಿವಿಶೇಷದ ಬಗ್ಗೆ ಹೇಳುತ್ತಾರೆ. ಸಿಂಪಿಗನೂ ವೇಷಬ್ರಹ್ಮ. ಹೇಳಿದಂತೆ ಹೊಲಿದರೆ ಅವನದೇನು ವೈಶಿಷ್ಟ್ಯ ? ಅಲ್ಲದೆ ಬೇಂದ್ರೆ ಹೇಳಿದಂತೆ ಅವನಿಗೆ ಹೊಲಿಯಲು ಬರಬೇಕಲ್ಲ ! ಯಾವದೋ ಕವನದ ಛಂದಸ್ಸಿನ ನಯ-ನಾಜೋಕು, ಶಯ್ಯೆಯನ್ನು ಬಟ್ಟೆಯಲ್ಲಿ ತಾ–ಎನ್ನುತ್ತಾರವರು—ಎಂದವನ ವಾದ. ನಾನು ಹೇಳುತ್ತೇನೆ : ಸಿಂಪಿಯೂ ಪೂರಾ ಕವಿ. ಒಮ್ಮೆ ಒಬ್ಬರಿಗೆ ಹೊಲಿದಂತೆ ಇನ್ನೊಮ್ಮೆ ಅವರಿಗೇ ಆದರೂ ಅವನು ಹೊಲಿಯಲಾರ.

"ವಿ. ಸೀ." ವೇಷ ನೋಡಿ. ಎಂಥ ನಯ–ಎಂಥ ನಾಜೋಕು ! ಅವರು ಅನುದಿನವೂ ಬಟ್ಟೆ ಬದಲಿಸಿದರೂ ಒಂದೇ ಶಿಸ್ತು. ಅವರಲ್ಲಿ ಮಾತ್ರ ಈ ಶಿಸ್ತಿನ ವೈವಿಧ್ಯ ಒಳಗಣ್ಣಿಗೇ ಕಾಣಬೇಕು. ಆದರೆ ಅವರ ಕವನ ಸಂಗ್ರಹಗಳ ಅಚ್ಚುಕಟ್ಟು ಎಷ್ಟು ನಯವೋ—ಅವರ ಬರವಣಿಗೆಯಲ್ಲಿ ಎಂಥ ಅಸಮಾಧಾನವನ್ನೂ ನುಂಗಿ ನಯವಾಗಿ ನುಡಿಯುವ ಒಪ್ಪವಿದೆಯೋ—ಅದೇ ವಿನಯ, ಅನುನಯ ಅವರ ನಡೆಯಲ್ಲಿ ಕಾಣಬಹುದು. 'ವಿ. ಸೀ.' ನಮ್ಮ ನಯದ ಪತಾಕೆ !

* * * * *

'ಮಧುರಚೆನ್ನ' ಹುಟ್ಟು ವೇದಾಂತಿ. ಬೆಳೆದು ಉಳಿದದ್ದೂ ಹಾಗೇ. ಇವರ ಅಸಡ್ಡೆಗೆ ಹಲ್ಲುಗಳೂ ಉಳಿದಿಲ್ಲ. ಅಪಾರವಾದ ಭಗವದ್ ಶ್ರದ್ಧೆ ಕ್ಷಣ ಕ್ಷಣಕ್ಕೆ ಕೈ ಮುಗಿಸುತ್ತದೆ. "ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು" ಎಂಬ ಭರವಸೆ ಹೇಳಿದರು. "ಬಯಕೆ ಬರುವುದರ ಕಣ್ಸನ್ನೆ" ಎಂದರು. ಇವೆಲ್ಲ ವೇದಾಂತದ ಬಯಕೆಗಳು. ಈ ಲೌಕಿಕದ ಬಯಕೆಗಳಿಗೆ ಕಣ್ಣೂ ಇಲ್ಲ, ಸನ್ನೆಯೂ ಇಲ್ಲ. ಈ ವೇದಾಂತಿ ರತ್ನಾಕರ

ವರ್ಣಿಯು ರಸಪಂಥದವರು. ಕೃಷ್ಣಪಾರಿಜಾತ ಆಟ, ಜನಪದ ಜೀವನ ಸಂಗೀತದಲ್ಲಿಯೂ ಅರವಿಂದ ತತ್ವದಲ್ಲಿಯೂ ಸಮಶ್ರದ್ಧೆ.

ಮಂಗಳೂರಿನ ಕಡೆಂಗೋಡ್ಲು ಶಂಕರ ಭಟ್ಟರಾದರೆ ಒಳ್ಳೆ ಗಂಭೀರ ಪ್ರಕೃತಿ. ಮಾತು ಆಡಿದರೆ ಆಡಿದರು, ಇಲ್ಲವಾದರೆ ಇಲ್ಲ. ಭೆಟ್ಟಿಗೆ ಬಂದವ ಸುಪ್ತ ಚೇತನದ ಹೋರಾಟದಲ್ಲಿ ಸಂಭಾಷಿಸಿ ಇವರ ಹಿರಿ ಹುಡುಗತನದ ರೂಪವನ್ನು ಮೆಚ್ಚುತ್ತಾನೆ. ಇವರದು, 'ಕಾಡ ಬಳಗದ ಸಸ್ಯಶಾದ್ವಲದ ಶಾಂತಿಯಲಿ ತರಗರೆದ ತತ್ವ'ಗಳನ್ನರಸುವ ಮೌನ. ಈಚೆಗೆ ಅವರ ಕವಿತೆಯೂ ಮೌನತಾಳಿದಂತಿದೆ.

ಆದರೆ ಅದೇ ಜಿಲ್ಲೆಯ ಗೋವಿಂದ ಪೈಗಳು ಮೌನವನ್ನೆಲ್ಲಿಂದ ತಂದಾರು ? 'ಅಲ್ಲವೊ' ಎನ್ನುತ್ತ ತಾರೀಖುಗಳ ತಾನದಲ್ಲಿ ತಾವು ಎದ್ದು ಬಂದವರನ್ನು ತಬ್ಬುತ್ತಾರೆ. ಬಾಯ್ತುಂಬ ಮಾತಾಡಿದರೂ ಎಲ್ಲವೂ ಪ್ರಮಾಣಬದ್ಧ–ಆಧಾರಪೂರ್ಣ–ಅಧಿಕಾರವಾಣಿ ಅವರ ಮಾತಿನಲ್ಲಿ. ಮುದಿ ಮುಖದ ಎಳೆನಗೆಯಲ್ಲಿ ನೀವು ತಲ್ಲೀನರಾಗಿ ಅವರಿಂದ ಪದ್ಯ ಹೇಳಿಸಲು ಬಯಸುವದಿಲ್ಲ. ಹುಬ್ಬಿನಿಂದ ನಗುತ್ತಾರವರು. ತುಂಬ ಔದಾರ್ಯ. ಮನೆಗೆ ಹಿರಿಯರೇ ಬರಲಿ, ಕಿರಿಯರೇ ಬರಲಿ, ಪೈಗಳ ಸ್ವಾಗತ ರೂಪಾಯದ್ದು. ಅದೇ ಆಸ್ಥೆ, ಅದೇ ಧಾರಾಳ ಎಲ್ಲದರಲ್ಲೂ. "ಮಂಗಳೂರಲ್ಲಿ ನುಸಿಕಾಟ; ಮಂಜೇಶ್ವರದಲ್ಲಿದ್ದುಕೊಂಡೇ ಮಂಗಳೂರಿನ ಕೆಲಸ ಮಾಡಿ" ಎಂದರು ನನಗೆ. (ಮಂಗಳೂರಿಗೆ ಹೊರಟಾಗ ನನ್ನಿಂದ ಮೂರಾಣೆ ಪಡೆದೇ ತಿಕೀಟು ತೆಗೆಸಿಕೊಟ್ಟರು) ಕಾರ್ಕಳದಲ್ಲಿ 'ಶಕ್ತಿ' ಅಚ್ಚಾಗುತ್ತಿದ್ದಾಗ ತಮ್ಮ ಲೇಖನದ ಕರಡು ಪ್ರತಿ (ಪ್ರೂಫ) ನೋಡಲು ಸ್ವಂತ ವೆಚ್ಚದಿಂದ ಅಲ್ಲಿಗೆ ಹೋಗಿಬರುತ್ತಿದ್ದರಂತೆ. ತಮ್ಮ ಬರವಣಿಗೆ ನಿರ್ದುಷ್ಟವಾಗಿ ಅಚ್ಚಿಸಲು ಅವರ ಹೆಣಗಾಟ. ಲೇಖನದ ಹಾಳೆಯ ಬುಡದಲ್ಲಿ ನಿರ್ದೇಶದ ಸಾಲುಗಳಿದ್ದದ್ದೇ. ಕವಿತೆ ಬರೆದರೂ ಅಡಿ ಟಿಪ್ಪಣಿ ಇದ್ದದ್ದೇ. ಆಧಾರವಿಲ್ಲದೇ ಯಾವುದೂ ನಡೆಯುವಂತಿಲ್ಲ. ಇವರ ನೆನಪಿನ ಶಕ್ತಿಯಿಂದ ಯಾವುದೂ ತಪ್ಪಿಸಿಕೊಳ್ಳುವಂತಿಲ್ಲ. ಅದರಲ್ಲಿ ಅಪಾರವಾದ ಶ್ರದ್ಧೆ—ಸಂತೋಷ ಅವರಿಗೆ. ದ. ಕ. ಜಿಲ್ಲೆಯ ಯಾವ ಊರಿಗೇ ಹೋಗಲಿ, ಸಂಜೆಗೆ ಮನೆಗೇ ಬರಬೇಕು. ಆ ನೆಲದಲ್ಲಿ ಅವರದು ಅಷ್ಟು ಪ್ರೇಮ. ವೇಷ

ಕ್ಕೇನು,—ಮನೆಯಲ್ಲಿ ಒಂದು ಮುಂಡು, ಒಂದು ಮಂಡ ಅಂಗಿ. ಹೊರಕ್ಕೆ ಹೊರಟಾಗಲೂ ವಿಶೇಷ ಬೇಕಿಲ್ಲ. ಟೊಂಕಕ್ಕೆ ಒಂದಂ ಕಟ್ಟು ಬೀಡಿ (ಈಗ ಸಿಗರೇಟಂತೆ !). ನಡಿಗೆಯಲ್ಲಿ ತರಾತುರಿ ಇಲ್ಲವಾದರೂ ಪೂರ್ತಿ ಚಟುವಟಿಕೆ ಯಿಂದ ಸಜೀವ ವೇಗವೇ ಕಾಣುತ್ತದೆ. ಒಳಗಣ್ಣಿಗೆ ಪೈ ಒಂದು ಪ್ರವಾಹ ವಿದ್ದಂತೆ. ಆದರ ಸುಳಿಗಳ ವೈಭವ ಆದರದು; ದಂಡೆ ಕೊರೆದೀತು; ನೀರು ನೀರೆ.

* * * *

'ಪು. ತಿ. ನ.' ನುಣ್ಣಗಿನ ತಲೆ, ಅವರ ಪದ್ಯದ ಮಾಂದಳಿರು ಚಿಗುರು ಮುಖದಲ್ಲೂ ಇರುತ್ತದೆ. ಆದರೆ ನೋಟ ಶುಚಿ, ಮಾತು ಶುಚಿ. ಅವರ ಪದ್ಯದ 'ಶಿವ'ದ ದರ್ಶನ ಅವರ ನಿಲುವಿನಲ್ಲೂ ಇದೆ. ಮಿಲಿಟರಿ ಖಾತೆ ಯಲ್ಲಿದ್ದು ಇವರು ಕಾವ್ಯಾರಾಧನೆ ಮಾಡುತ್ತಾರೆಂದರೆ—ಮುದ್ದಣ ಕುಸ್ತಿ ಮಾಸ್ತರಾಗಿ ಕಾವ್ಯ ಬರೆದನೆಂದರೆ ಯಾಕೆ ಅಚ್ಚರಿ ಪಡಬೇಕು ?

ಮಾಸ್ತಿ ಕಂದಾಯ ಖಾತೆಯಲ್ಲಿದ್ದೇ ಐವತ್ತು ಪುಸ್ತಕ ಬರೆದರು. ಇವರ ನಿಲುವಿನಲ್ಲಿ ಕಾವ್ಯವಿದೆ. ಕೈಕುಲುಕುವ ಕಾವಿನಲ್ಲಿ ಕಾವ್ಯವಿದೆ. ಮುಕ್ತಹಾಸದಲ್ಲಿ ಕಾವ್ಯವಿದೆ. ಹೃದಯದ ಔದಾರ್ಯದಲ್ಲಿ, ಸಂಪ್ರದಾಯದ ರುಚಿಯಲ್ಲಿ,—ಅದೇಕೆ ಅವರ ಹಣೆಯ ನಾಮದಲ್ಲಿ ಕಾವ್ಯವಿದೆ. ಮಾಸ್ತಿ ಮೂರ್ತಿಮಂತ ಮಾನವ ಕಾವ್ಯ. 'ಕೆಟ್ಟದ್ದು' ಎನ್ನುವದಿಲ್ಲ ಇವರು, 'ಒಳ್ಳೆಯದಲ್ಲದ್ದು' ಎಂದಾರು. ಕಲೆಕ್ಟರರಾಗಿ ಮೈಸೂರ ಸೂಟು ಧರಿಸು ತ್ತಿದ್ದರೂ ಮನೆಯಲ್ಲಿ—ಹೊರಗೆ ಮಾಸ್ತಿ ವೇಷ ತೀರ ಸಾದಾ. ಈಗಂತೂ ಕೋಟು ಬೇಕೆಂದಿಲ್ಲ. ಟೊಪ್ಪಿಗೆಯನ್ನು ಇಡದೆ ಒಂದು ಬನೀನಿನ ಮೇಲೆ ವಲ್ಲಿ ಹೊತ್ತು ಹೊರಡುತ್ತಾರೆ. ಅವರ 'ಕೆಲಸ'ದ ಕೂಡ ಭಾರದ ವೇಷಕ್ಕೆ ನಿವೃತ್ತಿಯಾಯಿತು. ಇವರದು ಮೈದಡವದೇ ಮಾತಿಲ್ಲ. ಒಂದು ಕೈಯಿಂದ ಕೈ ಕುಲಕಿ, ಇನ್ನೊಂದು ಕೈಯನ್ನು ಬೆನ್ನ ಮೇಲೋ—ಭುಜದ ಮೇಲೋ ಆಡಿಸಿ ನಮ್ಮನ್ನು ತಮ್ಮ ಎದೆಯೊಳಗೆ ಕೊಂಡುಹೋಗುತ್ತಾರೆ. 'ಸೌಖ್ಯವೆ?' ಎನ್ನುತ್ತಾರೆ. ಆ ನೆರೆಯಲ್ಲಿ ಸೌಖ್ಯವಲ್ಲದೆ ಏನಿದ್ದೀತು ?

ಆಧುನಿಕ ಕನ್ನಡಕ್ಕೆ 'ಶ್ರೀ'ಕಾರವಾಗಿದ್ದ ಬಿ. ಎಂ. ಶ್ರೀಕಂಠಯ್ಯನವರದು ಶ್ರೀಮದ್ಗಾಂಭೀರ್ಯ. ಅವರು ರಾಜಕವಿ. ಇಷ್ಟಗಲದ ತುಂಬಿಕೊಂಡ ಮುಖ

ದಲ್ಲಿ ಶ್ರೀಮಂತಿಕೆಯೇ ಇತ್ತು. ಆ ವಿಶಾಲ ಫಾಲದಲ್ಲಿ ಅವರ ಪಾಂಡಿತ್ಯ ಬರೆದಿತ್ತು. ಸ್ಥೂಲವಲ್ಲದಿದ್ದರೂ (?) ಎತ್ತರದ ತೋರ ದೇಹದಲ್ಲಿ ರಸಿಕತೆ ತುಂಬಿತ್ತು. ಅವರದೇ ಆದ ನಿಲುವಿನಲ್ಲಿ ಗೊಮ್ಮಟನ ಸ್ಥೈರ್ಯವಿತ್ತು. ವೇದಿಕೆಯ ಮೇಲೆ ನಿಂತುಕೊಂಡು ಅವರು ಮಾತಿನ ಜಾಡಿನೊಡನೆ ಉಟ್ಟ ಅಂಚಿನ ಧೋತರದ ಚುಂಗನ್ನು ಹಿಡಿದು ಅತ್ತ ಇತ್ತ ಅಲೆದಾಡುತ್ತ–ಒಲೆದಾಡುತ್ತ ಹೇಳುವ ಮಾತು, ಶ್ರೋತೃಗಳಿಗೆ ಕನ್ನಡ ದೀಕ್ಷೆಯನ್ನೇ ಅಂಟಿಸುತ್ತಿತ್ತು. 'ಕನ್ನಡ ತಾಯ್ನೋಟ'–ಅವರ ಅಮರ ಕಾವ್ಯ–ಓದುವಾಗ, ಕನ್ನಡ ದೇವಿಯನ್ನು 'ಕಂಡೆ'–ಎನ್ನುವಾಗ, 'ಮುತ್ತಯ್ದೆ' ಎನ್ನುವಾಗ ಅವರ ಎದುರು ಕನ್ನಡತಾಯ ಶ್ರೀಮೂರ್ತಿ ನಿಂತಿದೆಯೆಂದು ಜನ ಹುಡುಕುವಂತಾಗುತ್ತಿತ್ತು. ಆ ಕಾವ್ಯ ಅವರೇ ಹೇಳಬೇಕು. ಕನ್ನಡದ ಕಳಕಳಿ, ಕುದಿಗಳು ಶ್ರೀಯವರಲ್ಲಿ ಮೂರ್ತಿಮಂತ ಸ್ಫೂರ್ತಿಯಾಗಿದ್ದವು. ಉಪನಿಷತ್ತಿನ ಮೇಲೆ ಅವರು ಮಾತಾಡಲಿ, ಅವರನ್ನು ಉಪನಿಷತ್ತಿನ ಋಷಿಗಳಿಂದ ಬೇರ್ಪಡಿಸುವಂತಿದ್ದಿಲ್ಲ.

"ಕವಿಶಿಷ್ಯ" (ಮಂಗೇಶರಾಯರು) ರನ್ನು ಒಮ್ಮೆ ಕಂಡಿದ್ದೆ. ತೆಳ್ಳಗೆ, ಬೆಳ್ಳಗೆ ದೇಹಯಷ್ಟಿ; ಸಾಧುವಾದ ನಿಲುವು, ಹುಡುಕುವ ಕಣ್ಣು, ಹಣ್ಣಾದ ಮೀಸೆ, ಮುಖದಲ್ಲಿ ಸಾತ್ವಿಕ ತೇಜ! ಕುಮಾರವ್ಯಾಸನ ಬಗ್ಗೆ ಹೇಳುತ್ತ, ನೆನಪಿಸಿಕೊಂಡ ಪದ್ಯ ದೊರೆತಾಗ 'ಹಂ' ಎಂದು ಎದುರೇ ಕಂಡಂತೆ ಸಂತೋಷಿಸುವ, ಎತ್ತಿಕೊಂಡಂತೆ ಉಸುರುವ ಆ ಮೋಡಿ ಅವರದೇ.

ಗೋಕಾಕ ವಿನಾಯಕರನ್ನು ನೋಡಿ. ಆ ಗೋದಿಗೆಂಪಿನ ಮುಖ, ಎತ್ತರದ ನಿಲುವು–ಮಾತಾಡುವಾಗಲೂ ಚಿಂತನೆಯನ್ನು ನಡೆಸಿದಂತೆ ಅಭಿನಯ; ಕವಿತೆ ಹೇಳುವಾಗ ಸ್ವಸ್ತಿ ಮಂತ್ರ ಹೇಳುವಂಥ ಸಾವಧಾನ. ಈ ಸಂದರ್ಶನ, ಸಂಭಾಷಣೆಗಳಲ್ಲಿ ಹುಬ್ಬು ಏರಿಸಿ, ಕೈ ಬೆರಳನ್ನು ಮುಂದಲೆಯಲ್ಲಿ ಆಡಿಸುತ್ತ, 'ಅದೇ'–'ಅದೇ' ಎಂದು ಎದುರಿನವರನ್ನು ಆಲಿಸುತ್ತ–ಹೂವಿನಂತೆ ನಗುತ್ತ, ಒಂದು ಚಿಟಿಕೆ ನಸ್ಯ ಮೂಗಿಗೇರಿಸುತ್ತಾರೆ.

* * * * *

ಮುಗಳಿಯವರು ಹದಿನಾರಾಣೆ ಸಿನ್ಸಿಯರ್ ಕವಿ. ಸಣ್ಣಗೆ ನುಣ್ಣಗೆ ಮಾತಾಡುತ್ತಾರೆ. ಇವರದು ಬಹುಶಃ ಎಲ್ಲ ಪೂರ್ವತಯಾರಿ ಕೆಲಸಗಳು.

ಊರಿಗೆ ಬಂದಾಗ ಯಾರು ಯಾರನ್ನು ನೋಡಬೇಕು–ಏನೇನು ಮಾಡ ಬೇಕೆಂಬ ಪಟ್ಟಿ ಸಿದ್ಧಪಡಿಸಿಕೊಂಡಿರುತ್ತಾರೆ. ಆ ಕರ್ತವ್ಯ. ನೆರವೇರಿಸದೆ ಇದ್ದವರಲ್ಲ. ಮರೆವಿಗೆ ಆಸ್ಪದವೇ ಇಲ್ಲ. (ಇವರ ಕಾವ್ಯಗುರು ಬೇಂದ್ರೆ ಮಾತ್ರ ತದ್ವಿರುದ್ಧ.) ಚೀಟಿ ಹಾಕಿ ಕವನ ಬರೆಯುವಾಗೊಮ್ಮೆ ಇವರು ಗೆಳೆಯರ ಗದ್ದಲದಿಂದ ಕಾವ್ಯ ಸಮಾಧಿ ಸೇರಲಾರದೆ ಶಾಂತಿ ಕೋರಿದರು. ಬರೆಯಲು ಕೂತರೆ ಬರೆಯಲೇ ಬೇಕು. ಸದ್ದೇ ಕಾರಣವಾಗಿ ಕವಿತೆ ಬರೆಯದೆ ಹೇಗಿರಬೇಕು ? ಕವಿತೆ ಬರೆಯಬೇಕಾದರೆ ಒಳಗೆ ಗದ್ದಲ ನಡೆಯ ಬೇಕು—ಹೊರಗಲ್ಲ—ಎಂಬಂತೆ ಅವರ ರೀತಿ. ಯಾರೇ ಆಗಲಿ—ಅವರನ್ನು ಕಂಡರೆ 'ಬಂದಾರ ತಂದಾರ ಮಂದಾರ ಹೂವಾ', 'ಮಲ್ಲಿಕಾ ಬಕುಲ ಚಂಪಕಾ' ಕೇಳದೆ ಇರಬೇಡಿ. 'ವೀಣೆಯ ದನಿ' ಯಲ್ಲಿ ಅವರು ಹೇಳುವ ಆ ಪದ್ಯಗಳೇ ಸಾಕು; ಕವನ ಬರೆದರಾಗಲಿಲ್ಲ. ಅದನ್ನು ಹೀಗೆ ಹೇಳಿ ತೋರಿಸಬೇಕೆಂದು ನಿಮಗನಿಸದಿರದು.

'ಆನಂದಕಂದ'ರನ್ನು ನೋಡಿ; ಅವರ ನಯವಾಗಿ ಬಾಚಿದ ತಲೆ, ಫ್ರೆಂಚ್ ಕಟ್ ಮೀಸೆ, ಪೈರಣಿನ ಮೇಲೆ ಹೂವಿನ ಶಾಲು. ಬಂದವರನ್ನು ಮೊದಲು ಬರಮಾಡಿಕೊಂಡು 'ಏನು' ಎಂದು ಸಂಭಾಷಣೆಗೆ ತೊಡಗುತ್ತಾರೆ. ಚಹಾ–ಕಾಫಿ ಸರಬರಾಯಿಯಾಗುತ್ತದೆ. ತಮ್ಮ 'ಜಯಂತಿ' ಕಚೇರಿಯಲ್ಲಿ ಕುಳಿತುಕೊಂಡು, ವಿಶ್ವದ ಆಗುಹೋಗುಗಳನ್ನು ನಿರೀಕ್ಷಿಸುತ್ತಾರೆ. ನೀವು ಯಾವ ವಿಷಯಕ್ಕೇ ಮಾತಾಡಿ–ಅದಕ್ಕೆ ಅವರ ಅಭಿಪ್ರಾಯವಿದ್ದೇ ಇದೆ. ಇವರು ಪದ್ಯಗಳನ್ನು ರಾಗಬದ್ಧವಾಗಿ ಬರೆಯಬಲ್ಲರು.

* * * * *

ಇವರೆಲ್ಲ ಬಹುಶಃ ಈ ಶತಕದ ಎರಡು ಮೂರನೆಯ ದಶಕದಲ್ಲಿ ತೊಡಗಿದ ಕವಿಗಳಲ್ಲಿ ಕೆಲವರು. ಎಲ್ಲರನ್ನೂ ಕಾಣುವದು–ಕಾಣಿಸುವದು ನನಗೆ ಸಾಧ್ಯವಿಲ್ಲ, ನಿಮಗೂ ಬೇಸರ. ಈಗ ಎರಡು ಪಟ್ಟಗಳಿಂದ ಕಾವ್ಯ ಸಾಧನೆ ಮಾಡಿದವರಿವರು. ಇವರೆಲ್ಲರ ಕೃಷಿ ಕವಿಗಳ ಕಾರಖಾನೆಗೆ ಕಾರಣ ವಾಗಿದೆ. ಈಗ ನಾಲ್ಕನೆಯ ದಶಕದಲ್ಲಿಯೇ ಒಂದು ಶತ ಕವಿಗಳಿದ್ದಾರೆ. ಅವರೂ ಒಂದೊಂದು ಜಾತಿ ಎಂಬಂತೆಯೇ ರೂಪುಗೊಳ್ಳುತ್ತಿದ್ದಾರೆ. ಇನ್ನಷ್ಟು

ರೂಪುಗೊಳ್ಳಲಿ. ಈಗ ಈ ಹಿರಿ ಕವಿಗಳು ಹೀಗೆಲ್ಲ ಬರೆದರೆ ಕರೆದು ಬಯ್ಯಲಿಕ್ಕಿಲ್ಲವೆಂಬ ಧೈರ್ಯವಿದೆ. ಇವರ ನಂತರದವರಾದರೆ ಕುಸ್ತಿಗೇ ಕರೆದಾರು! ನಾನು ಸದ್ಯ ಅದಕ್ಕೆ ಸಿದ್ಧನಿಲ್ಲ. ಬಹುಶಃ ನಾನೇ ಸಿದ್ಧನಾಗಬೇಕು, ಇಲ್ಲವೆ ಈ ಹಿರಿಯರಷ್ಟು ಸಾವಧಾನ ಅವರಿಗೆಲ್ಲ ಬರುವವರೆಗೆ ನಾನು ತಡೆಯಬೇಕಾಗುವದು.

(೧೯೫೧)

೬. ಒಂದು ಹೂವಿನೆಸಳು*

ಕನ್ನಡ ಹಿರಿಯ ಸಾಹಿತಿಯ ಸ್ಮೃತಿಗ್ರಂಥವೊಂದಕ್ಕೆ ಲೇಖನ ಬರೆಯಲು ಕರೆ ಬಂದದ್ದು ನನ್ನ ಮಟ್ಟಿಗಂತೂ 'ಹೂವಿನೊಡನೆ ನಾರು ಸ್ವರ್ಗಕ್ಕೆ' ಹೋದಂತೆ. ಹೂಗಳನ್ನು ಬಂಧಿಸುವಲ್ಲಿ ನಾರಿನ ಉಪಯೋಗವಿದೆ. ಉಪಯೋಗದ ದೃಷ್ಟಿಯಿಂದ ನಾನು ನಾರಿನ ಕೆಲಸವನ್ನೂ ಮಾಡಿಲ್ಲ. ಆದರೂ ನನ್ನ ಮನವನ್ನರಳಿಸಿದ ಕೆಲವು ವ್ಯಕ್ತಿವಿಶೇಷಗಳ ನೆನಪಿನ ಮಾಲೆ ನನ್ನ ಸ್ವಯಂ ಸಂಸ್ಕಾರಕ್ಕೆ- ಅಲಂಕಾರಕ್ಕೆ ಕಾರಣವಾಗಿದೆ. ಆ ಸಂದರ್ಭದಲ್ಲಾದರೂ ನಾನು ನಾರಿನ ಸಂಕೇತವಾಗಿದ್ದೇನೆ.

ಕನ್ನಡ ಪುಸ್ತಕಗಳ ಮಾರಾಟಕ್ಕೆ ನಾನಿಳಿದದ್ದು ಕನ್ನಡ ನಾಡನ್ನು ಸುತ್ತುವ ಆಕರ್ಷಣೆಯಿಂದ; ಆನುಷಂಗಿಕವಾಗಿ ನಾನು ಮಾರುವ ಪುಸ್ತಕಗಳ ಕರ್ತೃಗಳನ್ನು ಕಾಣುವ ಉದ್ದೇಶದಿಂದ. ೧೯೩೩ ರಷ್ಟು ಮೊದಲು ನಾನು ಪುಸ್ತಕ ಮಾರುವ ನೆಪದಿಂದ ನಾಡನ್ನು ಸುತ್ತುತ್ತ ಮಂಗಳೂರನ್ನು ಸೇರಿದೆ, ನನ್ನ ಅಭ್ಯಾಸವೆಂಬಂತೆ ಅಲ್ಲಿಯ ಲೇಖಕರನ್ನು ಹುಡುಕಿಕೊಂಡು ಹೋದೆ. ಮಂಗಳೂರಲ್ಲಿ ಕಾಣಬೇಕಾಗಿದ್ದ ಮೊದಲನೆಯ ವ್ಯಕ್ತಿ ಆಗ ಶ್ರೀ ಮುಳಿಯ ತಿಮ್ಮಪ್ಪಯ್ಯನವರು.

ಒಂದು ಮುಚ್ಚಂಜೆ ಪಂಡಿತರನ್ನು ಕಾಣುವೆನೆಂಬ ಯಾವ ಭಯವೂ ಇಲ್ಲದೆ ಅವರ ಮನೆಗೆ ಹೋದೆ. ಹೆದರಲು ನಾನೇನು ಯಾವ ಸಾಹಿತ್ಯ ಚರ್ಚೆಗೆ ಹೋಗಿದ್ದಿಲ್ಲ. ಹಿರಿಯ ಲೇಖಕರೆಂದು ಕಾಣುವುದು; ದಂಡವತ್ ಪ್ರಣಾಮ ಮಾಡುವುದು; ಮಾತಿನ ತೊಡಕಿಗೂ ಬೀಳದೆ ಅವರ ಪದ್ಯ ಓದಿಸಿ ಕೇಳು ಇದು— ನನ್ನ ಆಗಿನ ಕಾರ್ಯಕ್ರಮವಾಗಿತ್ತು. ತಿಳಿದಲ್ಲಿ ತಲೆ ಹಾಕಿದುವು, ತಿಳಿಯದ್ದನ್ನು ತೋರಗೊಡದೆ ಪಾರಾಗಿ ಬರುವುದಂ ನನ್ನ ಪದ್ಧತಿಯಾಗಿತ್ತು,

---

* ದಿವಂಗತ ಮುಳಿಯ ತಿಮ್ಮಪ್ಪಯ್ಯ ಸ್ಮಾರಕಗ್ರಂಥ 'ಶ್ರದ್ಧಾಂಜಲಿ' ಗೆಂದು ಬರೆದುದು.

ಕನ್ನಡ ಪುಸ್ತಕಗಳನ್ನು ಮಾರುತ್ತ ಧಾರವಾಡದಿಂದ ಬಂದ ಹುಡುಗ ನನ್ನು ತಿಮ್ಮಪ್ಪಯ್ಯನವರು ಬಹಳ ಅಂತಃಕರಣದಿಂದ ಬರಮಾಡಿಕೊಂಡರು. ಕೂರಿಸಿ, ತಿಂಡಿ-ಕಷಾಯಗಳ ನೈವೇದ್ಯ ಮಾಡಿ, ಯೋಗಕ್ಷೇಮ ಕೇಳಿದರು, ಚಾಪೆಯ ಮೇಲೆ ನನ್ನ ಹತ್ತಿರವೇ ಕೂತುಕೊಂಡು ಬಹಳ ಆತ್ಮೀಯತೆಯಿಂದ ಮಾತಾಡಿದರು. ಹತ್ತು ಮನೆಗಳಿಗೆ ಪುಸ್ತಕ ಹೊತ್ತು ಹೋಗಿ—"ಬೇಡ,—ನಮಗೆ ಯಾಕೆ ?" ಎನ್ನಿಸಿಕೊಂಡು ಯಾವ ಸ್ವಾಗತವನ್ನೂ ಕಾಣದೆ, ಒಮ್ಮೊಮ್ಮೆ ಮಾತ್ರ ಯಾರಾದರೊಬ್ಬರು ಪುಸ್ತಕ ಕೊಂಡಾಗಆದ ಸಮಾಧಾನ, ಈ ಹಿರಿಯ ಸಾಹಿತಿಯ ಪದತಲದಲ್ಲಿ ಕುಳಿತುಕೊಂಡಾಗ ನೂರ್ಮಡಿಸಿತ್ತು. ತಾವು-ತಮ್ಮಂಥವರು ಬರೆದ ಪುಸ್ತಕಗಳು ಜನಕ್ಕೆ ಬೇಕೆನಿಸುವಂತೆ ನನ್ನಂಥ ಹುಡುಗರು ಮನೆಮನೆ ತಿರುಗಬೇಕಾದುದನ್ನು ಕಂಡು-ಕೇಳಿ ಅವರು ಬಹಳ ಮರುಗಿದರು. ಅದನ್ನೇ ಜೀವನವೃತ್ತಿಯಾಗಿ ಕೈಕೊಂಡ ನನ್ನನ್ನು ಅವರು ತಮ್ಮ ಹೃದಯಸಂಪತ್ತಿನಿಂದ ಸೂರೆಗೆಯ್ದರು.

ಹೌದು; ಅವರಿಗೆ ಹೃದಯವೇ ಸಂಪತ್ತಾಗಿತ್ತು. ಅದು ಸಮೃದ್ಧವಾಗಿಯೂ ಇತ್ತು. ಜೀವನದಲ್ಲಿ ಕಷ್ಟಕಾರ್ಪಣ್ಯಗಳ ತೆರೆಗಳು ಒಂದರ ಮೇಲೊಂದು ಬಂದು ಅಪ್ಪಳಿಸಿದರೂ ಜಗ್ಗದ, ಜಗ್ಗಿದರೂ ಕುಗ್ಗದ ಆ ಹೃದಯ ವೈಶಾಲ್ಯ, ಆ ಆಳದ ಅಂತಃಕರಣ, ಎಡರುಗಳಿಗೆ ಹೋರಾಡಿ ಇನ್ನೂ ಹರವಾಗಿ, ಇನ್ನೂ ಆಳವಾಗಿ ಹಬ್ಬಿ ಹರಿದದ್ದನ್ನು, ಊರಿ ಇಳಿದದ್ದನ್ನು ನಾವು ತಿಮ್ಮಪ್ಪಯ್ಯನವರ ಜೀವನದಿಂದ ಕಂಡುಕೊಳ್ಳಬಹುದಿತ್ತು.

ಆಗಷ್ಟೆ ಅವರಿಗೆ ಬಂಧುವಿಯೋಗವಾಗಿತ್ತು. ಮನೆಯೊಡತಿಗೆ ಕಾಯಿಲೆ ಇತ್ತೇ ಇತ್ತೆಂದು ಕಾಣುತ್ತದೆ. ಮಕ್ಕಳೇ ಅವರ ಭಾಗ್ಯವಾದಂತಿತ್ತು. ಮಕ್ಕಳು ದೊಡ್ಡವರಾಗಿ ಭಾಗ್ಯ ತೆರೆಯುವ ಕಾಲದಲ್ಲಿ ಅದನ್ನವರು ನೋಡಲು ಉಳಿಯಲಿಲ್ಲ.

ನನ್ನನ್ನು ತಮ್ಮ ಮನೆಯಂಗಳದಿಂದ ಮನದಂಗಳಕ್ಕೆ ಕರೆದುಕೊಂಡ ತಿಮ್ಮಪ್ಪಯ್ಯನವರು ನನ್ನ ಉಪಚಾರಕ್ಕೆ ಮಕ್ಕಳಂತೆ ಓಡಾಡಿದರು. ತಿಂಡಿ-ತೀರ್ಥವಾದ ಮೇಲೆ ನಾನು ನನ್ನ ಕ್ರಮದಂತೆ ಅವರ 'ಸೊಬಗಿನ ಬಳ್ಳಿ' ಕಾವ್ಯದಿಂದ ಕೆಲವು ನುಡಿಗಳನ್ನು ಓದಿ ತೋರಿಸಲು ಕೇಳಿಕೊಂಡೆ. ಯಾವ ಆಡಂಬರದ ಮಾತೂ ಇಲ್ಲದೆ ಪುಸ್ತಕ ತೆರೆದು ತಮ್ಮದೇ ಆದ ಪಂಡಿತರ ಧಾಟಿಯಲ್ಲಿ, ಪದಗಳನ್ನು ಬಿಡಿಸಿಯೂ-ಬಿಡಿಸದೆಯೂ ಮುಖದ ಮೇಲೆ

ಆಶ್ಚರ್ಯ–ಆನಂದಗಳನ್ನು ಬರೆದುಕೊಂಡಂತೆ ಸಾಭಿನಯವಾಗಿ ಪದ್ಯಗಳನ್ನು ಓದಿದರು. ಅವರು ಅಂದು ಹೇಳಿದ ಪದ್ಯ ಇಂಥದೇ ಎಂದು ನನಗೆ ಇಂದು ನೆನಪಿಲ್ಲ. ಆದರೆ ಅವರು ಅಂದು ಎಳೆಯುತ್ತಿದ್ದ ಈೀ–ಈೀ ಎಂಬ ಸ್ವರ ಅವರ ಹಾವ-ಭಾವ ಇನ್ನೂ ನನ್ನ ಕಿವಿಗೂ ಕಣ್ಣಿಗೂ ಹಬ್ಬವಾಗಿವೆ.

ಆ ಮೊದಲೇ ಅವರು ಕಾರವಾರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 'ಕನ್ನಡ ಕೋಗಿಲೆ' ಯನ್ನು ಕುಕಿಲಿಸಿ, 'ಸೊಬಗಿನ ಬಳ್ಳಿ' ಯನ್ನು ಹಬ್ಬಿಸಿ 'ಚಂದ್ರಾವಳೀ ವಿಲಾಸ' ಬೀರಿದ್ದರು. ಅಂಥ ಜ್ಞಾನವೃದ್ಧರು ನನ್ನ ಪ್ರಥಮ ಪರಿಚಯವನ್ನು ಬೆಳೆಸಿಕೊಂಡು ಬಂದುದು ನನ್ನ ಭಾಗ್ಯವೆಂದೇ ಇಂದವರಿಲ್ಲದ ದುರ್ಭಾಗ್ಯದಲ್ಲಿಯೂ ನೆನಸಿಕೊಳ್ಳುತ್ತೇನೆ.

ಮತ್ತೊಮ್ಮೆ ಮಂಗಳೂರಿಗೆ ಹೋದಾಗ 'ಮುಳಿಯ ಮಂದಿರ'ವಿತ್ತು, ಇನ್ನೊಮ್ಮೆ ಹೋಗುವಾಗ ಮತ್ತೆ ಬಾಡಿಗೆ ಮನೆಗೆ ಬಂದಿದ್ದರು. 'ನಾಡೋಜ ಪಂಪ', 'ಸಮಸ್ತಭಾರತ ಸಾರ', 'ಆದಿಪುರಾಣ ಸಂಗ್ರಹ' ಅಚ್ಚು ಹಾಕಿಸಿ ಅವರು ಮನೆ ಕಳೆದುಕೊಂಡರೇನೋ !

ಮಂಗಳೂರ ಕಾಲೇಜಿನಿಂದ ಪಾಸಾಗಿ, ಧಾರವಾಡಕ್ಕೆ ಬಂದ ಕೆಲವು ಪದವೀಧರರಿಂದ ತಿಮ್ಮಪ್ಪಯ್ಯನವರು ಅವರ ಅತ್ಯಂತ ಪ್ರೀತಿಯ ಪಂಡಿತರೆಂದು ಕೇಳಿ ತಿಳಿದಿದ್ದೆ. ಮಂಗಳೂರಿನ ಕಾಲೇಜು ಕಲಿತ ಜನ ಎಲ್ಲಿಯೇ ಹೋಗಿರಲಿ, ಅವರನ್ನು ಅದೇ ಗೌರವದಿಂದ ನೆನಸುತ್ತಾರೆಂಬುದು ಕಂಡು ಬರುವಂತಿದೆ. ಅವರು ಕಾಲೇಜಿನ ಬರಿಯ ಪಾಠದ ಪಂಡಿತರಾಗಿದ್ದಿಲ್ಲ. ಜೀವನದ ಸ್ವಾರಸ್ಯವನ್ನು ಸಾಹಿತ್ಯದಿಂದ ತಿಳಿಸುವ ಬೋಧನ ಕ್ರಮವೇ ಅವರ ಸ್ಮೃತಿಯ ಸ್ಥಿರ ಸಾಕ್ಷಿಯಾಗಿ ನಿಲ್ಲುತ್ತದೆ. ಶಿಷ್ಯವಾತ್ಸಲ್ಯ ಅವರಿಗೆ ಧರ್ಮವೆಂಬಂತಿತ್ತು. ಅವರು ಯಾರಿಗೂ ಸಂಬಳದ ಕೆಲಸ ಕೊಡಿಸುವ ಹುದ್ದೆಯಲ್ಲಿದ್ದಿಲ್ಲ. ಮತ್ತೆ ಯಾವ ಬಗೆಯ ಆರ್ಥಿಕ ದರ್ಜೆಯ ನೆರವೂ ಅವರಿಂದ ಬಹುಶಃ ದೊರೆಯುವಂತಿದ್ದಿಲ್ಲ. ಆದರೂ ಮಂಗಳೂರಿನ ಕಾಲೇಜು ಕುವರರು, ತಾವು ಅಂಥ ಉಚ್ಚಸ್ಥಾನವನ್ನು ಅಲಂಕರಿಸಿರಲಿ, ಬಿಟ್ಟಿರಲಿ– ಅವರನ್ನು ಯಾಕೆ ಅಂಥ ಗೌರವದಿಂದ ಕಾಣುತ್ತಿದ್ದರು ಎಂಬುದಕ್ಕೆ ಪ್ರತ್ಯಕ್ಷ ಪ್ರಮಾಣವೇನೂ ಸಿಕ್ಕುವುದಿಲ್ಲ. ಅದು ಹೃದಯರಾಜ್ಯದ ಸೊತ್ತು.

"ತಿಮ್ಮಪ್ಪಯ್ಯನವರನ್ನು ಗೊತ್ತಿಲ್ಲವೇ ನಿಮಗೆ?" ಎಂದು ಇಂದಿಗೂ ಕೇಳುತ್ತಾರೆ —ಮಂಗಳೂರು ಕಾಲೇಜ ಹಾಯ್ದು ಬಂದವರೆಲ್ಲ.

ಮೈಸೂರಿನವರು ಪ್ರೊ. ವೆಂಕಣ್ಣಯ್ಯನವರನ್ನು, ಧಾರವಾಡದವರು ಕೆಲವೇ ಕಾಲವಿದ್ದು ಹೋದವರಾದರೂ ಪ್ರೊ. ಸಾಸನೂರರನ್ನು, ಮಂಗಳೂರಿನವರು ಪಂ. ತಿಮ್ಮಪ್ಪಯ್ಯನವರನ್ನು ನೆನೆದು ಗೌರವಿಸುವುದು ಕನ್ನಡದ ಪುಣ್ಯವಿಶೇಷ.

ಪಾಂಡಿತ್ಯ ನೀರಸವಾಗಿರುವುದೇ ಹೆಚ್ಚು. ಆದರೆ ತಿಮ್ಮಪ್ಪಯ್ಯನವರು ತುಂಬ ರಸಿಕರಾಗಿದ್ದರು. ಮೊದಮೊದಲು (ಹಳೆಯ) ಛಂದಸ್ಸನ್ನು ಬಿಟ್ಟು ಬರೆಯುವ ಪದ್ಯವನ್ನು ಅವರು ಮೆಚ್ಚಲಿಲ್ಲವೆಂದು ಕಾಣುತ್ತದೆ. ಆದರೆ ಅನಂತರ ಬಂದ, ಬರುತ್ತಿದ್ದ ಪದ್ಯಗಳ ರಸ-ಭಾವಗಳನ್ನು ಅವರು ಬಹು ಬೇಗ ಗುರುತಿಸಿಕೊಂಡರು. ಆ ಪದ್ಯಗಳನ್ನೂ ಆ ನವೀನ ಮಾರ್ಗಗಳನ್ನೂ ಮೆಚ್ಚಿಕೊಂಡರು.

ಪತ್ರ ಕಥೆಯ ತಂತ್ರ ಕನ್ನಡಕ್ಕೆ ತೀರ ಹೊಸದು. ದಿವಂಗತೆ ಗೌರಮ್ಮನವರು ಬರೆದ ಅಂಥ ಒಂದು ಕಥೆಯನ್ನು* ಅವರು ತಮ್ಮ ಮೆಚ್ಚಿಕೆಯ ಮಾತಿನೊಂದಿಗೆ ಪ್ರಸಿದ್ಧಿಸಿದರು. ಹೊಸ ಲೇಖಕರ ಲೇಖನಶಕ್ತಿಯನ್ನು ಗುರುತಿಸಿ ಇಂಥ ಪ್ರೋತ್ಸಾಹದ ಮಾತನ್ನು ಬರೆದು ಪ್ರಕಟಿಸಿ, ಅವರ ಶ್ರೇಯವನ್ನು ಕೋರುವ ಸಂಪಾದಕರು ಇಂದಿಗೂ ಅಪೂರ್ವವೆನ್ನಬಹುದು.

ತಮ್ಮ ಜೀವನವನ್ನೇ ತೇಯ್ದು ರಚಿಸಿದ 'ನಾಡೋಜ ಪಂಪ' ಗ್ರಂಥವನ್ನು ಬಹು ಸಾಹಸದಿಂದ ಅಚ್ಚುಕಟ್ಟಾಗಿ ಮುದ್ರಿಸಿ ಪ್ರಕಟಿಸಿದ ತಿಮ್ಮಪ್ಪಯ್ಯನವರು ತಾವು ಹೋದಲ್ಲೆಲ್ಲಾ ಅದರ ಪ್ರತಿಗಳನ್ನು ಕೊಂಡುಹೋಗಿ, ಕನ್ನಡ ನುಡಿ ಸೇವಕರ ಕಣ್ಣಿಗೆ ತಾವೇ ಎತ್ತಿ ತೋರುತ್ತಿದ್ದರು. ಅವರ ಶ್ರಮವನ್ನು ತಿಳಿದವರು ಅದರ ಪ್ರತಿಗಳನ್ನು ಕೊಳ್ಳಬಹುದಾಗಿತ್ತು. ತಾವೂ ಅಂಥ,—ಅದಕ್ಕೂ ಹೆಚ್ಚಿನ ಕೆಲಸ ಮಾಡಿದ್ದೇವೆಂದು ತಿಳಿಯುವ ಕೆಲವರು ಅದು ತಮಗೆ ಗೌರವದ ಕಾಣಿಕೆಯೆಂದು ತಿಳಿದುಕೊಂಡರೂ ತಿಮ್ಮಪ್ಪಯ್ಯನವರು ಸಂತೋಷಪಡುತ್ತಿದ್ದರು. ಹಾಗೆ ಒಬ್ಬ ಕನ್ನಡ ನುಡಿಯ ಸೇವಕರ ಮನೆಗೆ ಅವರು ಹೋಗಿದ್ದರಂತೆ. ಆ 'ಸೇವಕರು' ಕಾಣಲು ಕೊಂಚ

* 'ಚಿಗುರು' ಸಂಗ್ರಹದಲ್ಲಿಯ "ಕೆಲವು ಕಾಗದಗಳು"

ಬಿಗುವಿನವರು. ಆದರೆ ಅವರು ಪಂಡಿತರನ್ನು ಕಂಡರೆ ಸಂಕೋಚಪಡುವ ಸ್ವಭಾವದವರು. ಬಾಗಿಲು ಹಾಕಿತ್ತು. ಆ 'ಸೇವಕ ಮಹಾಶಯ'ರು ಬಾಗಿಲು ತೆರೆದಾಗ ತಿಮ್ಮಪ್ಪಯ್ಯ ಕೈಯಲ್ಲಿ ಹೆಬ್ಬೊತ್ತಗೆ ಹಿಡಿದು ನಿಂತಿದ್ದಾರೆ. "ಏನು ಕೆಲಸ ?" ಎಂದು ಕೇಳಿದ್ದಕ್ಕೆ "ಈ ಪುಸ್ತಕ ತಮಗೆ ಕೊಡುವುದಿತ್ತು" ಎಂದರು. ಆ ಮಹಾಶಯರು ಇವರಿಂದ ಆ ಪುಸ್ತಕ ಇಸಿದುಕೊಂಡು ಬಾಗಿಲು ಹಾಕಿದರಂತೆ. ಆಗ ಅವರು ಇವರೇ ತಿಮ್ಮಪ್ಪಯ್ಯನವರೆಂದು ಗುರುತಿಸಿದರೋ ಇಲ್ಲವೋ !

ತಾನು ಬರೆದ ಪುಸ್ತಕವೊಂದನ್ನು ಉಚಿತವಾಗಿಕೊಟ್ಟು, ಪಡೆದವರಿಂದ ಒಂದು "ಧನ್ಯವಾದ"ವನ್ನೂ ಪಡೆಯದೆ ಮರಳುವುದು ಎಂಥವರಿಗೂ ಕೈಂಕರ್ಯದ ಮಾತು. ಆದರೆ ತಿಮ್ಮಪ್ಪಯ್ಯನವರು ಮುಂದೆ ಆ ಮಹಾಶಯರ ಸತ್ಯ ನಿಷ್ಠುರಮಾರ್ಗವನ್ನು ಮೆಚ್ಚಿ ಮುಂಚಿನ ಗಾಯ ಮಾಯಿಸಿಕೊಂಡರು. ಮುಂದೆ ಅವರೊಡನೆ ಬಹು ಗೌರವದಿಂದ ನಡೆದುಕೊಂಡರು. 'ಗುಣಕೆ ಮತ್ಸರವಿಲ್ಲ' ಎಂಬುದನ್ನು ತಿಮ್ಮಪ್ಪಯ್ಯನವರು ತಮ್ಮ ನಡತೆಯಿಂದಲೇ ತೋರುವವರಾಗಿದ್ದರು.

ತಿಮ್ಮಪ್ಪಯ್ಯನವರು ದಕ್ಷಿಣಕನ್ನಡ ಜಿಲ್ಲೆಯ ಜಾನಪದ ಕಲೆಯಾದ ಯಕ್ಷಗಾನದ ಆರಾಧಕರಾಗಿದ್ದರು. ಪಾರ್ತಿಸುಬ್ಬನೆಂಬ ಯಕ್ಷಗಾನ ಕವಿಯನ್ನು ಕುರಿತು ಒಂದು ಗ್ರಂಥವನ್ನೇ ಬರೆದಿದ್ದಾರೆ. ಪಾರ್ತಿಸುಬ್ಬನ ಬಗ್ಗೆ ಮಾತನಾಡುವಾಗ ಅದೆಂಥ ಹಿಗ್ಗು ಅವರಲ್ಲಿ ಉಕ್ಕುತ್ತಿತ್ತೆಂಬುದನ್ನು ಅವರ ಭಾಷಣ ಕೇಳಿದವರೆಲ್ಲ ಬಲ್ಲರು. ಒಮ್ಮೆ ನನಗೆ ಕೇಳುವ ಭಾಗ್ಯ ದೊರೆತಾಗ ಅವರು ಹೇಳಿದ ಅಂಗದಸಂಧಾನದ ಪ್ರಸಂಗವನ್ನು ನಾನು ಮರೆಯಲಾರೆ. ಜೀವನದ ಕುದಿಗೆ ಬೆಂದು ಹಣ್ಣಾದವರಾದರೂ ಅವರು ಅಂಗದನ ಭೂಮಿಕೆಯನ್ನು ಅಭಿನಯಿಸಿ ತೋರಿಸುತ್ತಿದ್ದುದನ್ನು ಮರೆಯುವಂತಿಲ್ಲ. 'ಏನ್ಮಾಯ್ರೆ ರಾವಣ–ನಿನ್ಮಾಯ್ರೆ ಸೀತೆಯ ! ಕಾಣದ ಹಾಗೆ ಕದ್ದು–ತರಬಹುದೇನ್ಮಾಯ್ರೆ !' ಎಂದು ಹೇಳುವಾಗ ಪ್ರತಿ ಅಂಗದನೇ ಕೇಳುವಂತಿತ್ತು.

ಕೊನೆಯ ಸಲ ಅವರನ್ನು ಧಾರವಾಡದಲ್ಲಿಯೇ ಕಂಡೆ. ಇಲ್ಲಿಯ ಕನ್ನಡ ಸಂಶೋಧನ ಸಂಸ್ಥೆಯ ಉಪನ್ಯಾಸಕ್ಕೆಂದು ಬಂದವರು ನಾಲ್ಕು

ದಿನ ನಿಂತರು. ಆಗ 'ಕವಿರಾಜಮಾರ್ಗ ವಿವೇಕ' ಪ್ರಕಟಿಸಿಕೊಂಡು ಬಂದಿದ್ದರು ಅದರ ಸಂಶೋಧನೆಯನ್ನು ಕುರಿತು ನಕ್ಷೆ ಬಿಡಿಸಿ ಹಿಡಿದು ಉಪನ್ಯಾಸಮಾಡಿದರು. ಜತೆಯಲ್ಲಿ ಬರೆದು ತಂದ ಕೆಲವು ಕಥನ ಕವನಗಳನ್ನು ಅವರಿಂದ ಓದಿಸಿ ಕೇಳಿದೆ. ಹಳ್ಳಿಗರ ಜೀವನದ ಪ್ರಸಂಗಗಳ ಚಿತ್ರಣಗಳೇ ಆ ಕವನಗಳು. ಅವುಗಳ ಆ ಉಪಮೆಗಳು, ಆ ಛಂದಸ್ಸು, ಆ ಕುಣಿತದ ಶೈಲಿ, ಅಚ್ಚಗನ್ನಡ ಶಬ್ದ ಪ್ರಯೋಗಗಳು—ಎಂಥ ಚೆಂದ ! ಹಳಗನ್ನಡ ಮಹಾಸಾಗರದಲ್ಲಿ ಈಸಾಡಿದ ಪಂಡಿತರು ತೀರ ನವೀನ ಮಾರ್ಗದಲ್ಲಿಯೂ ಅಷ್ಟೇ ಯಶಸ್ವಿಯಾಗಿ ರಚಿಸಿದ ಆ ಕವನಗಳು ಇನ್ನೂ ಪ್ರಕಟವಾದಂತಿಲ್ಲ. ಈ ಪ್ರಶಸ್ತಿ ಗ್ರಂಥದ ಸಂಪಾದಕರು ಅವನ್ನು ಸೇರಿಸಿ ಪ್ರಕಟಿಸಿದರೆ ನಿಜವಾದ ಉಪಕಾರ ಮಾಡಿದಂತೆ.

ಶ್ರೀ ತಿಮ್ಮಪ್ಪಯ್ಯನವರು ಶಿಷ್ಯರಲ್ಲಿ ವಾತ್ಸಲ್ಯ ತೋರಿದರು. ಕಿರಿಯ ಲೇಖಕರನ್ನು ತಕ್ಕಯ್ಸಿದರು. ಸಮಕಾಲೀನ ನುಡಿ ಸೇವಕರನ್ನು ಆದರಿಸಿ ಗೌರವಿಸಿದರು. ಪಂಪನಿಂದ ಪಾರ್ತಿಸುಬ್ಬನ ವರೆಗೆ ಕನ್ನಡ ಕಾವ್ಯ ಪರಂಪರೆ ಅವರ ಸತತಾಭ್ಯಾಸದಿಂದ ಮನ್ನಣೆಹೊಂದಿತು. ಅವರು ಇದಕ್ಕೆ ಯಾವ ಫಲವನ್ನೂ ಅಪೇಕ್ಷಿಸದ ಕಾವ್ಯಯೋಗಿಗಳಾಗಿದ್ದರು.

ಆದರೆ ನಾಡು ಅವರಿಗೆ ತಕ್ಕ ಮನ್ನಣೆಯಿತ್ತಿಲ್ಲವೆನ್ನುವುದು ಹೇಗೆ ? ಕನ್ನಡನುಡಿಯ ಸೇವಕನಿಗೆ ಅತ್ಯುಚ್ಚವಾದ ಮನ್ನಣೆಯೆಂದರೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದ. ಅದನ್ನವರು ತಮ್ಮ ಅವಸಾನಕ್ಕೆ ಇಪ್ಪತ್ತು ವರುಷ ಮೊದಲೇ ಹೊಂದಿದರು. ಮತ್ತೊಂದು ದಶಕದಲ್ಲಿ ಪಂಪನ ಸಹಸ್ರ ವಾರ್ಷಿಕೋತ್ಸವದ ಅಧ್ಯಕ್ಷರಾಗಿ ಲಕ್ಷ್ಮೇಶ್ವರದಲ್ಲಿ ಗೌರವಾನ್ವಿತರಾದರು. ಪಂಪನ ಸ್ಮರಣೆಗೆ ತಿಮ್ಮಪ್ಪಯ್ಯನವರಲ್ಲದೆ ಮತ್ತಾರು ಮುಂದಾಳು ?

ಇಂಥವರನ್ನು ಕಳೆದುಕೊಂಡ ನಾಡು ಅವರ ಸ್ಥಳದಲ್ಲಿ ಯಾರನ್ನು ಹೆಸರಿಸಬೇಕು ? ಅವರ ಜೀವನ ಕಾರ್ಯದಿಂದ ಸ್ಫೂರ್ತಿಗೊಂಡು ಯಾರು ಮುಂದೆ ಬಂದಾರು ಎಂದು ಕಾಯುವಂತಾಗಿದೆ.

ಅವರ ಸ್ಮೃತಿಗ್ರಂಥಕ್ಕೆ ಅವರ ನೆನಪಿನ ಮಾಲೆಯ ಹೂವೊಂದರ ಈ ಎಸಳನ್ನು ಅತಿ ಭಕ್ತಿಯಿಂದ ಅರ್ಪಿಸುತ್ತೇನೆ.

(೧೯೫೨)

೭. ದಿ. ಪೋತದಾರ ಶ್ರೀನಿವಾಸರಾಯರು

ಧಾರವಾಡ ನಿಲ್ದಾಣದಿಂದ ಪಟ್ಟಣದ ಕಡೆಗೆ ಬರುವಾಗ ಒಂದು ಕೂಗಳತೆಯಲ್ಲೇ ಬಲಬದಿಗೆ ಒಂದು ಕನ್ನಡ ಹಲಗೆ ಕಾಣುತ್ತದೆ. 'ಶ್ರೀನಿವಾಸ ಕಂಪನಿ; ಚಿತ್ರಕಲಾಮಂದಿರ' ಎಂದು. ಅದರ ಒಡೆಯರು ಶ್ರೀ ಪೋತದಾರ ಶ್ರೀನಿವಾಸರಾಯರು. ಅವರು ಧಾರವಾಡದ ಬಲ ಇದ್ದ ಹಾಗೆ. ಯಾವ ಸ್ಟೇಶನ್‌ದಲ್ಲೇ ಇಳಿಯಿರಿ; ಮೊದಲು ಕಾಣುವದು ಒಂದು ರೆಸ್ಟೋರೆಂಟ್, ಒಂದು ಹೋಟೆಲ್, ಇನ್ನು ಯಾವದೋ ಕಂಪನಿ. ಯಾವ ಬೋರ್ಡೂ ಕನ್ನಡದಲ್ಲಿ ಇರುವದಿಲ್ಲ. ಯಾಕಂದರೆ ಬರುವ ಗಾಡಿ ಕನ್ನಡ ಬಲ್ಲವರನ್ನು ತರುವುದೇ ಇಲ್ಲ ಎಂಬ ಸಿದ್ಧಾಂತ ನಮ್ಮದು. ಕನ್ನಡಿಗರಾದರೆ ಯಾವುದೇ ಅಕ್ಷರ ಸಹನೆಯಿಂದ ಓದುತ್ತಾರೆ—ಎಂಬ ಭರವಸೆ ನಮ್ಮದು. ಇದು ಒಂದು ಔದಾರ್ಯ ! ಈ ಔದಾರ್ಯ ನಮ್ಮ ಅವಲಕ್ಷಣದ ತೋರಣ ಎಂದು ಸಾರಿದರು ಶ್ರೀನಿವಾಸರಾಯರು. ಇದು ಅಸಹನೆ ಎನಿಸಿದರೂ ಅದೇ ನಮ್ಮ ಗೌರವ ಎಂದರು. ಧಾರವಾಡದಲ್ಲಿ ಈ ಅವಲಕ್ಷಣಕ್ಕೆ ಎಡೆಗೊಡದೆ ಧಾರವಾಡದ ದ್ವಾರಕ್ಕೇ ನೆಟ್ಟರು ಕನ್ನಡ ಬಾವುಟವನ್ನು. ಎಂತಲೇ ಅವರು ಧಾರವಾಡದ ಬಲ ಎಂದದ್ದು.

ಬರೀ ಬೋರ್ಡಿನಲ್ಲೇನಿದೆ ಎನ್ನಿತ್ತೀರಾ ? ಅವು ಹಲಗೆಗೆ, ತಗಡಿಗೆ ಬರೆದ ಅಕ್ಷರಗಳಲ್ಲ—ಶ್ರೀನಿವಾಸರಾಯರೇ ತಮ್ಮ ಎದೆಯಲ್ಲಿ ಕೊರೆದು ಕೊಂಡ, ಬರೆ ಎಳೆದುಕೊಂಡ ಕನ್ನಡ ಅಕ್ಷರಗಳವು. ಅವರ ವೃತ್ತಿ, ಚಿತ್ರ ಬರೆಯುವುದು, ಪಡಿಯಚ್ಚು ಮಾಡುವದು. ಅವರು ಈ ಕಲೆ ಅಭ್ಯಾಸ ಮಾಡಿದ್ದು ಮುಂಬಯಿಯಲ್ಲಿ. ಮೊದಲು ಕಲಕತ್ತೆಗೂ ಹೋಗಿದ್ದರಂತೆ. ಅವರು ಮುಂಬಯಿಯಲ್ಲಿ ಪಟ್ಟ ಕಷ್ಟ ಹಿರಿಯರು ಹೇಳುತ್ತಾರೆ—ಅದು ಮುಂಬಯಿ ಸಮಾಚಾರ. ದಿನಾ ನಮ್ಮ ಎದುರಿಗೇ ನಡೆಯುವ ಕಷ್ಟಜೀವನ ನಾವೆಷ್ಟು ನೋಡುವುದಿಲ್ಲ ! ಜನ ಕಷ್ಟಬಡುವುದೇ ನಮ್ಮ ಅವಮಾನ—ಎಂಬ ತಿಳಿವು ಎಂದಿನವರೆಗೆ ನಮಗೆ ಬರುವುದಿಲ್ಲವೋ ಅಂದಿನವರೆಗೆ ನಾವು

ಇದ್ದೂ ಸತ್ತ ಹಾಗೆ. ಶ್ರೀನಿವಾಸರಾಯರು ತಮ್ಮ ಜನರು 'ಸತ್ತವರು' ಎಂದರೆ 'ಅಶುಭ' ಎಂದು ತಿಳಿಯುತ್ತಿದ್ದರು. ಎಂತಲೇ ತಮ್ಮ ಕಷ್ಟದ ದಿನ ಹೊರನಾಡಿನಲ್ಲಿ ಕಳೆದರು. ಇಲ್ಲಿ ಇರುವಷ್ಟು ದಿನ ಕನ್ನಡಿಗರ ಮರ್ಯಾದೆಗಾಗಿ ಸತ್ತು ಬದುಕಿದರು.

ಮರ್ಯಾದೆಯೆಂದರೇನು ? ಗೌರವವೆಂದರೇನು ? ದಾಸ್ಯಕ್ಕೆ ಬಲಿಯಾದ ಹೃದಯಕ್ಕೆ ಮರ್ಯಾದೆಯೆಲ್ಲಿ ? ಅದರ ಆವರಣವಾದ ದೇಹಕ್ಕೆ, ಹೆಸರಿಗೆ ಗೌರವ ಎಂಥದು ? ನಾವು ದಾಸರಾಗಿದ್ದೇವೆ;—ಇದು ದೇಶವಾಚಕವಾದುದು. ಪರಿಶುದ್ಧವಾದ ಆತ್ಮ ಎಂದೂ ದಾಸ್ಯದಲ್ಲಿ ಕೊಳೆಯುವುದಿಲ್ಲ. ಆತ್ಮಕ್ಕೆ ದಾಸ್ಯವೇ ಕಲಂಕ; ಸ್ವಾರ್ಥ ಅದಕ್ಕೆ ಅಂಟಿಕೊಂಡ ರೋಗ. ಆತ್ಮ ಶಕ್ತಿಯಿದ್ದವರು ಸ್ವೈರವಲ್ಲದ ಸ್ವಾತಂತ್ರ್ಯದ ದಾರಿಯಲ್ಲಿ ನಡೆದರೆ ಭವಿಷ್ಯ ಖಂಡಿತ ಉಜ್ವಲವಾಗುತ್ತದೆ. ಸ್ವಾರ್ಥ ವ್ಯಕ್ತಿಗೆ ಹತ್ತಿಕೊಂಡರೆ ವ್ಯಕ್ತಿಯ ಗೌರವಕ್ಕೆ ಕುಂದು. ನಾಡಿಗಾಗಿ ಹಬ್ಬಿದರೆ ನಾಡಿಗೆ ಹಿತ; ವ್ಯಕ್ತಿಗೆ ಗೌರವ. ಶ್ರೀನಿವಾಸರಾಯರು ಇಂಥ 'ಸ್ವಾರ್ಥಿ'ಗಳಾಗಿದ್ದರು. ಎಂತಲೇ ನಾಡಿನ ಹಿತ ಸಾಧಿಸಿ ತಮ್ಮ ಗೌರವ ಕಾಪಾಡಿಕೊಂಡರು.

ಧಾರವಾಡದ ಜನ ಶ್ರೀನಿವಾಸರಾಯರಿಗೆ ಅಚ್ಚುಮೆಚ್ಚಿನಿಂದ 'ಶೀನಪ್ಪ' ಎಂದು ಕರೆಯುತ್ತಿದ್ದರು. 'ಶೀನಪ್ಪ ಹುಚ್ಚ—ತಲೆ ತಿರುಕ' ಎಂದು ಅನ್ನುವ ಜನಕ್ಕೆ ಕಡಿಮೆಯಿಲ್ಲ. ನಮ್ಮ ದುರ್ದೈವ. ಶೀನಪ್ಪನವರಿಗೆ ಹಿಡಿದ 'ಕನ್ನಡ ಹುಚ್ಚು' ಇನ್ನೂ ಹತ್ತು ಜನಕ್ಕೆ ಹಿಡಿದಿದ್ದರೆ, ಅವರ ತಲೆ ತಿರುಗಿದ ಹಾಗೆ ಇನ್ನೂ ಹತ್ತು ಜನರ ತಲೆ ತಿರುಗುತ್ತಿದ್ದರೆ ಅಂದಿನ ಏಕೀಕರಣದ ಕನಸು ಇಂದು ನನಸಾಗುತ್ತಿತ್ತು. ಶೀನಪ್ಪನವರ ಹುಚ್ಚು ಅರಿವುಗೇಡಿತನದ್ದಲ್ಲ. ಮೈತುಂಬ ಕಣ್ಣಿದ್ದ ಸ್ವಾಭಿಮಾನಿಯ ಹುಚ್ಚು ಅದು. ಭಗ್ನ ಮನೋರಥನ ಹುಚ್ಚಲ್ಲ—ಆಶಾವಾದಿಯಾದ ಯೋಧನ ಹುಚ್ಚು ಶೀನಪ್ಪನವರದು. ಅವರ ಹುಚ್ಚಿಗೆ ಕುತೂಹಲಗೊಂಡವರೆಷ್ಟು ? ಹೆದರಿಕೊಂಡವರೆಷ್ಟು ? ನಾಚಿಕೆಪಟ್ಟವರೆಷ್ಟು ? ಈ ಹುಚ್ಚು ಹಾಗೆ ಕರೆಯಲ್ಪಡುವವರ ಸಂಕುಚಿತ ಮನೋವೃತ್ತಿಯದಲ್ಲ; ವಿವೇಕಪೂರ್ಣವಾದ ಹೃದಯವೈಶಾಲ್ಯದಿಂದ ಬಂದದ್ದು; ಇದರ ಫಲ ಹತ್ತು ಜನರ ಕಣ್ಣು ತೆರೆಸಿದ ಜಾಣ್ಮೆ. ಶೀನಪ್ಪ ಈ ಫಲ ಕಂಡಿರಬೇಕು. ಎಂತಲೇ 'ಹುಚ್ಚ' ಎಂದರೆ ಅವರು ಸಿಟ್ಟಿಗೇಳುತ್ತಿದ್ದಿಲ್ಲ; ಹೆಮ್ಮೆಯಿಂದ ನಕ್ಕುಬಿಡುತ್ತಿದರು.

ಶ್ರೀನಿವಾಸರಾಯರು ಮುಂಬಯಿಯಲ್ಲೇ ವ್ಯವಸಾಯ ಮಾಡುತ್ತ ಐಶ್ವರ್ಯವಂತರಾಗಬಹುದಿತ್ತು. ಇಂದಿನ ಧನಿಕರ ಹಾಗೆ ಕಾಸು ಎಸೆದು ಪರಾಕು ಹೇಳಿಸಿಕೊಳ್ಳಬಹುದಿತ್ತು. ಆದರೆ ಧಾರವಾಡಕ್ಕೆ ಬಂದು ನಾಡಿಗೆ ಇರುವ ಪಡಿಯಚ್ಚುಕೂಟದ ಒಂದು ಕೊರತೆ ಕಡಿಮೆಮಾಡಿದರು. ಅವರದು ಯಾವಾಗಲೂ ನಾಡಿನ ದೃಷ್ಟಿ. ಮನುಷ್ಯ ಹುಟ್ಟಿನ ಒಡನೇ ತನ್ನ ಕ್ಷೇಮ ಚಿಂತನೆ ಹೊತ್ತು ತರುತ್ತಾನೆ. ಅದು ಅನಿವಾರ್ಯವಾದ ಅಗತ್ಯವಾದ ಕರ್ತವ್ಯ ಕರ್ಮ. 'ತಾ ಬಲ – ಜಗ ಬಲ' ಎನ್ನುತ್ತಾರೆ. ಹೇಡಿ ತಾನೇ ಬದುಕಲಾರ. 'ಹುಟ್ಟಿಸಲು ಅಸಮರ್ಥವಾದ ಸಂತಸ ವ್ಯರ್ಥ.' ಬದುಕ ಬಲ್ಲ ಮನುಷ್ಯ ಬದುಕಿಸಬಲ್ಲ; ಅದು 'ಸಂತಸದ ಸಂತಾನ.' ಶ್ರೀನಿವಾಸ ರಾಯರು ತಮ್ಮ ವೃತ್ತಿಯಲ್ಲಿ ಗೌರವದಿಂದ ಬದುಕಿದರು. ದುಡಿಮೆಗೆ ತಕ್ಕ ಬದುಕು. ತಾನು ದುಡಿದ ಫಲ ತಾನು ಉಂಡ. ಇದು ಪ್ರಾಣಿಮಾತ್ರರಿಗೆ ಬಿಡದ ಕರ್ಮ. ತಾನು ಬದುಕುವದೊಂದೇ ಜೀವನ ಧರ್ಮವಲ್ಲ— ಎಂದರು ಶ್ರೀನಿವಾಸರಾಯರು. ತನ್ನನ್ನು ಗೌರವದಿಂದ ಕಾಪಾಡಿದ ಜನ ಯಾರು ? ಅವರಿಗೆ ತಾನು ಗೌರವ ತೋರಿಸಬೇಡವೇ ? ಇಲ್ಲಿಗೂ ಮುಗಿಯಲಿಲ್ಲ. ಒಂದು ವ್ಯಕ್ತಿಯ ಗೌರವ ನಾಡಿಗೆ ಗೌರವ ತರುವಂಥ ದಿರಬೇಕು. ಹೀಗೆ ದೃಷ್ಟಿ ವಿಶಾಲವಾದ ಹಾಗೆ ಕೆಲಸ ಬೆಳೆಯುತ್ತದೆ. ಈ ಕಾರ್ಯಬಾಹುಳ್ಯದಲ್ಲಿ ಕಾಣುವ ಫಲ ಅಲ್ಪ; ಕಾಣದ ಫಲ ದೊಡ್ಡದು. ಒಳ್ಳೆಯ ದೃಷ್ಟಿ ಯಾವಾಗಲೂ ಒಳ್ಳೆಯದನ್ನೇ ತಂದೀತು. ಶ್ರೀನಿವಾಸ ರಾಯರ ಬಹುಮುಖದ ಕಾರ್ಯ ವಿಸ್ತಾರ ನಾಡಿಗೆ ಒಳ್ಳೆಯದನ್ನೇ ಮಾಡಿದೆ. ಇಂದಿನ ಕಾರ್ಯಕರ್ತರ ಹೃದಯದಲ್ಲಿ ಅವರ ಚಿತ್ರ ಮಸಳಿಸದೆ ನಿಂತಿದೆ.

ಅಂಥ ಕೆಲಸ ಅವರು ಮಾಡಿದ್ದಾದರೂ ಏನು—ಎಂದರೆ ಅವರು ಮಾಡದೇ ಇದ್ದ ಕೆಲಸವಾವುದು ಎನ್ನಬೇಕಾಗುತ್ತದೆ. ಅವರದು 'ಕನ್ನಡದ ಕೆಲಸ.' ಕನ್ನಡನಾಡಿನ 'ಬೇಕು'ಗಳ ಪೂರೈಕೆಯ ಕಾರಖಾನೆ ಯಾಗಿತ್ತು ಅವರ ತಲೆ.

ಕರ್ನಾಟಕದಲ್ಲಿ ರಾಷ್ಟ್ರೀಯ ಮಹಾಸಭೆ ನೆರೆಯಿತು. ಮಾನವ ಜನಾಂಗದ ಮಹಾಪುರುಷ ಮಹಾತ್ಮಾಜೀ ಅದಕ್ಕೆ ಅಧ್ಯಕ್ಷರಾಗಿ ದೊರೆ

ತರು. ಕನ್ನಡಿಗರಿಗೆ ಇದಕ್ಕೂ ಹೆಚ್ಚಿನ ಮರ್ಯಾದೆ ಏನು ಬೇಕು ? ಆದರೆ ಬರುವ ದೇಶವತ್ಸಲರಿಗೆ ಕರ್ನಾಟಕದ ಕಲ್ಪನೆ ಮಾಡಿ ಕೊಡಬೇಡವೆ ? ಬೆಳಗಾವಿ ಯಾವ ನಾಡು ? ಇಲ್ಲಿಯದು ಯಾವ ಸಂಸ್ಕೃತಿ ? ಇಲ್ಲಿಯ ಇತಿಹಾಸ ಏನು ?—ಇದೆಲ್ಲಾ ಯಾರಿಗೆ ಬೇಕು—ಯಾಕೆ ಬೇಕು ? ಇದು ಬೇಡವಾದರೆ ಸ್ವರಾಜ್ಯ ಯಾತಕ್ಕೆ ? ಎಂದಿತು— ಶ್ರೀನಿವಾಸರಾಯರ ವ್ಯಕ್ತಿತ್ವ. ದೇಶವತ್ಸಲರಿಗೆ ಕಿವಿ ಊದುವದು ಬೇಡ. ಕಣ್ಣು ಕಟ್ಟಿಸ ಬೇಕು, ತಲೆ ತಿರುಗಿಸಬೇಕು ಎನಿಸಿತು ಅವರಿಗೆ. "ವಿಜಯನಗರ", " ಪಂಪಾ ಸರೋವರ " ನಿರ್ಮಾಣವಾದವು. ಬೀದಿಗಳಿಗೆ ಕನ್ನಡ ಇತಿ ಹಾಸದ ಮುದ್ರೆ ಬಿತ್ತು. ಮಹಾದ್ವಾರ ಹಂಪೆಯ ವಿರೂಪಾಕ್ಷ ದೇವ ಸ್ಥಾನದ ಗೋಪುರವಾಯಿತು. ಬಂದವರಿಗೆ ಇದನ್ನು ಅರಿಯದ ವಿಧಿಯಿಲ್ಲ. ಅರಿತವರಿಗೆ ಕನ್ನಡಿಗರಲ್ಲಿ ಆಸ್ಥೆ ತಾನಾಗಿಯೇ ಹುಟ್ಟಿತು.

ಶ್ರೀನಿವಾಸರಾಯರು ಮಾಡಿದ ಅನೇಕ ಕಲಾಕೃತಿಗಳಲ್ಲಿ ಒಂದು ಕಡೆಗೆ ಸಂಗ್ರಹವಾಗಿ ಉಳಿದ ಕೃತಿಗಳು ಎರಡೆ. ಒಂದು " ಸಚಿತ್ರ–ವಿಜಯನಗರ" — ಹಂಪೆಯ ಆರು ನೂರು ವರ್ಷಗಳ ಮಹೋತ್ಸವದ ಕಾಲಕ್ಕೆ ವಿಜಯನಗರದ ಸಚಿತ್ರ ಕೈಪಿಡಿಯಾಗಿ ಈ ಪುಸ್ತಕವನ್ನು ಸುಂದರ ವಾಗಿ ಪ್ರಕಟಿಸಿದರು. ಎರಡನೆಯದು " ಕನ್ನಡದ ಮುನ್ನಡೆ " ಎಂಬ ಹೆಸರಿನಿಂದ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾವಚಿತ್ರಗಳನ್ನು ಒಂದೆಡೆಯಲ್ಲಿ ಸೇರಿಸಿ ಒಂದು ಪಟವನ್ನಾಗಿ ಪ್ರಕಟಿಸಿದರು. ಅಧ್ಯಕ್ಷರಾದವರ ವ್ಯಕ್ತಿಚಿತ್ರ ಬರೆಯಿಸಿ ಈ ಭಾವಚಿತ್ರಗಳೊಡನೆ ಒಂದು ಪುಸ್ತಕ ಪ್ರಕಟಿಸ ಬೇಕೆಂಬ ಯೋಚನೆ ಮಾಡಿದ್ದರು. ಅದು ಕೈಗೂಡಲಿಲ್ಲ. ಆ ಕೆಲಸ ಇನ್ನಾದರೂ ಆಗಬೇಕಾದದ್ದೇ. ಶ್ರೀನಿವಾಸರಾಯರ ಇವೆರಡೂ ಕೃತಿಗಳು ಅವರ ಕನ್ನಡ ಅಭಿಮಾನದ ದ್ಯೋತಕವಾಗಿವೆ.

ಶ್ರೀನಿವಾಸರಾಯರು ತೆಗೆದ ಎಲ್ಲ ಚಿತ್ರಗಳಲ್ಲಿ ಬಿಷ್ಟಪ್ಪನ ಗೋಪುರ ವೊಂದು ಇದ್ದೇ ಇದೆ. ಛಾಯಾಚಿತ್ರದ ಪಡಿಯಚ್ಚಿಗೆ "ಶ್ರೀ.· ಕಂ." ಮುದ್ರೆ. ಇವೆರಡೂ ಅವರ ಟ್ರೇಡಮಾರ್ಕ. ಇದಿಷ್ಟು ವ್ಯವಹಾರವಾದರೆ ಅವರ ಉಳಿದ ಬಾಳೆಲ್ಲಾ ಕನ್ನಡಕ್ಕೆ ಮೀಸಲು. ಅವರದು ಕನ್ನಡದ ಕಲೆ. ಅದನ್ನು ತಮ್ಮ ಎಲ್ಲಾ ರಂಗದಲ್ಲಿಯೂ ಚಿತ್ರಿಸುತ್ತಿದ್ದರು.

ಮುಂದೆ ಅವರು ನಾಡಿನಲ್ಲಿ ಸಮಾವೇಶವಾದರು. ಸಾಹಿತ್ಯ ಪರಿಷತ್ತು, ಏಕೀಕರಣ ಸಂಘ, ವಿದ್ಯಾವರ್ಧಕ ಸಂಘ, ವ್ಯಾಯಾಮ ಶಾಲೆ, ಕರ್ನಾಟಕ ಟಾಕೀಸ,— ಜಯಕರ್ನಾಟಕ, ಜಯಂತಿ, ಸಂಯುಕ್ತಕರ್ನಾಟಕ— ಇವೆಲ್ಲಾ ಸರಿಯಾಗಿ ನಡೆಯಬೇಕು. ವೆಂಕಟರಾಯರು, ಕೃಷ್ಣರಾಯರು, ಶ್ರೀಕಂಠಯ್ಯನವರು ಇವರಲ್ಲೆಲ್ಲ ಅಪಾರ ಅಭಿಮಾನ. ಶ್ರೀನಿವಾಸರಾಯರು ಅಪ್ಪದ ಸಂಸ್ಥೆಯಿಲ್ಲ; ಒಪ್ಪದ ವ್ಯಕ್ತಿಯಿಲ್ಲ.

ಆಲೂರ ವೆಂಕಟರಾಯರ ಷಷ್ಟ್ಯಬ್ದಿಪೂರ್ತಿ ಉತ್ಸವ ನಡೆದಿತ್ತು. ಎಲ್ಲಾ ಕಡೆಯಲ್ಲಿ ಕುಲಪುರೋಹಿತರಿಗೆ ಮರ್ಯಾದೆ ಮಾಡಿದರು. ಶೀನಪ್ಪನ ಮನೆಯಲ್ಲಿ 'ಕಡುಬಿನ ಕಾಳಗ'ವಾಯಿತು. ಜಿಲೇಬಿ ನಮ್ಮದಲ್ಲ; ಕರಿಗಡಬು ಕನ್ನಡ ಸಂಸ್ಕೃತಿ ಎಂದರು ಶೀನಪ್ಪ. ಇದು ಅವರದೇ ಸಿದ್ಧಾಂತ.

ಪುಣೆಯಲ್ಲಿ ಕನ್ನಡಿಗರಿಗೆ ಇಲ್ಲದ್ದು ಧಾರವಾಡದ ಮರಾಠಿಗರಿಗೇಕೆ— ಇದೂ ಒಂದು ಅವರ ಸಿದ್ಧಾಂತ. ಪುಣೆಯ ಕನ್ನಡಿಗರು ಜಾಗ್ರತರಾಗ ಬೇಕು. ಧಾರವಾಡದಲ್ಲಿ ಮರಾಠಿಗರು ಸಾಧಿಸಿದ್ದನ್ನು ಅವರು ಪುಣೆಯಲ್ಲಿ ಸಾಧಿಸಬೇಕು. ಪುಣೆಯ ಮರಾಠಿಗರು ಧಾರವಾಡದಲ್ಲಿ ತಮ್ಮವರಿಗೆ ದೊರೆತ ಮರ್ಯಾದೆ ಪುಣೆಯಲ್ಲಿ ಕನ್ನಡಿಗರಿಗೆ ನೀಡಬೇಕು. ಈ ವಾದ ದಲ್ಲಿಯ ಮರಾಠಿ ವೈರಕ್ಕಿಂತ ಕನ್ನಡದ ಕಳಕಳಿ ಅರ್ಥಮಾಡಿಕೊಳ್ಳಬೇಕು.

ಹಿಂದೆ ಕನ್ನಡಕ್ಕಾಗಿ ಕೆಲಸಮಾಡಿದ ಹಿರಿಯರ ಬಗ್ಗೆ ಶೀನಪ್ಪನವರಲ್ಲಿ ಎಂಥ ಅಭಿಮಾನ ! ಅವರ ಸ್ಮೃತಿ ನಮ್ಮ ಹೃತ್ಪಟಲದಲ್ಲಿ ಸದಾ ಮೂಡಿರ ಬೇಕು. ಅದೊಂದು ಮಾರ್ಗದರ್ಶಿಯಾಗಿ ಉಳಿಯಬೇಕು. ಕನ್ನಡದ ಹೋರಾಟದ ಇತಿಹಾಸ ನಮ್ಮ ಮುಂದಿನ ಪೀಳಿಗೆಗೆ ಕೈಗೋಲಾಗಲಿ ಎಂಬ ಹಂಬಲ ಶ್ರೀನಿವಾಸರಾಯರದು. ಮುದವೀಡು ಕೃಷ್ಣರಾಯರ ಖಂಡತುಂಡ ಲೇಖನಗಳನ್ನು ಸಂಗ್ರಹವಾಗಿ ಸಂಪಾದಿಸಿ ಪ್ರಕಟಿಸಬೇಕು ಎಂದು ಅವರ ಆಲೋಚನೆಯಿತ್ತು. ಅದರದೊಂದು ಯೋಜನೆಯನ್ನೇ ಮಾಡಿ ಕೆಲಸ ಕೈಕೊಳ್ಳಬೇಕೆಂಬ ಆಶೆ ತೀವ್ರವಾಗಿತ್ತು ಅವರಿಗೆ. ಆ ಕೆಲಸ ಇನ್ನಾದರೂ ನಡೆದರೆ ಶೀನಪ್ಪನವರ ಆತ್ಮ ಅಲ್ಲಿಂದಲೇ ನಲಿದಾಡೀತು.

ಇಂಥ ನಿರ್ದಿಷ್ಟವಾದ ಕೆಲಸಗಳಲ್ಲದೆ ನಾಡಿನ ಸರ್ವತೋಮುಖ ಉನ್ನತಿಯ ಎಲ್ಲ ವಿಧಾನಗಳಲ್ಲಿಯೂ ಇವರ ಕೈ ಸಹಾಯಕವಾಗಿತ್ತು. ಒಣ ಉಪಚಾರಕ್ಕಾಗಿ, ಇಲ್ಲದ ದಾಕ್ಷಿಣ್ಯಕ್ಕಾಗಿ, ಸಲ್ಲದ ದೊಡ್ಡತನಕ್ಕಾಗಿ ಅವರು ಎಂದೂ ಕನ್ನಡದ ಹಟ ಬಿಡಲಿಲ್ಲ. ಇದರಿಂದ 'ಒರಟು ಜನ' ಎನ್ನಿಸಿಕೊಂಡರು; ಅಪಮಾನ ಸಹಿಸಿದರು; ಹಾನಿ ಸೋಸಿದರು; ಹಟ ಸಾಧಿಸಿದರು. ಅದೇ ಲಾಭವೆಂದರು; ಅದೇ ಮರ್ಯಾದೆಯೆಂದರು.

ಅವರ ದುರಂತ ಮರಣ ಬಿಳೀ ಮುಗಿಲ ಸಿಡಿಲಿನಂತೆ ಅನಪೇಕ್ಷಿತ; ಅದಕ್ಕಿಂತ ಘಾತುಕ. ಅವರ ಜನಪ್ರಿಯತೆಗೆ ಅಂದು ಸ್ಮಶಾನಯಾತ್ರೆಗೆ ನೆರೆದ ಜನರ ಗುಂಪೇ ಸಾಕ್ಷಿ.

ಕನ್ನಡದ ವೃಕ್ಷ ಆಳವಾಗಿ ಬೇರುಬಿಟ್ಟ ಹಳೇ ಮರ. ಇದರಲ್ಲಿ 'ಬಿಳಲು ಬಿಗಿದ' ಟೊಂಗೆಗಳೆಷ್ಟೊ ಇವೆ. ಸಿಡಿಹಾಯ್ದ ಭಾಗವೂ ಇದ್ದೀತು, ಆದರೆ ಟಿಸಿಲೊಡೆದು ಪುಷ್ಪವಾಗಿ ಬೆಳೆದು ಎಲೆಗಳಿಂದ–ಹೂಗಳಿಂದ ಕಂಗೊಳಿಸುವ ಮರವಿದು. ಇದರ ನೆಳಲೇ ಚೈತನ್ಯದಾಯಿ. ಇದು ಫಲಬಿಟ್ಟ ಮರ, ಬಿಡುವ ಮರ. ಇದರದೊಂದು ಒಳ್ಳೆಯ ರೆಂಬೆಯನ್ನು ಕಾಲನು ಕಡಿದು ಚೆಲ್ಲಿದರೆ ಮಗುವಿನ ಕೈತುತ್ತು ಕಾಗೆ ಹಾರಿ ಬಡಿದ ಹಾಗೆ—ಇದು 'ವಿಧಿ'ಯಲ್ಲದೆ ಇನ್ನೇನು !

(೧೯೪೫)

೮. ಪ್ರೊ. ಬಸವನಾಳರ ನೆನಪು

೩೯ನೆಯ ಕನ್ನಡ ಸಾಹಿತ್ಯಸಮ್ಮೇಳನದ ಸ್ವಾಗತ ಭಾಷಣ ನಡೆದಿತ್ತು. ಹೊರಗೆ ನಿಂತು ಧ್ವನಿವರ್ಧಕದ ಮೂಲಕ ಕೇಳುತ್ತಿದ್ದ ನನಗೆ ಗಾಳಿಯಲ್ಲಿ ತೂರಿಬಂದ ಸ್ವರ ವಿಸ್ಮಯವನ್ನು ತಂದಿತು. ಬಸವನಾಳರ ಸ್ವರ ಎಲ್ಲಿಂದ ಎಂದು ನನ್ನನ್ನು ನಾನೇ ಕೇಳಿಕೊಂಡೆ.

ಪ್ರೊ. ಬಸವನಾಳರು ಕಾಲವಾಗಿ ಆರು ವರುಷ ಸಂದಿವೆ. ಇಂದು ನೆರೆದ ಸಮ್ಮೇಳನದ ಮಂಟಪಕ್ಕೆ ಬಸವನಾಳ ಮಂಟಪವೆಂದು ಕರೆದಿದ್ದಾರೆ. ಮಂಟಪದ ಪಕ್ಕದಲ್ಲೇ ದಿವಂಗತರ ಅಮೃತಶಿಲಾ ಪ್ರತಿಮೆ ನಿಂತಿದೆ. ಮುಖದಲ್ಲಿ ಸಂತೃಪ್ತ ಛಾಯೆ !

ಸ್ವಾಗತ ಭಾಷಣ : ಧಾರವಾಡದ ಸುತ್ತಲಿನ ಸ್ಥಳಪುರಾಣ ಹೇಳುತ್ತಿದ್ದಾರೆ. ಸ್ವರ—ಅದೇ ಬಸವನಾಳರದು. ನನಗೆ ಭ್ರಮೆಯೋ—ಎಂದುಕೊಂಡೆ. ಮನಸ್ಸಿನ ತುಮುಲವನ್ನು ತಡೆಯಲಾರದೆ ಮಂಟಪದೊಳಕ್ಕೆ ನುಗ್ಗಿ ಹೋದೆ. ವೇದಿಕೆಯ ಮೇಲೆ ಡಾ॥ ನಂದೀಮಠರು ನಿಂತು ಮಾತನಾಡುತ್ತಿದ್ದಾರೆ. ಛೇ ! ಮತ್ತೂ ಸ್ವರ ಬಸವನಾಳರ ಸ್ವರದಂತೆಯೇ ಕೇಳುತ್ತಿದೆ ! ಬದಿಗೆ ನಿಂತ ಗೆಳೆಯನನ್ನು ಕೇಳಿದೆ. ಅವರು ಮುಗುಳು ನಕ್ಕರು ಮಾತ್ರ. ನನ್ನದೇ ಭ್ರಮೆ.

ಹಿಂದಿನ ಸಮ್ಮೇಳನದಲ್ಲಿ (೧೯೪೦) ಪ್ರೊ. ಬಸವನಾಳರು ಸ್ವಾಗತ ಸಮಿತಿಯ ನೇತಾರರಾಗಿ ದುಡಿದವರು. ಧಾರವಾಡದ ಸಾಹಿತ್ಯ-ಸಾಂಸ್ಕೃತಿಕ ಚಟುವಟಿಕೆಗಳಿಗೆಲ್ಲ ಜೀವನಾಡಿಯಾಗಿದ್ದವರು. ಅವರಿಲ್ಲದೆ ಇಂಥ ಮಹಾ ಸಮ್ಮೇಳನ ನಡೆಯುವುದುಂಟೆ ? ನನ್ನ ಮಟ್ಟಿಗಂತೂ ದಿವಂಗತರ ಆತ್ಮಶ್ರೀ ಅಲ್ಲೇ ಕೆಲಬಲದಲ್ಲಿ ಸುಳಿದಾಡುತ್ತಿರಬೇಕು ಎನಿಸಿತು. ಎಂತಲೇ ಡಾ॥ ನಂದೀಮಠರ ಸ್ವರದಲ್ಲಿ ಪ್ರೊ. ಬಸವನಾಳರ ಕಂಠಶ್ರೀ ಸ್ಪಂದಿಸಿದಂತೆ ನನಗೆ ಭಾಸವಾಗಿರಬೇಕು. ಸಮ್ಮೇಳನದ ಕಾರ್ಯಕ್ರಮಗಳು ನಡೆದಿದ್ದವು.

ನನ್ನ ಚಿತ್ತದಲ್ಲಿ ಮೂಡಿದ ಬಸವನಾಳರ ನೆನಪು, ಅವರನ್ನು ಚಿತ್ರಿಸಿ ಕೊಳ್ಳುತ್ತಲೇ ಇತ್ತು.

೨

ಶ್ರೀಯುತರ ಜೀವನವೆಂದರೆ ತುಂಬಿದ ಕೊಡದಂತಿತ್ತು. ಅವರ ಮುಖದಲ್ಲಿಯ ನಸುನಗೆಯಲ್ಲಿ ತೃಪ್ತಿಯ ಕಳೆಯಿತ್ತು. ಅವರ ಸ್ನಿಗ್ಧ ನೋಟ ದಲ್ಲಿ ಗೆಲುವಿನ ಕಳೆಯಿತ್ತು. ಅಂಗಾಂಗಗಳ ಸೌಷ್ಟವದಲ್ಲಿ ಆರೋಗ್ಯದ ಪ್ರಸನ್ನತೆಯಿತ್ತು. ಆಡುವ ಮಾತಿನಲ್ಲಿ ತೂಕವಿತ್ತು; ಗಾಂಭೀರ್ಯವಿತ್ತು. ಅನಿಶ್ಚಿತತೆ ಇದ್ದಿಲ್ಲ; ತೊಡಕು-ತೊಂದರೆಗಳಾವವೂ ಕಂಡುಬರುತ್ತಿದ್ದಿಲ್ಲ. ಅದೊಂದು ಸಾಗರ ಗಾಂಭೀರ್ಯವಾಗಿತ್ತು.

ಅವರು ಜೀವನದಲ್ಲಿ ಕಾಣಬೇಕಾದುದನ್ನೆಲ್ಲಾ ಕಂಡಾಗಿತ್ತು ಎಂದಿರಬಹುದು. ಅವರ ವ್ಯಕ್ತಿತ್ವದಲ್ಲಿ ಸಾಫಲ್ಯದ ಮೆರುಗಿತ್ತು.

ನಾನವರನ್ನು ಹತ್ತಿರದಿಂದ ನೋಡಿದ್ದು ಸಾಹಿತ್ಯಮಂಟಪದ ಸಭೆಗಳಲ್ಲಿ. ಅವರು ಮಂಟಪದ ಸಭೆಗಳಿಗೆ ಬಹುಶಃ ತಪ್ಪದೆ ಬರುತ್ತಿದ್ದರು. ಬಂದಾಗ ಲೆಲ್ಲ ಸಮಯಕ್ಕೆ ಮುಂಚೆಯೇ ಬಂದಿರುತ್ತಿದ್ದರು. ಯಾವುದೂ ನಿರ್ಬಂಧ ಗಳಿಲ್ಲದೆ ನಡೆಯುತ್ತಿದ್ದ ಮಂಟಪದ ಕಾರ್ಯಕ್ರಮಗಳಿಗೆ ಈ ಸಮಯನಿಷ್ಠೆ ಯಾದರೂ ಆವಶ್ಯಕವಾಗಿತ್ತು ಎಂಬುದಕ್ಕೆ ಬಸವನಾಳರು ಸಾಕ್ಷಿ ಯಾಗಿದ್ದರು.

ಮಂಟಪದ ಸದಸ್ಯ ಸಂಪತ್ತು ಎಂದರೆ ಪ್ರೊ. ಬಸವನಾಳರಂಥ ಹಿರಿಯರಿಂದ ನನ್ನಂಥ ಕಿರಿಯನವರೆಗೂ ವ್ಯಾಪ್ತಿಯಿತ್ತು. 'ಎನ್ನಿಂದ ಕಿರಿಯರಿಲ್ಲ' ಎಂಬ ಬಸವಣ್ಣನವರ ಮಾತು ನಮ್ಮೆಲ್ಲರ ಮನೋಭಾವ ವಾಗಬೇಕಿತ್ತು ಎಂಬುದು ಬಸವನಾಳರ ಆಶಯವಾಗಿತ್ತು. ಅನುಭವ ಮಂಟಪದ ಹೆಸರಿನಿಂದಲೇ ಸ್ಫೂರ್ತವಾದದ್ದು ಸಾಹಿತ್ಯ ಮಂಟಪದ ಹೆಸರು. ನಮ್ಮಲ್ಲಿ ವಿನೋದಕ್ಕೆ ಹೇಳುತ್ತಿದ್ದುದುಂಟು ; ಅನುಭವ—ಅನುಭಾವ ಸಾಹಿತ್ಯಕ್ಕೇಕೆ — ಎಂದು. ನಮಗೆ 'ಮಂಟಪ' ಸಾಕಾಗಿತ್ತು. ಸಾಹಿತ್ಯ ವೊಂದನ್ನು ಮಾತ್ರ ನಮ್ಮ ಶ್ರೇಯಸ್ಸಿನ ಪತಾಕೆಯಂತೆ ನೆಟ್ಟುಕೊಂಡಿದ್ದೆವು.

ಸಾಹಿತ್ಯಕ್ಕೆ ಅನುಭವ—ಅನುಭಾವ ಬೇಕಾಗಬಹುದು. ಸಾಹಿತಿಗೆ ಅದೇನು ಅನಿವಾರ್ಯವೇ ? ಇಂದಂತೂ ಅನುಭವರಾಹಿತ್ಯವೇ ಸಾಹಿತ್ಯವೆಂಬ ಅನಂಭವ ಓದುಗರಿಗಾಗಿದೆ ಎಂಬುದು ಕಂಡುಬಂದಿದೆ. ಈ ಅನುಭವ ಸಾಹಿತಿಗೆ ಬಂದಂದು ಆವನೂ ಓದುಗನಾಗಿಯೇ ಉಳಿಯುತ್ತಾನೆ. ಸೃಷ್ಟಿಕಾರ್ಯಕ್ಕೆ ಮತ್ತೆ ಹೊಸ ಉಮೇದುವಾರರು ಮುಂದಾಗುತ್ತಾರೆ.

ಮಂಟಪದ ಸಭೆಗಳು ವಾರಕ್ಕೆ ಒಂದಾವರ್ತಿ ಸೇರುತ್ತಿದ್ದವು. ಸಾಹಿತ್ಯದ ವಿಷಯವಾಗಿ ಅನೌಪಚಾರಿಕ ಚರ್ಚೆಯೇ ಅದರ ಕಾರ್ಯಕ್ರಮಗಳು. ಯಾವುದರ ಕಟ್ಟುಪಾಡೆಂಬುದಿರದೆಯೂ ಸ್ನೇಹಸೂತ್ರದಲ್ಲಿ ಬಂಧಿತವಾದ ಆತ್ಮೀಯ ಪರಿಸರ ! ಅಲ್ಲಿ ಹಾಸ್ಯವಿತ್ತು; ವಿನೋದವಿತ್ತು. ಓಘದಲ್ಲಿ ಒಮ್ಮೊಮ್ಮೆ ಹಾಸ್ಯ ಅಪಹಾಸ್ಯವಾಗುವಾಗ, ವಿನೋದ ಯಾರಾದರೂ ನೋಯುವಂತಾದಾಗ, ಮಾತು ತೀರಾ ಲಘುವಾಗುವುದೆಂದಾಗ ಶ್ರೀ ಬಸವನಾಳರ ವ್ಯಕ್ತಿತ್ವ ಸಭೆಯ ಸಭ್ಯತೆಯನ್ನು ಕಾಯುತ್ತಿತ್ತು. ಒಂದಿಷ್ಟೂ ಕೆರಳದೆ ಆವರು ಮಾತನಾಡುತ್ತಿದ್ದರು. ವಿಷಯವಿವೇಚನೆಯಲ್ಲಿ ಪಾಂಡಿತ್ಯ, ಶೈಲಿಯಲ್ಲಿ ಸಾರಳ್ಯ,—ಇದನ್ನು ಗಮನಿಸದವರು ಅವರ ಮಂಡನೆಯಲ್ಲಿಯ ಹಸನ್ಮುಖತೆಯನ್ನಾದರೂ ಕಾಣಬಹುದಿತ್ತು. ಆ ಧಾಟಿ, ಹಿರಿತನ, ತಾರುಣ್ಯ, ಶೈಶವದ ಮಧುರಸಂಗಮದಂತಿತ್ತು. ಅವರು ಒಂದು ಒರೆಗಲ್ಲಾಗಿದ್ದರು. ವಿಚಾರ, ಭಾವನೆ, ಗಾಂಭೀರ್ಯ, ಸಭ್ಯತೆ, ವಿವೇಕ, ಸಾತ್ವಿಕತೆ ಇವನ್ನೆಲ್ಲವನ್ನು ಆ ಒರೆ ಕಂಡುಬಿಡುತ್ತಿತ್ತು. ಇದಕ್ಕೆ ವ್ಯತಿರಿಕ್ತವಾದುದನ್ನೂ ಅವರು ತಟ್ಟನೆ ಗ್ರಹಿಸಿಕೊಳ್ಳುತ್ತಿದ್ದರು.

ನಾಲ್ಕು ಜನರೊಡನೆ ಹೇಗಿರಬೇಕು ಎಂಬುದನ್ನು ಪ್ರೊ. ಬಸವನಾಳರಿಂದ ಕಲಿಯಬೇಕಿತ್ತು. ಮನೆಯವರಿರಲಿ, ಆತ್ಮೀಯರಿರಲಿ, ಸಣ್ಣವರಿರಲಿ, ದೊಡ್ಡವರಿರಲಿ, ನಾಲ್ಕು ಜನ ಎಂದರೆ ನಾಲ್ಕು ಜನವೇ. ಅದು ಒಂದಲ್ಲ; ನಾಲ್ಕು ರೀತಿ. ಅಲ್ಲಿ ವೈವಿಧ್ಯವೂ ಇದೆ; ವೈಶಾಲ್ಯವೂ ಇದೆ. ನಾಲ್ಕು ಒಂದಾಗುವುದು ಎಂದರೆ ಅದರ ವೈಶಿಷ್ಟ್ಯವನ್ನು ಅಲ್ಲಗಳೆದಂತೆ. ಅದು ಶಿಷ್ಟಾಚಾರವಲ್ಲ ಎಂಬ ರೀತಿ ಅವರದು. ಈ ಭೂಮಿಕೆಯಿಂದವರು ಎಂಥ ಜಟಿಲ ಸಮಸ್ಯೆಗಳನ್ನೂ ಸಹ್ಯವಾಗಿ ಎದುರಿಸುತ್ತಿದ್ದರು. ಸಹನಾತೀತವೆಂಬುದೇ ಅವರಿಗೆ ಅಸಹ್ಯವಾಗಿತ್ತು.

"ಎನ್ನ ತಪ್ಪುಗಳು ಅನಂತಕೋಟಿ; ನಿನ್ನ ಸೈರಣೆಗೆ ಲೆಕ್ಕವಿಲ್ಲ" ಎಂಬ ವಚನವನ್ನು ಒಮ್ಮೆ ವಿವರಿಸುತ್ತಿದ್ದರು. ಅವರ ಗಾಂಭೀರ್ಯದಲ್ಲಿ ಈ ವಿನೀತಭಾವವನ್ನು ಕಂಡು ಅಚ್ಚರಿಯಾಯಿತು. ಈ ಮನೋಭಾವವನ್ನು ಮೈಗೂಡಿಸಿಕೊಂಡವರಿಗೆ ಅಹಂಕಾರವೆಲ್ಲಿಂದ ಬಂದೀತು? ಇಂಥವರೊಡನೆ ಯಾರು ಜಗಳ ಕಾಯುತ್ತಾರೆ? ಇದರಿಂದ ಪ್ರತಿಷ್ಠೆ ಹೋದೀತೆ, ಬಂದೀತೆ?

* * * * *

ಒಂದು ಸಲ ಮಂಟಪದ ಸಭೆಯಲ್ಲಿ ಗೃಹಜೀವನದ ಸಮಸ್ಯೆಗಳ ಬಗ್ಗೆ ಚರ್ಚೆ ಇತ್ತು. ಆ ಚರ್ಚೆಯನ್ನು ನಾವು ನಾವೇ ಮಾಡಿದೆವಾದರೆ ಏನು ಫಲ ಎಂದರು ಬಸವನಾಳರು. ಆ ಸಮಸ್ಯೆ ಯಾರನ್ನು ಕುರಿತಿದೆಯೋ ಆ ಗೃಹಿಣಿಯರು ಬರಬೇಡವೇ ಎಂದರು. ಮುಂದೊಂದು ದಿನ ಸಭೆಗೆ ಎಲ್ಲಾ ಸದಸ್ಯರು ಚತುರ್ಭುಜರಾಗಿ ಬಂದರು ಗೃಹದೇವತೆಯರು ಬಂದರೆಂದ ಮೇಲೆ ಮನೆಯಿಂದ ತಿನಿಸೂ ಬಂದಿತ್ತು. ಪ್ರೊ. ಬಸವನಾಳರು ಕುಟುಂಬವತ್ಸಲರು. ಮಡದಿ ಮಕ್ಕಳೊಡನೆ ಒಂದು ಬುಟ್ಟಿ ಕರಿಗಡಬು ಸಮೇತ ಸಭೆಗೆ ಬಂದರು. ತಿಂದು ತೇಗಿದ ಸದಸ್ಯಗಣಕ್ಕೆ ಅಂದು ಚರ್ಚೆಯೇ ಬೇಡವಾಗಿತ್ತು. ಅದೊಂದು ಶುಭಸಂದೋಹವಾಗಿತ್ತು. ಪರಸ್ಪರ ಪರಿಚಯ, ನಗೆ, ವಿನೋದ, ಕ್ಷೇಮ ಸಮಾಚಾರ! ಗೃಹಜೀವನದ ಸಮಸ್ಯೆ ವೇದಿಕೆಯ ಮಾತುಗಾರಿಕೆಗೆ ಅನ್ನವಾಗಬಹುದು. ಆದರದು ಒಮ್ಮುಖದ ಹೃದಯವೇದನೆ. ಈಗ ಚರ್ಚೆ ಎಲ್ಲಿಂದ ಬಂತು? ಅದು ಚರ್ಚೆಯ ವಿಷಯವೇ ಅಲ್ಲ ಎಂಬಂತಿತ್ತು ಸಭೆಯ ಮನೋಭಾವ. ಮಾತಿನಲ್ಲಿ ಸಭ್ಯತೆ ತಾನೇ ತಾನಾಗಿತ್ತು. ನಡೆಯಲ್ಲಿ ಸೌಜನ್ಯವಿತ್ತು. ಸ್ವಚ್ಛಂದವಾದರೂ ಸೀಮಿತವಾದ, ಸರಳವಾದರೂ ಸರಸ-ಸಜ್ಜನಿಕೆಯ ವಾತಾವರಣ. ಚರ್ಚೆಯಲ್ಲಿ, ವಾದ-ವಿವಾದದಲ್ಲಿ, ಪಾಂಡಿತ್ಯ ಪ್ರದರ್ಶನದಲ್ಲಿ ಹೊರಡದ ಏನೋ ಒಂದು ನಿತಾಂತವಾದ ತಿಳಿವಿನ ಬೆಳಕು ಹರಡಿದಂತಿತ್ತು. ಸಭೆಗಳಲ್ಲಿ ಸಭ್ಯತೆ ಕಾಯಬೇಕಾದರೆ ಮಹಿಳೆಯರ ಹಾಜರಿಯೇ ಸಾಕು. ಮೊನ್ನೆ ಪಾರ್ಲಿಮೆಂಟಿನಲ್ಲಿ ಇಂಥದೊಂದು ಮಾತು ಬಂದಾಗ ನನಗೆ ನಮ್ಮ ಮಂಟಪದ ಅಂದಿನ ಸಭೆ ನೆನಪಿಗೆ ಬಂತು. ಮನುಷ್ಯ ಮನೆಯಲ್ಲಿ, ಪರಿಚಿತ

ಜನರ ಮಧ್ಯದಲ್ಲಿ ಸರಿಯಾಗಿಯೇ ಇರುತ್ತಾನೆ. ಅವನು ದಾರಿ ತಪ್ಪುವುದು ರಾಜಮಾರ್ಗದಲ್ಲೇ.

* * * * *

ಪ್ರೊ. ಬಸವನಾಳರು ಹಲವು ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಕರ್ನಾಟಕ ವಿಶ್ವವಿದ್ಯಾಲಯದ ಕಲ್ಪನೆಗೂ ಹುಟ್ಟಿಗೂ ಕಾರಣರಾದರು. ಅನೇಕ ಪ್ರಾಚೀನ ಕಾವ್ಯಗಳನ್ನು ಸಂಶೋಧಿಸಿ. ಸಂಪಾದಿಸಿ ಪ್ರಕಟಿಸಿದರು. ಧಾರವಾಡದ ಲಿಂಗಾಯತ ವಾಙ್ಮಯಸಂಸ್ಥೆ, ಮುರಘಾಮಠದ ಕಾವ್ಯ ಪ್ರಕಾಶನಗಳು ಅವರ ಪರಿಶ್ರಮದ ಫಲಗಳು. ಕನ್ನಡ ಬೃಹತ್ ಶಬ್ದ ಕೋಶದ ಅವರ ಗೆಯ್ಮೆ ಇನ್ನು ಬೆಳಕಿಗೆ ಬರಲಿದೆಯೆಂದು ಕೇಳುತ್ತೇವೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಕಷ್ಟದ ದಿನಗಳಲ್ಲೆಲ್ಲ ಅವರ ನೆರವು, ನಿರ್ದೇಶನಗಳು ಆದರ ಉನ್ನತವಾದ ಬದುಕಿಗೆ ಬೆಳಕನ್ನಿತ್ತವು. ನೂರಾರು ಸಭೆ-ಸಮ್ಮೇಳನಗಳನ್ನು ನಡೆಸಿದರು. ಹತ್ತು-ನೂರು ಜನರನ್ನು ಕಟ್ಟಿ ಕೊಂಡು ಸಾರ್ವಜನಿಕ ಕೆಲಸಮಾಡಿದವರಿಗೆ ಜನ ಮನೋಭಾವ ಎಂಥದೆಂದು ಗೊತ್ತು. ಭಿನ್ನಾಭಿಪ್ರಾಯ ಇಂಥ ಸಂಘಟನೆಗಳನ್ನು ಅಲ್ಲಾಡಿಸುವುದು ಸ್ವಾಭಾವಿಕ. ಅಂಥ ಸಂದರ್ಭದಲ್ಲಿ ಪ್ರೊ. ಬಸವನಾಳರು ಧೈರ್ಯವಾಗಿ ಪ್ರವೇಶಿಸುತ್ತಿದ್ದರು. ಆಗ ಸಂಧಾನ ಕಟ್ಟಿಟ್ಟದ್ದೇ. ಆಳವಾದ ಅಭ್ಯಾಸ ವಿಸ್ತಾರವಾದ ನಿರೀಕ್ಷೆ, ಉನ್ನತ ಮನೋಭಾವಗಳಿಂದ ಅವರು ಸ್ವಯಂ ಪ್ರತಿಷ್ಠಿತರಿದ್ದರು. ಅಂತೇ ಅವರು ಚಿಲ್ಲರೆತನದಿಂದ ದೂರವಾಗಿದ್ದರು; ಅಂತಲೇ ಅವರು ಸಂಧಾನಕಾರ್ಯದಲ್ಲಿ ಸಫಲರಾಗುತ್ತಿದ್ದರು. ಅದರಿಂದ ಅವರ ಪ್ರತಿಷ್ಠೆ ದ್ವಿಗುಣಿತವಾಗುತ್ತಿತ್ತು.

ನಿಷ್ಠುರದಿಂದ ಜನರನ್ನು ಗೆಲ್ಲಲು ಸಾಧ್ಯವೇ ? ಗೆಲ್ಲುವದೊಂದೇ ಜೀವಿತ ಧ್ಯೇಯವೇ ? ಸಮಾಜಜೀವನದಲ್ಲಿ ಸೇವಾಕಾಂಕ್ಷೆ ಬೆಳೆಯಬೇಕಾದರೆ ಮೆಚ್ಚುಗೆ ಪ್ರಥಮ ಕೊಡುಗೆಯಾಗಿರಬೇಕು. ಕಾರ್ಯನಿರ್ದೇಶನ ಅನಂತರದ್ದು. ಅದು ಉಪದೇಶರೂಪದಲ್ಲಿರಕೂಡದು. ಸಲ್ಲಾಪದಂತೆ ಆತ್ಮೀಯವಾಗಿರಬೇಕು. ಆಗ ಅದು ಶುಭವನ್ನೇ ತರುತ್ತದೆ. ಅಲ್ಲದೆ ದೂಷಣೆ, ದುರಹಂಕಾರಗಳು, ಪ್ಯೆಗಳ್ಳತನ, ಸ್ವ-ಸಮರ್ಥನೆಗಳು ಯಾವ ಕೆಲಸಕ್ಕೆ

ಬಂದಾವು—ಎಂದವರು ಹೇಳುವಾಗಿನ ಕಳಕಳಿಯನ್ನು ನೆನಸಿದರೆ ಅವರ ಪಕ್ವವಾದ ಮನಸ್ಥಿತಿಯು ಅರಿವಾಗುತ್ತದೆ.

ಪ್ರೊ. ಬಸವನಾಳರು ರಬಕವಿಯ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದಾಗ ಅವರಿಗೆ ಧಾರವಾಡದಲ್ಲಿ ನಡೆದ ಸತ್ಕಾರ ಸಭೆಗಳ ನೆನಪು ಬರುತ್ತದೆ. ಶ್ರೀರಂಗರು ಅವರಿಗೊಂದು ಪ್ರತ್ಯೇಕ ಸತ್ಕಾರ ಸಮಾರಂಭವನ್ನೇರ್ಪಡಿಸಿದರು. ಸತ್ಕಾರ ಸಭೆಗಳ ಬಗ್ಗೆ ಶ್ರೀರಂಗರಿಗೆ ಅಂಥ ಪಂಧುರಭಾವನೆಯಿದ್ದಿಲ್ಲ. ವ್ಯಕ್ತಿ ಪೂಜೆಯನ್ನವರು ಒಪ್ಪುವವರಲ್ಲ. ಆದರೆ ಬಸವನಾಳರೆಂದರೆ ಅವರಿಗೊಂದು ವ್ಯಕ್ತಿಯಾಗಿ ಕಾಣಲಿಲ್ಲ. ತಮಗೆ ಬಂದ ಬಸವನಾಳರ ಒಡನಾಟದ ನೆನಪನ್ನು ಶ್ರೀರಂಗರು ಹೇಳುತ್ತ ಅನುಕಂಪಗೊಂಡರು. ಶ್ರೀರಂಗರ ಬುದ್ಧಿಯ ತೀವ್ರತೆ, ಅಣಕ, ವ್ಯಂಗ್ಯಗಳನ್ನಷ್ಟೆ ಕಂಡಿದ್ದ ಅನೇಕರಿಗೆ ಅವರನ್ನು ಕರಗಿಸಿದ ಬಸವನಾಳರ ವ್ಯಕ್ತಿತ್ವದ ಬಗ್ಗೆ ತುಂಬ ಆದರವುಂಟಾಯಿತು. ಅಲ್ಲದೆ ಶ್ರೀರಂಗರ ಹೃದಯವಂತಿಕೆಯ ದರ್ಶನವೂ ಅಂದು ಲಭಿಸಿದಂತಾಯಿತು.

೩

ಇಂಥ ವ್ಯಾಪ್ತಿಯನ್ನು ನಡು ಹರೆಯದಲ್ಲೇ ಕಂಡ ಹಿರಿಯ ಜೀವ ಬದುಕಿನಲ್ಲಿ ಸುಖ ಸಮೃದ್ಧಿಯನ್ನೇ ಕಂಡಿರಲಿ. ಆದರೆ ನಾಡಜೀವನದ 'ಬೇಕು' ಗಳನ್ನು ರಬಕವಿಯ ಅಧ್ಯಕ್ಷ ಭಾಷಣದಲ್ಲಿ ಅವರು ಸಾರಿದ್ದನ್ನು ನೆನೆದರೆ ಆ ಜೀವದ ಅತೃಪ್ತಿ ದೇಶೋವಿಶಾಲವಾಗಿತ್ತೆಂದು ಅನಿಸದಿರುವುದಿಲ್ಲ. ಕನ್ನಡ ನಾಡು ಒಂದಾದ ಶುಭದಲ್ಲಿ ಉರುಬಿ ಬರುವ ಇಂದಿನ ಅನೇಕ ಸಮಸ್ಯೆಗಳನ್ನು ಎದುರಿಸುವ ಪ್ರಸಂಗದಲ್ಲಿ ಪ್ರೊ. ಬಸವನಾಳರನ್ನು ಕಳೆದುಕೊಂಡು ನಾಡು ಎಂಥ ಬಡವಾಗಿದೆ—ಎನಿಸದಿರುವುದಿಲ್ಲ.

ಕರ್ನಾಟಕ ವಿಶ್ವವಿದ್ಯಾಲಯ ಪ್ರೊ. ಬಸವನಾಳರ ಕನಸಿನ ಕೂಸು. ಆದರ ಒಂದು ಸಭೆಯಲ್ಲಿ ಭಾಗವಹಿಸಿದ ಅವರಿಗೆ ಸಾವು ಆಗಲೇ ಕಾದು ಕುಳಿತಿರಬೇಕೇ ? ಹತ್ತುಜನರೊಡನಿದ್ದು ಒಡನಾಡಿದವರು, ಹತ್ತಾರು ಸಂಸ್ಥೆಗಳನ್ನು ಕಟ್ಟಿ ಬೆಳಸಿದವರು—ಇಂಥವರಿಗೆ ಸಾವು ಸನ್ನಿಹಿತವಾದದ್ದು ಅಂಥ ಒಂದು ಮಹಾಸಂಸ್ಥೆಯ ಸಭೆಯ ಸಮಯಕ್ಕೆ !

ನೂರಾರು ಜನರ ನೆರವಿ !

ಅಂಥ ನಿರಲಸವಾದ ಬದುಕು ಪ್ರೊ. ಬಸವನಾಳರದು.

ಧಾರವಾಡದ ರಸ್ತೆಗಳ ಒಂದು ಬದಿಯಿಂದ ಮೆಲ್ಲಗೆ ನಡೆದು ಬರುವ ಬಸವನಾಳರು—

ಸಭೆಗಳಲ್ಲಿ ಕುಳಿತುಕೊಂಡ ಬಸವನಾಳರು—

ಕಾರ್ಯಕಾರಿ ಸಭೆಗಳಲ್ಲಿ ಕುಳಿತು ತಮ್ಮ ವ್ಯಕ್ತಿತ್ವದಿಂದಲೇ ಸಂಧಾನ ಸಾಧಿಸುವ ಬಸವನಾಳರು—

ಆ ನೆನಪು ಬೇರೂರಿ ನಿಂತಿದೆ.

—ಎಂತಲೇ ಡಾ॥ ನಂದೀಮಠರ ಸ್ವರದಲ್ಲಿ ಪ್ರೊ. ಬಸವನಾಳರನ್ನು ನಾನು ಕೇಳಿದೆ;—ಅಲ್ಲ ಕಂಡೆ !

(೧೯೫೭)

೯. ದಿ. ಸೌ. ಶ್ಯಾಮಲಾದೇವಿ

'ಹೊಂಬಿಸಿಲು' ನೋಡಿಲ್ಲವೇ ನೀವು ? ಬಿಸಿಲೇ ಹೂವಾಗಿರುವುದು ಎಷ್ಟು ಸೊಗಸು? ಬಿಸಿಲು ಪ್ರಖರವಾಗಿರುವಾಗ ಕಣ್ಣು ಕತ್ತಲೆಗುಡಿಸುತ್ತದೆ; ಹೂವಾಗಿರುವಾಗ ವಸ್ತುಗಳೆಲ್ಲ ಕಣ್ಣಿಗೆ ಬಿಡಿಬಿಡಿಯಾಗಿ ಗೋಚರವಾಗುತ್ತವೆ; ಹಗುರವಾದ ಬೆಳಕಿನಲ್ಲಿ ಸುಂದರವಾಗಿ ಕಾಣುತ್ತವೆ. 'ಹೂಬಿಸಿಲು' ಕಥಾ ಸಂಗ್ರಹದಲ್ಲಿನ ಕಥಾವಸ್ತುಗಳೂ ಅಷ್ಟು ರಮ್ಯವಾಗಿ, ಅಷ್ಟೇ ಸ್ಪಷ್ಟವಾಗಿ ಕಾಣುತ್ತವೆ.

ಇಂದು **'ಹೊಂಬಿಸಿಲು'** (ಸೌ. ಶ್ಯಾಮಲಾದೇವಿಯವರ ೨ ನೆಯ ಕಥಾಸಂಗ್ರಹ) ಹೊರಬಿದ್ದಿದೆ. ಆದರೆ ಈ ಎರಡು ಸಂಗ್ರಹಗಳ ಕರ್ತೃ ನಮ್ಮನ್ನಗಲಿ ಹೋಗಿದ್ದಾರೆ. ಬಿಸಿಲೆಲ್ಲ ಆರಿ-ಹಾರಿದೆ. ಕತ್ತಲೆ ತೂರಿ ಕವಿದು ಬಂದಿದೆ. ಈ ಕತ್ತಲೆಯಲ್ಲಿ ನಾವು ಏನೂ ನೋಡುವಂತಿಲ್ಲ. ನಮ್ಮ ಒಳಗಣ್ಣಿಗೆ ಕಾಣುವ ಈ ಲೇಖಕಿಯ ಸ್ಮೃತಿಚಿತ್ರವನ್ನೇ ಧೇನಿಸುತ್ತ ಕುಳಿತು ಕೊಳ್ಳಬೇಕಾಗಿದೆ.

ಸೌ. ಶ್ಯಾಮಲಾದೇವಿ ಎಂದೊಡನೆ ಮೊದಲು ಅವರ ಭವ್ಯ-ದಿವ್ಯ ವಾದ ರೂಪು ಕಣ್ಣೆದುರು ಬರುತ್ತದೆ. ದೇಹದಾರ್ಢ್ಯ ಇಂಥದಾದರೂ ಮುಖದಲ್ಲಿ ಹಸುಳೆಯ ಎಳೆನಗೆ. ಪರಿಚಿತರೊಡನೆಲ್ಲಾ ಸಲಿಗೆಯ ಸರಳ ಮಾತು. ಹೊಸಬರೊಡನೆ ವಿನಯದ ಇನಿಮಾತು. ಮಾತಂ ಹೀಗೇ ಮೊದ ಲಾಗಿ ಆತ್ಮೀಯತೆಯ ನಾಡಿನಲ್ಲಿ ಸಂಚರಿಸಿದ ಹಾಗೆ ಅನುಭವವಾಗುತ್ತಿತ್ತು, ಅವರನ್ನು ಕಂಡು ಮಾತಾಡಿದವರಿಗೆ.

ಸೌ. ಶ್ಯಾಮಲಾದೇವಿ ಈಗ ಇರುತ್ತಿದ್ದರೆ ಅವರಿಗೆ ೩೩ ವರುಷದ ನಡುಹರೆಯ. ಅವರು ತಮ್ಮನ್ನೇ ಆಳಿಕೊಂಡು ಸ್ವಚ್ಛಂದದಿಂದ ಕಾರ್ಯ ನಡಸಿದ್ದು ಈಚಿನ ಹತ್ತುವರುಷದಲ್ಲೇ. ಬರೆಯುವ ಪ್ರೀತಿಯಿಂದಲೇ ಇವರು ಕೆಲಸಕ್ಕೆ ಮೊದಲಿಟ್ಟರು. ಇವರ ಪತಿ ಸಂಪಾದಕರಾಗಿದ್ದ 'ಜಯಕರ್ನಾಟಕ'

ದಲ್ಲಿ ಅವು ಆಗಾಗ ಬೆಳಕು ಕಂಡವು. ಇವರು ಮೊದಮೊದಲು ಬರೆದ ಕಥೆಗಳು ನಡೆದ ಕೆಲವು ಘಟನೆಗಳನ್ನು ಆವಲಂಬಿಸಿ ಚಿತ್ರಿಸಿದ ಸರಲ ಮನೋಭಾವದ ಸುಂದರ ಚಿತ್ರಗಳು. ಮುಂದೆ ಬಂದ ಕಥೆಗಳು ಸಮಾಜದ ಅತಿ ಜಟಿಲವಾದ ಸಮಸ್ಯೆಗಳ ಎಳೆ-ಎಳೆಯಾದ ಮುದ್ದೆಗಳು ಎನ್ನಬಹುದು.

ಈ ಕಥೆಗಳನ್ನು ಬರೆಯುತ್ತಿರುವ ಕಾಲದಲ್ಲಾಗಲೆ ಶ್ರೀಮತಿಯವರ ಕಾರ್ಯಕ್ಷೇತ್ರ ವಿಸ್ತಾರವಾಗಿತ್ತು. ಮೊದಮೊದಲು ಪರಿಚಿತರ ಕ್ಷೇಮಚಿಂತನೆ ಗಳಿಂದ ಆರಂಭವಾಯಿತು. ಬೇನಿಗರ ಆರೈಕೆ-ಚಿಕಿತ್ಸೆಗಳು, ಎಳೆಯರ ಮದುವೆಯ ಸನ್ನಾಹಗಳು ಇವರ ಪ್ರೀತಿಯ ಕೆಲಸಗಳು. ಸ್ನೇಹಿತರ ಮನೆಯ ಕೆಲವು ಸಮಸ್ಯೆಗಳನ್ನು ಬಿಡಿಸಲು ಇವರು ಯತ್ನಿಸಿದ್ದುಂಟು. ಇಬ್ಬರ ಜಗಳ ಬಿಡಿಸಹೋಗಿ ಅದು ಬಿಡಲಾರದೆನಿಸಿದಾಗ ಇಬ್ಬರೊಡನೆಯೂ ಜಗಳಾಡಿಕೊಳ್ಳುವ ಪ್ರಸಂಗಗಳೂ ಇವರಿಗೆ ಬರುತ್ತಿದ್ದವು. ಆದರೆ ಎಂದಿನಂತೆ ಈ ಜಗವು ಕ್ಷಣಿಕ. . ಮತ್ತೆ ಮೊದಲಿನ ಸ್ನೇಹಾಚಾರ ಸುರುವಾಗಲು ಬಹಳಕಾಲ ಬೇಕಾಗುತ್ತಿದ್ದಿಲ್ಲ.

ಸೌ. ಶ್ಯಾಮಲಾದೇವಿಯವರಲ್ಲಿ ಮೊದಲು ಕಾಣುತ್ತಿದ್ದುದು ಅವರ ಚಿರಂತನವಾದ ಉತ್ಸಾಹ. ಅಂತೆಯೇ ಯಾವ ಕೆಲಸವನ್ನೂ ಕೈಕೊಳ್ಳಲು ಅವರಿಗೆ ತಡವಾಗುತ್ತಿದ್ದಿಲ್ಲ. ಕೆಲಸ ಕೈಕೊಂಡರೊ, ಉತ್ಸಾಹ ದ್ವಿಗುಣಿತ ವಾಗುತ್ತಿತ್ತು. ಕಾರ್ಯಾರಂಭದಲ್ಲಿ ಈ ಅತ್ಯುತ್ಸಾಹ ಒಮ್ಮೊಮ್ಮೆ ದುಡುಕು ಎನಿಸುವಷ್ಟು ಅವಸರವಾಗಿ ಕಂಡರೂ ಹಿಡಿದ ಕೆಲಸ ನಿಷ್ಠೆಯಿಂದ ನಡೆಯಿಸುವ ಅವರ ಕಾರ್ಯಶಕ್ತಿ ಅದನ್ನು ಬಹುಬೇಗ ಮರೆಯಿಸುತ್ತಿತ್ತು. ಇವರು ಕತೆಗಳನ್ನು ಬರೆಯುತ್ತ 'ಜಯಕರ್ನಾಟಕ'ದ ಕಾರ್ಯಭಾರದಲ್ಲಿ ಪತಿಗೆ ಸಹಾಯಕರಾಗಿ ಕೆಲಸಮಾಡತೊಡಗಿದರು. ಮುಂದೆ ಬರಬರುತ್ತ ಆದರ ಆಡಳಿತವನ್ನೇ ನೋಡತೊಡಗಿದರು. ಪತಿಯೊಡನೆ ಜತೆಗೂಡಿ ಕೆಲಸ ಮಾಡುತ್ತ ಸಾಹಿತಿಗಳೊಡನೆ ನಡೆಯುತ್ತಿರುವ ಮಾತುಕಥೆ, ಪತ್ರವ್ಯವಹಾರ ಗಳಿಂದಲೇ ಸಂಸ್ಕಾರಪಡೆದು ಮೊದಲೇ ಸಾಹಿತ್ಯಪ್ರಿಯತೆಯುಳ್ಳ ಜೀವ ತನ್ನ ಉತ್ಸಾಹದಿಂದಲೇ ಪ್ರೋತ್ಸಾಹಪಡೆದು 'ಜಯಕರ್ನಾಟಕ'ದ ಸಹ ಸಂಪಾದಕತ್ವವನ್ನೂ ನಿರ್ವಹಿಸಿತು; ಕಾರ್ಯವನ್ನೂ ಮಾಡಿತು.

ಸಹಸಂಪಾದಕತ್ವದ ಹೊಣೆಗಾರಿಕೆ ಪತ್ರಿಕಾವ್ಯವಸಾಯ ಬಲ್ಲವರಿಗೇ ಗೊತ್ತು. ಸಂಪಾದಕ ಶ್ರೀ ರಾಮಚಂದ್ರರಾಯರಿಗೂ ಅನೇಕ ಬಗೆಯ ಕೆಲಸಕಾರ್ಯಗಳು. ಇತ್ತೀಚೆಗಂತೂ ರಾಯರು ಸಿಮ್ಲಾದಲ್ಲಿ ಒಂದು ಕೆಲಸ ಮಾಡುವದಕ್ಕೆಂದು ಹೋದರು. ಆಗ ಸೌ. ಶ್ಯಾಮಲಾದೇವಿಯವರೇ 'ಜಯಕರ್ನಾಟಕ'ದ ಎಲ್ಲಾ ಹೊಣೆಗಾರಿಕೆಯನ್ನು ಹೊತ್ತು ಕೆಲಸ ಮಾಡಿದರು. ಇವರ ಆಡಳಿತೆಯಲ್ಲಿ 'ಜಯಕರ್ನಾಟಕ' ಸಕಾಲಕ್ಕೆ ಪ್ರಕಟವಾಗುತ್ತ ಬಂತು. 'ತಾಯಿ-ಮಗು' ಎಂಬ ಒಂದು ವಿಶಿಷ್ಟ ವಿಭಾಗ ವೇರ್ಪಟ್ಟು ಆ ಮೂಲಕ ಮಹಿಳೆಯರ ಸಮಸ್ಯೆಗಳನ್ನು ಕುರಿತು ಚರ್ಚಿಸುವ ಲೇಖನಗಳು ಬರಹತ್ತಿದವು. ತಾಯ ಹೊಣೆ, ಮಕ್ಕಳ ಪಾಲನೆ, ಗೃಹಶೃಂಗಾರ, ಅಡಿಗೆಯ ವಿಭಾಗ ಇವುಗಳಿಗೆಲ್ಲ 'ಜಯಕರ್ನಾಟಕ'ದಲ್ಲಿ ಎಡೆ ದೊರೆಯಿತು.

ಈ ಮಧ್ಯದಲ್ಲಿ ಕರ್ನಾಟಕ ಮಹಿಳಾಮಂಡಳದ ವಿಚಾರ ಬಂತು. ಇವರ ಕಾರ್ಯದರ್ಶಿತ್ವದಲ್ಲಿಯೇ ಅದು ಹೊಸ ವ್ಯವಸ್ಥೆಯಿಂದ ಮುನ್ನಡೆ ಯಿತು. ಅದೊಂದು ಪ್ರಾಂತಿಕ ಮಂಡಲವಾಗಿ, ಅಖಿಲಭಾರತ ಮಹಿಳಾ ಪರಿಷತ್ತಿನ ಸ್ಥಾಯೀ ಸಮಿತಿಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಇವರು ಮೊದಲನೆಯ ಸಲ ನಾಗಪುರಕ್ಕೆ ಹೋಗಿ ಬಂದರು. ಮುಂದೆ ಬಡೋದೆ, ಸಾಂಗ್ಲಿ, ದಿಲ್ಲಿ, ಮೈಸೂರುಗಳಿಗೂ ಹೋಗಿ ಬಂದರು. ಈ ಸಂಚಾರದ ಫಲವಾಗಿ ಅನೇಕ ದೊಡ್ಡ ಸಾಮಾಜಿಕ ಕೆಲಸಗಾರರ ಪರಿಚಯ ವಾಯಿತು. ಇವರ ಪರಿಚಯ ವಿಶಾಲವಾಗಿ ಬೆಳೆದಂತೆ ಮನಸ್ಸೂ ವಿಶಾಲ ಗೊಂಡಿತು. ಸಾಹಿತ್ಯ ನಿರ್ಮಾಣದಿಂದ ಮೊದಲಾದ ಇವರ ಚಟುವಟಿಕೆ ಗಳು ಅನೇಕ ಬಗೆಯ ಸಾಮಾಜಿಕ ಕಾರ್ಯಗಳಲ್ಲಿ ರೂಪುಗೊಂಡವು. ಎಲ್ಲ ಬಗೆಯ ಕೆಲಸದಲ್ಲೂ ಇವರದು ಮುಂದಾಳುತನವೇ ಹೊರತು ಹಿಂದಾಳು ತನವಲ್ಲ.

ಇವರ ಕಾರ್ಯವ್ಯಾಪ್ತಿ ನಗರಸಭೆಯ ಸದಸ್ಯತ್ವದಿಂದ ಮುಂದುವರಿ ಯಿತು. ಧಾರವಾಡ ನಗರಸಭೆಗೆ ಪ್ರಥಮ ಮಹಿಳಾ ಸದಸ್ಯೆಯೆಂದರೆ ಇವರೇ. ಹೀಗೆ ಬಹುಮುಖವಾದ ಚಟುವಟಿಕೆಗಳನ್ನು ದಣಿಯದೆ ನಡಸುತ್ತಿದ್ದರು.

ಸೌ. ಶ್ಯಾಮಲಾದೇವಿ ವಿದ್ಯಾರ್ಥಿನಿಯಾಗಿದ್ದಾಗಲೂ ಬಹಳ ಮುಂದು. ಅಲ್ಲೂ ಸರಿಸಾಟಿಯಿಲ್ಲದ ಉತ್ಸಾಹ; ಅಲ್ಲೂ ಮುಂದಾಳುತನ. ಶಾಲೆಯಲ್ಲಿ ಪೋಲಿಹುಡುಗರು ಗೇಲಿಮಾಡಿದರೆ ಅವರಿಗೆ ಬುದ್ಧಿ ಕಲಿಸಿಬಿಡುತ್ತಿದ್ದರು. ಹೀಗೆ ಒಂದೆರಡು ಸಲ ಬುದ್ಧಿಕಲಿತಮೇಲೆ ಗಂಡುಹುಡುಗರು ಹುಡುಗೆಯರ ಕೂಡ ಮರ್ಯಾದೆಯಿಂದ ನಡೆದುಕೊಳ್ಳಹತ್ತಿದರಂತೆ. ಆಗಿನಿಂದಲೂ ಸ್ತ್ರೀ ಜಾತಿಯು ಸರಿಸಮಾನತೆಗಾಗಿ ಕಾದಿ ದಣಿದರು. ಇವರು ಮದುವೆಯಾದ ಹೊಸದರಲ್ಲಿ ಇವರ ಬಾಳು ಮುದುಡಿಕೊಂಡೇ ಸಾಗಿತ್ತು. ಆಗ ಇಂಥ ಕೆಲಸಗಳಿಗೆ ಆಸ್ಪದವೇ ಇದ್ದಿಲ್ಲ. ಅಲ್ಲದೆ ಹೊರಗಿನ ಗಾಳಿ-ಬೆಳಕು ಬೀಸಿ ಬೀರದೆ ಬೇರೆ ಕೆಲಸದ ಕಲ್ಪನೆಯಾದರೂ ಹೇಗೆ ಬರಬೇಕು ? ಆಗ ಇವರ ರಸಿಕ ಮನಕ್ಕೆ ಮನೆಯೇ ವಿಶಾಲವಿಶ್ವವಾಗಿತ್ತು; ಉತ್ಸಾಹಪರ ಮನೋ ವೃತ್ತಿಗೆ ಮನೆಯೇ ಪಂಜರವಾಗಿತ್ತು. ಪಂಜರದ ಗಿಳಿ ಹೊರಗೆ ಹಾರಲಾರ ದಾದರೂ ಅದರ ಬಾಯನ್ನು ಯಾರಾದರೂ ಕಸಿದುಕೊಂಡಿರುವದಿಲ್ಲವಷ್ಟೇ. ಹಾಗೇ ಸೌ. ಶ್ಯಾಮಲಾದೇವಿ ಯಾವಾಗಲೂ ತಮ್ಮ ಬಾಯಿಂದಲೇ ಮುಂದಾದವರು.

ಶ್ರೀ ರಾಮಚಂದ್ರರಾಯರು ಸಾಹಿತ್ಯಕಲಾವಿದ; ರಸಿಕ ಚಿತ್ರಕಾರ; ಸುಸಂಸ್ಕೃತ ಭಾವಜೀವಿ. ತಮ್ಮ ಸಹಧರ್ಮಿಣಿಯ ಎಲ್ಲ ಬಯಕೆಗಳನ್ನೂ ತಮ್ಮ ಸಹಜ ಸಾಧುಸ್ವಭಾವದಿಂದ ಈಡೇರಿಸಿಕೊಟ್ಟರು. ಎಂತಲೇ ಸೌ. ಶ್ಯಾಮಲಾದೇವಿಯವರಲ್ಲಿ ಸುಪ್ತವಾಗಿದ್ದ ಕಲಾರಸಿಕತೆ ಹೂವಾಗಿ ಪರಿಮಳಿಸಿತು. ಕಾರ್ಯೋತ್ಸಾಹಕ್ಕೆ ತಕ್ಕ ನಿರ್ದೇಶ ದೊರೆತು ಇವರಿಂದ ಸಾಮಾಜಿಕ ಕೆಲಸಗಳು ತಕ್ಕಮಟ್ಟಿಗೆ ನಡೆದವು.

ಇವರದು ಎಲ್ಲದರಲ್ಲೂ ಸ್ವಚ್ಛಂದ ವೃತ್ತಿ; ಮುಕ್ತಮನಸ್ಸು. ಬಾಯಿ ಹೇಗೋ ಹಾಗೆ ಕೈಯೂ ಸಡಿಲು. ದುಡ್ಡು ಖರ್ಚುಮಾಡುವಾಗ ಇತಿ ಮಿತಿ ಇರುತ್ತಿದ್ದಿಲ್ಲ. ಅತಿಥಿಸತ್ಕಾರದಲ್ಲಂತೂ ಇವರದು ಎತ್ತಿದ ಕೈ. ಖರ್ಚು ಬೇಕಾದಷ್ಟು ಆಗಲಿ, ಸತ್ಕಾರದಲ್ಲಿ ಚ್ಯುತಿ ಬರುವಂತಿಲ್ಲ. ಸ್ವಲ್ಪ ಕಾಲಾವ ಕಾಶದಲ್ಲೇ ಎಲ್ಲಾ ಅಣಿಗೊಳಿಸಿಬಿಡುತ್ತಿದ್ದರು. ಸಮಾಜಸೇವಕಿ ಹೇಗೋ ಅಷ್ಟೇ ಉತ್ತಮ ಗೃಹಿಣಿ. ಮನೆಕೆಲಸದಲ್ಲೂ ಅಷ್ಟೇ ದಕ್ಷತೆ ವಹಿಸುತ್ತಿದ್ದರು. ಇಂಥ ಕೆಲಸ ಬರುತ್ತಿದ್ದಿಲ್ಲ ಎಂದು ಇದ್ದಿಲ್ಲ. ಕಸುರಿನ ಕೆಲಸಕ್ಕಿಂತ ಹೆಚ್ಚಿನ

ಪ್ರಮಾಣದ ಕೆಲಸದಲ್ಲೇ ಇವರಿಗೆ ಶ್ರದ್ಧೆ ಬಹಳ. ಈ ಹೆಚ್ಚಿನ ಖರ್ಚು-ವೆಚ್ಚಗಳೂ ಹೇಗೋ ನಡೆದು ಬಿಡುತ್ತಿದ್ದವು. ಶ್ರೀ ರಾಮಚಂದ್ರರಾಯರಿಗೆ ಖರ್ಚಿನ ಅಂಕಿ ಸಂಖ್ಯೆ ನೋಡಿ ಹೆದರಿಕೆ, ನಡೆಯುತ್ತದಲ್ಲಾ ಎಂದು ಆಶ್ಚರ್ಯ, ತಮ್ಮ ಪತ್ನಿ ನಡಸಿಕೊಂಡು ಬರುತ್ತಾಳಲ್ಲಾ ಎಂಬ ಸಂತೋಷ ಏಕ ಕಾಲಕ್ಕೆ ಆಗುತ್ತಿರಬೇಕು.

ಮದುವೆಯಾದ ಹೊಸದರಲ್ಲಿ ಕೆಲವು ದಿನ ಬೇನೆ-ಬೇಸರದಲ್ಲೇ ಹೋಯಿತು. ಮತ್ತೆ ಆಗ ಕಟ್ಟು-ಕಟ್ಟಳೆಯಲ್ಲಿ ಈ ಜೀವಕ್ಕೆ ಅಷ್ಟು ನೆಮ್ಮದಿಯಿರಲಿಲ್ಲ. ಮುಂದೆ ಪಂಜರ ತೆರೆದಾಗ ಸಾರ್ವಜನಿಕ ಕಾರ್ಯ ಕರೆಯಿತು. ಹತ್ತು ವರ್ಷಕಾಲ ವಿವಿಧ ರಂಗಗಳಲ್ಲಿ ಸೋತೆವೆನ್ನದೆ ದುಡಿದರು. ನಮ್ಮ ನಾಡಿನಲ್ಲಿ ದುಡಿಯುವ ಜನಕ್ಕೆ ಪ್ರೋತ್ಸಾಹದ ಜತೆಗೆ 'ಮಾತೂ' ಬರುವದೂ ರೂಢಿ. ಇವರು ಯಾವ ಮಾತಿಗೂ ಗಮನ ಕೊಡದೆ ಕಾರ್ಯ ಸಾಧಿಸಿದರು.

ಇಷ್ಟುಕಾಲ ಕಹಿ-ಸಿಹಿಯುಂಡ ಜೀವ ಬೇಸತ್ತಿತ್ತು. ಕೆಲಕಾಲ ಹಾಯಾಗಿ ನೆಮ್ಮದಿಯಿಂದ ಇರಬೇಕೆಂದು ಅಪೇಕ್ಷಿಸಿದರು. ಶ್ರೀ ರಾಮಚಂದ್ರ ರಾಯರೂ ಹಾಗೇ ಬಯಸಿದರು. ಧಾರವಾಡದಲ್ಲಿದ್ದು ವಿಶ್ರಾಂತಿ ಪಡೆಯುವುದು ಸಾಧ್ಯವಾಗಿ ಕಾಣಲಿಲ್ಲ. ಧಾರವಾಡದಲ್ಲಿನ ಎಲ್ಲ ಸಾರ್ವಜನಿಕ ಕಾರ್ಯಗಳಿಂದಲೂ ನಿವೃತ್ತಿಪಡೆದು 'ಜಯಕರ್ನಾಟಕ'ದ ಸಕಲ ಕಾರ್ಯಭಾರವನ್ನೂ ಮಾನ್ಯರೊಬ್ಬರಿಗೆ ಒಪ್ಪಿಸಿದರು. ಇಂದೂರ ಸಂಸ್ಥಾನದ ವಾರ್ತಾಧಿಕಾರಿಗಳಾಗಿ ಅಲ್ಲಿ ಕುಟುಂಬ ಸಮೇತರಾಗಿ ತೆರಳಿದರು.

ಸೌ. ಶ್ಯಾಮಲಾದೇವಿ ಈಚಿನ ಹೆರಿಗೆಯ ಆಲಸ್ಯದಿಂದ ಬಹಳ ಬಳಲಿದ್ದರು. ಚಿಕಿತ್ಸೆ ನಡೆದೇ ಇತ್ತು. ಇಂದೂರಿನಲ್ಲಿ ಪತಿಸಾನ್ನಿಧ್ಯದಲ್ಲಿ ಅನೇಕ ಬಗೆಯ ಆರೈಕೆ ನಡೆಯಿತು. ಆದರೂ ಬೇನೆ ಜಗ್ಗಲಿಲ್ಲ. ಹುಟ್ಟಿದೂರಲ್ಲೇ ಚಿಕಿತ್ಸೆ ಹೊಂದಬೇಕೆಂದು ತಾಯಿ-ತಂಗಿ ಇದ್ದಲ್ಲಿ ಬಂದು ಇಳಿದರು. ಇಷ್ಟರಲ್ಲೇ ಬೇನೆ ಬಲಿತಿತ್ತು. ಉಬ್ಬಸದ ಬಳಲಿಕೆಯಲ್ಲೇ ಹೃದಯದ ವಿಕಾರದಿಂದ ಮೊನ್ನೆ ತಾ. ೧-೧೧-೪೩ ನೆಯ ದಿನ ಇಹಯಾತ್ರೆ ಮುಗಿಸಿದರು.

ಸೌ. ಶ್ಯಾಮಲಾದೇವಿ ಕುಟುಂಬ ವತ್ಸಲರು. ಎರಡು ಹೆಣ್ಣು, ಎರಡು ಗಂಡು ಮಕ್ಕಳಿವರಿಗೆ. ಕಡೆಯ ಮಗು ಏಳು ತಿಂಗಳಿನ ಹಸುಗೂಸು.

ಹಿರಿಯ ಹುಡುಗಿಗೆ ತಿಳುವಳಿಕೆ ಬಂದಿದೆ. ತಾಯಿಯ ಅಗಲುವಿಕೆ ಅವಳಿಂ ಸಹಿಸಲಾರಳು. ಆದರೆ ಪಾಪ! ಅವಳು ಸಹಿಸಬೇಕಷ್ಟೆ. ನಡುವೆ ಇರುವ ಎರಡು ಗಂಡುಮಕ್ಕಳು ಏನೂ ತಿಳಿಯದ ಹಸುಳೆಗಳು.... ಪತಿ ಎಲ್ಲಾ ಸಹಧರ್ಮಿಣಿಗೇ ಒಪ್ಪಿಸಿ ತನ್ನ ಕೆಲಸ ಮಾತ್ರ ಮಾಡುತ್ತ ಬಂದ, ತಿಳಿದೂ ತಿಳಿಯದ ಭಾವಜೀವಿ. ಅವರನ್ನೆಲ್ಲ ತನ್ನ ದೋಣಿಯಲ್ಲಿಟ್ಟುಕೊಂಡು ತನ್ನ ಭುಜಬಲದಿಂದ ಹುಟ್ಟುಹಾಕಿ ದೋಣಿ ಸಾಗಿಸಿದ ಧೀರ ನಾವಿಕಳಾದ ಸೌ. ಶ್ಯಾಮಲಾದೇವಿ ಕೈ ಸೋತು ಮುಳುಗಿದರೆ ನಡುನೀರಿನಲ್ಲಿರುವ ಈ ಜೀವಗಳ ಗತಿ ಏನಾಗಿರಬೇಡ!

ಪರಮಾತ್ಮನ ಲೀಲೆಗೆ ಎದುರಿಲ್ಲ. ಮೃತರಿಗೆ ಶಾಂತಿಕೋರುವುದು, ಆ ಮೂಲಕವಾಗಿಯೇ ಕುಟುಂಬದವರಿಗೆ ಸಮಾಧಾನ ಹೇಳುವುದು ನಮ್ಮ ಕರ್ತವ್ಯವಷ್ಟೆ!

(೧೯೪೩)

೧೦. ನಾನು ಕಂಡ ಗೌರಮ್ಮ

ಜಮಖಂಡಿಯಲ್ಲಿ ಸೇರಿದ ಕ. ಸಾ. ಸಮ್ಮೇಲನದ ಮಂಟಪದಲ್ಲಿ ಗೌರವರ್ಣದ, ಅಷ್ಟು ಎತ್ತರವಲ್ಲದ, ತೆಳ್ಳಗಿದ್ದರೂ ಹಾಗೆ ಕಾಣದ, ಒಬ್ಬ ಮಹಿಳೆ ಕುಳಿತಿದ್ದನ್ನು ನೋಡಿದೆ. ಉಟ್ಟದ್ದೊಂದು ಖಾದಿಯ ಬಟ್ಟೆ, ತೊಟ್ಟದ್ದೂ ಖಾದಿಯೇ, ಮೂಗಿಗೊಂದು ಹರಳಿನ ಮೂಗುಬಟ್ಟು. ಉಳಿದ ಯಾವ ಆಭರಣವೂ ಇಲ್ಲ. ಕಣ್ಣುಗಳಲ್ಲಿ ಅದೊಂದು ಬಗೆಯ ಒಳನೋಟ, ಮುಖದಲ್ಲಿ ಅದೇನೋ ಒಂದು ಗಂಭೀರ ಭಾವ. ಆದರೂ ಯಾರಾದರೂ ಮಾತನಾಡಿಸಿದರೆ ಮೊದಲು ನಗೆ, ಆ ಮೇಲೆ ಮಾತು. ಒಮ್ಮೊಮ್ಮೆ ನಗು ಅಷ್ಟೇ ನುಸುಳಿ ಮಾತುಬಾರದೆ ಉಳಿಯುತ್ತಿತ್ತು. ಒಮ್ಮೆ ನೋಡಿದರೆ ಸಾಕು; ಇವರ ಪರಿಚಯವಾಗಬೇಕು ಎನಿಸುವಂತಹ ವ್ಯಕ್ತಿತ್ವ.

ಅವರು ಕೊಡಗಿನವರೆಂದು ತಿಳಿದಾಗ ನನಗೆ ತುಂಬ ಕುತೂಹಲವಾಯಿತು. ಮತ್ತೆ ವಿಚಾರಿಸುವಾಗ ಅವರೇ ಶ್ರೀಮತಿ ಗೌರಮ್ಮ—ಮಿಸೆಸ್ ಬಿ. ಟಿ. ಜಿ. ಕೃಷ್ಣ— ಎಂದು ತಿಳಿದು ಬಹಳ ಸಂತೋಷವಾಯಿತು.

ಅದಕ್ಕೂ ಮೊದಲು "ರಂಗವಲ್ಲಿ" ಕಥಾ ಸಂಗ್ರಹದ ಕಾರ್ಯದಲ್ಲಿ, ಪತ್ರವ್ಯವಹಾರದಿಂದ ಅವರ ಪರಿಚಯವಾಗಿತ್ತು. ಹಿಂದೆ "ಜಯಕರ್ನಾಟಕ"ದ ಸಣ್ಣಕತೆಗಳ ಸ್ಪರ್ಧೆಯಲ್ಲಿ ಮೆಚ್ಚುಗೆಯನ್ನು ಪಡೆದ "ಒಂದು ಪುಟ್ಟ ಚಿತ್ರ" ಓದಿದಾಗ, ಅದನ್ನು ಬರೆದವರ ಬಗ್ಗೆ ಏನೋ ಒಂದು ಬಗೆಯ ಆದರ ಹುಟ್ಟಿತ್ತು. ಮುಂದೆ ಒಂದೆರಡು ಕತೆಗಳು "ಜ. ಕ."ದಲ್ಲಿ ಬಂದವು. "ಕೆಲವು ನೀಳ್ಗತೆಗಳು" ಎಂಬ ಸಂಗ್ರಹದಲ್ಲಿಯ "ಕೌಸಲ್ಯಾನಂದನ" ಎಂಬ ಕತೆ ನನಗೆ ಬಹಳ ಮೆಚ್ಚುಗೆಯಾಯಿತು. ಅದರಲ್ಲಿಯ ವಸ್ತು—-ವಿವರಣೆ, ಆ ಕಲಾಪೂರ್ಣ ಮುಕ್ತಾಯ ನನಗೆ ತುಂಬ ಆನಂದಕೊಟ್ಟವು. 'ಅಂತೂ ಕನ್ನಡ ಮಹಿಳೆಯರೂ ಇಂತಹ ಉತ್ತಮ ಕತೆ ಬರೆಯುತ್ತಾರಲ್ಲ !' ಎಂದು ಹೆಮ್ಮೆ ತಾಳಿದೆ. ಅಂದು ಪಟ್ಟ ಆ ಆನಂದ, ತಳೆದ ಆ ಹೆಮ್ಮೆ ನನ್ನನ್ನು ಹೆಣ್ಣು ಮಕ್ಕಳದೇ ಆದ ಒಂದು ಕಥಾಸಂಗ್ರಹ ಪ್ರಕಟಿಸುವ ಸಾಹಸಕ್ಕೆಳಸಿತು. ಆ ಕೆಲಸ 'ರಂಗವಲ್ಲಿ' ಎಂಬ ಹೆಸರಿನಿಂದಾಯಿತು.

'ರಂಗವಲ್ಲಿ'ಯಲ್ಲಿಯ ಗೌರಮ್ಮನವರ 'ಮನುವಿನ ರಾಣಿ' ಎಂಬ ಕತೆಯ ಬಗ್ಗೆ ಬಂದ ಕೆಲವು 'ಪ್ರಶಂಸೆ'ಗಳನ್ನು ಅವರಿಗೆ ತಿಳಿಸಿದಾಗ, ಅವರು ತಮ್ಮ ಆ ಕತೆಯ ವಿಷಯಕ್ಕಿದ್ದ ಅತೃಪ್ತಿಯನ್ನು ತಾವೆ ಸೂಚಿಸಿದರು. ಆಗಲೇ ಅವರು ಹೊಗಳಿಕೆಗೆ ಹಿಗ್ಗುವವರಲ್ಲ ಎನಿಸಿತು.

ಅದುವರೆಗೆ ಪ್ರಕಟವಾದ ಅವರ ಕತೆಗಳನ್ನೋದಿದ ನನಗೆ ಒಂದೇನೊ ಆಶೆ; ಇವರದೊಂದು ಕಥಾಸಂಗ್ರಹ ಪ್ರಕಟಿಸಬೇಕೆಂದು. ಆ ಮೊದಲು ನನಗೆ ಬರೆದ ಒಂದೆರಡು ಕಾಗದಗಳಲ್ಲಿಯೆ ಮೈವೆತ್ತುನಿಂತ ಅವರ ಸುಸಂಸ್ಕೃತತೆ, ಹಿರಿಯಾಸೆ ನನ್ನನ್ನು ಮತ್ತಿಷ್ಟು ಆ ಕೆಲಸಕ್ಕೆ ಒತ್ತಾಯ ಪಡಿಸಿದವು.

ಜಮಖಂಡಿಯಲ್ಲಿ ಅವರು ಗೌರಮ್ಮನವರೆಂದು ತಿಳಿದ ಮೇಲೆ ಅವರೊಡನೆ ಮಾತನಾಡಬೇಕೆಂಬ ಆಶೆಯಿಂದ ಅವರಿಳಿದ ಸ್ಥಳಕ್ಕೆ ಹೋದೆ. ಅಲ್ಲಿದ್ದ ನನ್ನ ಸ್ನೇಹಿತರೊಬ್ಬರು ಅವರ ಪರಿಚಯ ಮಾಡಿಸಿದರು. ಆಗ ಅವರು ಊಟಕ್ಕೆ ಕುಳಿತವರು ಎದ್ದು 'ನಮಸ್ಕಾರ' ಎಂದರು. ಅಂದಿನ ಆ ಮೊದಲ ಸಲದ ಅವರ ನಿಂತ ನಿಲುವು, ಆ ವಿನಯ, ಆ ಸಹಜವಾದ ನಗೆ ಇನ್ನೂ ನನ್ನ ಕಣ್ಣ ಮುಂದಿವೆ. ಊಟವಾದೊಡನೆ ನಾವಿಬ್ಬರೂ ಒಂದೆಡೆ ಕುಳಿತೆವು. ಆಗ ನಮ್ಮ ಮಾತಿಗೆ 'ರಂಗವಲ್ಲಿ'ಯೊಂದೇ ಆಹಾರವಾಗಿತ್ತು. ಭಿನ್ನಾಭಿಪ್ರಾಯಗಳೆ ವಾಗ್ಯುದ್ಧದಿಂದ ನಮ್ಮ ಪರಿಚಯ ಬೆಳೆಯಹತ್ತಿತು. ಅವರು ಆಗಾಗ ವಿನಯಪೂರ್ವಕವಾಗಿ 'ಬೆಸರವಾಯಿತೇ ?' ಎಂದು ಕೇಳುತ್ತ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಿದ್ದರು. ಅವರ ಆ ಸವಿನಯದ ಮಾತುಗಳೆ ಅವರ ಸರಳಜೀವನದ ಕುರುಹು. ಅವರು ಸಭೆಯಲ್ಲಿ ಎಂದೂ ಮಾತಾಡಿದವರಲ್ಲ. ಅಂದು ಕವಿಸಮ್ಮೇಲನದಲ್ಲಿ 'ಏನಾದರೂ ಓದಿ' ಎಂದು ನಾವು ಕೇಳಿದ್ದಕ್ಕೆ ಅವರು 'ದಮ್ಮಯ್ಯ ಬೇಡಿ' ಎಂದು ಕೇಳಿಕೊಂಡರು; ಕೊಡಗಿನ ಪರವಾಗಿ ಅಧ್ಯಕ್ಷರ ಆಯ್ಕೆಯನ್ನು ಸಮರ್ಥಿಸುವುದಕ್ಕಾಗಿ ಎದ್ದುನಿಂತು ಹೇಳಿದ ಒಂದೇ ಮಾತಿಗೆ ಮೈಯೆಲ್ಲ ಬೆವೆತು ಕಾಲು ನಡುಗಿದವೆಂದು ಹೇಳಿದರು.

'ನೀವು ಹೊರಡುವಾಗ ನಮಗೇಕೆ ತಿಳಿಸಲಿಲ್ಲ ?' ಎಂದು ಕೇಳಿದ್ದಕ್ಕೆ 'ಏನೆಂದು ತಿಳಿಸುವುದು ? ಕೊಡಗಿನ ಚಕ್ರವರ್ತಿನಿ—ನಾನು ಬರುತ್ತೇನೆಂದೇ ? ಅಲ್ಲದೆ ಮೊದಲು ನಿಮ್ಮನ್ನು ನೋಡಿ ನನಗೆ ಗೊತ್ತಿತ್ತೇ ?' ಎಂದು ನಕ್ಕು

ನುಡಿದರು. ಅವರು ಯಾರೊಡನೆಯೂ ದುಡುಕಿ ಪರಿಚಯ ಮಾಡಿಕೊಳ್ಳು ತ್ತಿದ್ದಿಲ್ಲ. 'ನೀವಾರು ? — ಎಂದು ಅವರು ಕೇಳಿದರೆ ನಾನೇನೆಂದು ಹೇಳುವುದು ?' ಎನ್ನುತ್ತಿದ್ದರು.

ಜಮಖಂಡಿಯಿಂದ ತಿರುಗಿ ಬರುವಾಗ ಧಾರವಾಡದಲ್ಲಿ ನಮ್ಮಲ್ಲಿ ಒಂದು ದಿನ ಇಳಿಯಬೇಕೆಂದು ಕೇಳಿಕೊಂಡೆ. ಅವರು ಸಂತೋಷದಿಂದ ಒಪ್ಪಿಕೊಂಡರು. ಅಂದು ಧಾರವಾಡದ ನಿಲ್ದಾಣದಲ್ಲಿ ನಾವಿಳಿದಾಗ 'ಇಂದು ಎಂತಹ ಸಂತೋಷದ ದಿನ' ಎಂದು ನಾನೆಂದುದಕ್ಕೆ 'ಹೌದೋ ?' ಎಂದು ಅವರು ನಗುತ್ತ ನುಡಿದರು.

ಗೌರಮ್ಮನವರು ಬಹಳ ವಿನೋದಿಗಳಾಗಿದ್ದರು. ಅವರ ಹೂವಿ ನಂತಹ ಮಾತುಗಳು ಯಾರ ಮನಸ್ಸನ್ನೂ ನೋಯಿಸದೆ ಅರಳಿಸುತ್ತಿದ್ದವು. ಅವರನ್ನು ಕಳಿಸಲು ಹುಬ್ಬಳ್ಳಿಯವರೆಗೆ ಹೋಗಿದ್ದೆ. ಹುಬ್ಬಳ್ಳಿ ಸ್ಟೇಶನ್ನಿನಲ್ಲಿ 'ನೀವು ಈಗ ನನ್ನ ಅತಿಥಿಗಳು; ಧಾರವಾಡದಿಂದ ಹುಬ್ಬಳ್ಳಿ ನಮ್ಮೂರ ಕಡೆಗೆ' ಎಂದು ಕಾಫಿ ಕೊಡಿಸಿದರು; ಕೂಡಿ ನಗುತ್ತ ಕುಡಿದೆವು. ಗಾಡಿ ಹೊರಡುವ ಸಮಯವಾಗಿತ್ತು. 'ಅಲ್ಲಿ ನೋಡಿ, ನಿಮ್ಮ ಮಾವ ಬರುತ್ತಿದ್ದಾರೆ' ಎಂದರ ವರು. ನಾನು ತಿರುಗಿ ನೋಡಿ, ನನ್ನ ಪರಿಚಿತರಾರನ್ನೂ ಕಾಣದೆ 'ಯಾರು?' ಎಂದೆ. 'ನೋಡಿ, ನಿಮ್ಮ ಮಾವ—ಜರದ ರುಮಾಲಿನ ಯಜಮಾನ'* ಎಂದರು. ನಾವೆಲ್ಲ ಗೊಳ್ಳೆಂದು ನಕ್ಕೆವು. ಸಿಳ್ಳು ಹಾಕಿ ಗಾಡಿ ಹೊರಟಿತು. ಕಿಡಕಿಯಲ್ಲಿ ಮುಖ ಹಾಕಿ ಅವರು ನೋಡುತ್ತಿದ್ದರು. ನಾನು ಹಾಗೆಯೆ ಕಲ್ಗೊಂಬೆಯಂತೆ ನಿಂತಿದ್ದೆ. ಗಾಡಿ ಹೊರಟು ಹೋಗಿದೆ; ಆದರೆ ಕಿಡಕಿಯಲ್ಲಿ ನಗುತ್ತ ಕುಳಿತ ಗೌರಮ್ಮ ಇನ್ನೂ ಕಾಣುತ್ತಿದ್ದಾರೆ.

ಅವರ 'ಪತ್ರ ಕತೆ'ಗಳನ್ನೋದಿ ಸಂತೋಷಪಟ್ಟ ನನಗೆ ಅವರಿಂದ ಬರುತ್ತಿದ್ದ ಕಾಗದಗಳು ಮತ್ತಿಷ್ಟು ಸಂತೋಷ ಕೊಟ್ಟಿವೆ. ಅವರ ಸುಂದರ ವಾದ—ಹಗುರಾದ ಮಾತುಗಳು, ಮಿತವರಿತ ವಿನೋದ, ಮೋಹಕವಾದ ಶೈಲಿ—ಹೃದಯವನ್ನರಳಿಸುವಂತಹವು. ಅವರೊಡನೆ ಪರಿಚಯವಾದಂದಿ ನಿಂದ—ಕಳೆದ ಒಂದು ವರ್ಷದಲ್ಲಿ—ನನಗೆ ಅವರ ಪತ್ರಲಾಭ ಅನಂತವಾಗಿ ದೊರೆತಿದೆ.

---

* ನನ್ನ ಕತೆಯಲ್ಲಿಯ ಒಂದು ಪಾತ್ರ. ಧಾರವಾಡದಲ್ಲಿ ಆ ಕತೆಯಿನ್ನಿ ಓದಿ ತೋರಿಸಿದ್ದೆ.

ಒಂದು ಕತೆಯನ್ನು ಅವರ ಅವಲೋಕನೆಗೆಂದು ಕಳಿಸಿದಾಗ ಕೂಡಲೆ ಅವರ ಕಾಗದ ಬಂತು. ಹೀಗೆ ಬರೆದಿದ್ದರು :*

"ನಿಮ್ಮ ಕಾಗದ ಬಂದಾಗ ನಾನು ಟೆನ್ನೀಸು ಆಡುತ್ತಿದ್ದೆ. ಟಪಾಲಿನವನು ಕಾಗದ ಕೊಟ್ಟೊಡನೆಯೆ ನೋಡಿದೆ— ಯಾರದೆಂದು; ನಿಮ್ಮದು! ಇಷ್ಟರ ವರೆಗೆ ಗೆಲ್ಲುತ್ತ ಬಂದವಳು ನಿಮ್ಮ ಕಾಗದ ಓದುವ ಆತುರತೆಯಲ್ಲಿ ಸೋತೇ ಹೋದೆ. ನನಗೆ ಇದಿರಾಗಿ ಆಡುತ್ತಿದ್ದವರು ನಿಮ್ಮನ್ನು ಬಹಳ ಬಹಳ ಹೊಗಳಿದರು; ನಿಮ್ಮ ಕಾಗದದಿಂದಾಗಿ ಗೆಲವು ತನಗಾಯಿತಲ್ಲಾ— ಎಂದು. ನಾನು ನಿಮ್ಮ ಕಾಗದ ಸ್ವಲ್ಪ ದೂರಿದೆನೆಂದರೆ ನಿಮಗೆ ಕೋಪ ಬರುವುದೇನೋ. ಅಂತೂ ನಾವಿಬ್ಬರೂ ಜೊತೆಯಾಗಿಯೋ ಓದಿದೆವು. ಓದಿ ಸೋತ ಬೇಸರ ಮರೆಯಿತು; ಅಷ್ಟೊಂದು ಚೆನ್ನಾಗಿದೆ ನಿಮ್ಮ 'ಕುಳಿತ ಕನ್ನೆ'.†

'ನನಗೆ ಎಲ್ಲ ಕಡೆಯಿಂದಲೂ ಪತ್ರ ಬರುತ್ತಿರಬೇಕು—ಎಂದರೆ ಬಹಳ ಇಷ್ಟ. ಆದರೆ ನಾನು ಸೋಮಾರಿ. ಸಮಯಕ್ಕೆ ಉತ್ತರ ಬರೆಯದೆ ಎಷ್ಟೋ ಜನರನ್ನು ಬೇಸರು ಪಡಿಸಿದ್ದೇನೆ' ಎಂದು ಹೇಳುತ್ತಿದ್ದರು.

ಗೌರಮ್ಮನವರು ಕತೆ ಬರೆದ ಮೇಲೆ ಅದಕ್ಕೊಂದು ಹೆಸರಿಡುವುದಕ್ಕೆ ತುಂಬ ಪೇಚಾಡುತ್ತಿದ್ದರು; ಎಲ್ಲರನ್ನೂ ಕೇಳುತ್ತಿದ್ದರು. 'ನಾನು ಶೇಕ್ಸ್‌ಪಿಯರ್ ಆಗಿದ್ದರೆ "As you like it" ಎಂದುಬಿಡುತ್ತಿದ್ದೆ' ಎನ್ನುತ್ತಿದ್ದರು. ಯಾರಾದರೂ ತಮಗೆ ಒಪ್ಪಿಗೆಯಾಗಬಹುದಾದ ಹೆಸರನ್ನು ಸೂಚಿಸಿದರೆ ಅವರಿಗೆ ಬಹಳ ಆನಂದವಾಗುತ್ತಿತ್ತು. ನಾನೊಮ್ಮೆ ಅವರಿಗೆ ತಡಮಾಡಿ ಬರೆದೆ; ಅವರದೊಂದು ಕತೆ ಬಂದಿತ್ತು. 'ಅದಕ್ಕೊಂದು ಚೆಂದವಾದ ಹೆಸರಿಟ್ಟು ನಿಮ್ಮ ನಿಜವಾದ ಅಭಿಪ್ರಾಯ ತಿಳಿಸಿರಿ' ಎಂದು ಬರೆದಿದ್ದರು. ಕತೆಗೆ ಹೆಸರಿಡುವ ವಿಚಾರದಲ್ಲಿ ನನಗೆ ಬೇಗನೆ ಬರೆಯುವುದಾಗಲಿಲ್ಲ. ಅವರು ಬೇಸತ್ತು ಬರೆದರು : 'ಏನು, ನೀವೆಲ್ಲಾ ನನ್ನ ಉದಾಸೀನಕ್ಕೆ ಪ್ರತಿ

---

* ಇಲ್ಲಿ ಬರದ ಪತ್ರದ ಮಾತುಗಳನ್ನು ನನಗೆ ಅವರು ಬರೆದ ಕಾಗದಗಳಿಂದಲೇ ಎತ್ತಿಕೊಂಡಿದ್ದೇನೆ.

† "ಕುಳಿತ ಕನ್ನೆ" ನನ್ನದೊಂದು ಕತೆ.

ಉದಾಸೀನ ಮಾಡಿ ಸತ್ಯಾಗ್ರಹ ಮಾಡುವಂತೆ ತೋರುತ್ತೆ ! ನೀವು ರಾಮದುರ್ಗ*ದವರು ತಾನೆ ! ಮಾಡಿ ಸತ್ಯಾಗ್ರಹ !' ಎಂದು.

ಗೌರಮ್ಮನವರಲ್ಲಿ ಇದ್ದ ಮಾತನ್ನು ಎತ್ತಿ ಹಿಡಿಯುವ ದಿಟ್ಟತನವಿತ್ತು. ಅವರ ದೃಷ್ಟಿಯಲ್ಲಿ ಒಂದು ವಿಮರ್ಶಕ ಶಕ್ತಿಯಿತ್ತು. ಯಾರಿಗೂ ಸೊಪ್ಪು ಹಾಕದೆ ತಮಗೆ ತೋರಿದ ಮಾತುಗಳನ್ನು ಗಂಭೀರವಾಗಿ ಹೇಳುತ್ತಿದ್ದರು. ತಮಗೆ ಸೇರದ ಮಾತನ್ನು ಅಷ್ಟೇ ಸ್ಪಷ್ಟವಾಗಿ ಖಂಡಿಸುತ್ತಿದ್ದರು. ಹೆಣ್ಣು ಮಕ್ಕಳು ಬರೆಯುವ ಸಾಹಿತ್ಯ ಒಳ್ಳೆಯದಾಗಬೇಕು.... ಅದೊಂದು ಮಟ್ಟಕ್ಕೆ ಬರಬೇಕು.... ಎಂಬ ಆಶೆ ಬಹಳವಾಗಿತ್ತವರಿಗೆ. 'ಇದು ಹೆಣ್ಣುಮಕ್ಕಳ ಕೃತಿ—ಎಂಬ ಪೊಳ್ಳು ಸಹಾನುಭೂತಿಯ ಹೊರೆಯನ್ನು ನಾವೆಷ್ಟು ದಿನ ಹೊತ್ತಿರಬೇಕು ? ಇದರಿಂದ ಗಂಡಸರು ನಮ್ಮ ಸಾಹಿತ್ಯವನ್ನು ತೃಪ್ತಿದಾಯಕವಾಗಿ ಒಪ್ಪಿದಂತಾಯಿತೇ ? ಅವರು ನಮ್ಮ ಸಾಹಿತ್ಯವನ್ನು ಗಂಡಸರು ಬರೆಯುವ ಸಾಹಿತ್ಯವನ್ನು ನೋಡುವ ದೃಷ್ಟಿಯಲ್ಲೊಮ್ಮೆ ನೋಡಲಿಲ್ಲ; ನೋಡಲಾರರವರು. ಎಂತಲೆ ನಿರ್ಭಾಗ್ಯ 'ರಂಗವಲ್ಲಿ'ಯ ಅದೃಷ್ಟಕ್ಕೆ ಒಂದು ಸರಿಯಾದ ವಿಮರ್ಶೆ ಬರೆಯುವ ಪುಣ್ಯಾತ್ಮರೂ ಇಲ್ಲ !' ಎನ್ನುತ್ತಿದ್ದರು.

ಗೌರಮ್ಮನವರ ಎಳೆತನದಲ್ಲಿಯೇ ಅವರ ತಾಯಿ ತೀರಿದ್ದರು. ಒಮ್ಮೊಮ್ಮೆ ಅವರಿಗೆ ಉಂಟಾಗುವ ತಾಯಿಯ ನೆನಪು ಅವರನ್ನು ಬಹಳ ಶೋಕಕ್ಕೀಡು ಮಾಡುತ್ತಿತ್ತು. ನಮ್ಮ ತಾಯಿಯನ್ನು ಕಂಡರೆ ಗೌರಮ್ಮನವರಿಗೆ ಬಹಳ ಇಷ್ಟ. ನಮ್ಮ ತಾಯಿಗೂ ಗೌರಮ್ಮನವರೆಂದರೆ ಅಷ್ಟು ಪ್ರೀತಿ. 'ನಮ್ಮ ಮನೆಗೆ ಅವ್ವನನ್ನು ಕಳಿಸಿಕೊಡಿ, ಈಗ ಇಲ್ಲಿ ಕಾವೇರಿ ಜಾತ್ರೆ. ಅವರಿಗೆ ಕಾವೇರಿ ಸ್ನಾನ ಮಾಡಿಸಿ ಕೂಡಲೆ ಕಳಿಸುವ ಭಾರ ಹೊತ್ತುಕೊಳ್ಳುತ್ತೇನೆ !' ಎಂದು ಬರೆದರು. ನಮ್ಮ ತಾಯಿ ಹೋಗಲು ಆತುರಪಟ್ಟರೂ ಬಹಳ ದೂರ ಎಂದು ನಾವು ಕಳಿಸಲಿಲ್ಲ. 'ಅವ್ವ ಮಗಳ ಮನೆಗೆ ಹೋಗಲು ಹಟ ಹಿಡಿದಿದ್ದಳು' ಎಂದು ಬರೆದು ಕಳಿಸದಿದ್ದುದಕ್ಕೆ ಏನೇನೋ ಕಾರಣ ಒಡ್ಡಿ ಕ್ಷಮೆ ಬೇಡಿಕೊಂಡಿದ್ದೆ. ಕೂಡಲೆ ಉತ್ತರ ಬಂತು:

---

* ರಾಮದುರ್ಗ ಸಂಸ್ಥಾನದಲ್ಲಿ ಆಗ 'ದುರಂತ' ಸತ್ಯಾಗ್ರಹ ನಡೆದಿತ್ತು.

'ಅವ್ವ ಮಗಳ ಮನೆಗೆ ಹೋಗಲು ಹಟ ಹಿಡಿದಳು—ಎಂದು ಬರೆದಿದ್ದೀರಿ. ನಿಮಗೆ ನಿಜವನ್ನು ಹೇಳುವುದಾದರೆ ನಾನು ಇಷ್ಟೊಂದು ಬೇಗ ಪ್ರತ್ಯುತ್ತರ ಬರೆಯಲು ಅದೊಂದು ವಾಕ್ಯ ಮುಖ್ಯಕಾರಣವೆಂದು ಹೇಳಬೇಕು. 'ಅವ್ವ ಮಗಳ ಮನೆಗೆ ಹೋಗಲು ಹಟ ಹಿಡಿದಳು' ಎಂಬುದನ್ನು ಓದಿ ನನಗೆ ಎಷ್ಟೊಂದು ಸಂತೋಷವಾಯಿತೆಂಬುದು ನಿಮಗೆ ಹೇಗೆ ತಿಳಿಯಬೇಕು ? ನೀವು ಹುಡುಗಿಯಲ್ಲ—ಸಾಲದುದಕ್ಕೆ ನಿಮ್ಮ ಅವ್ವ ಯಾವಾಗಲೂ ನಿಮ್ಮ ಹತ್ತಿರದಲ್ಲೇ ಇರುತ್ತಾರೆ. ಆದುದರಿಂದಲೇ ಅದರ ಬೆಲೆ ನಿಮಗೆ ತಿಳಿಯಲಾರದು. ನನಗೆ,—ನನಗೆ ಅವ್ವ, ನಾನು ಬೇಬಿ (ಗೌರಮ್ಮನವರ ಆರು ವರ್ಷದ ಮಗು ವಸಂತ) ಗಿಂತಲೂ ಚಿಕ್ಕವಳಾಗಿರುವಾಗಿನಿಂದಲೂ ಇಲ್ಲ. ಹಾಗವಳು ಇಲ್ಲವೆಂದು ತಿಳಿದುಕೊಳ್ಳುವ ಶಕ್ತಿ ನನಗೆ ಬರುವ ಮೊದಲೇ ನನಗವಳು ಇಲ್ಲವಾಗಿ ಬಿಟ್ಟಿದ್ದಳು. ಮತ್ತೆ 'ನನಗೂ ಎಲ್ಲರಂತೆ ಅವ್ವನಿಲ್ಲ' ಎಂದು ತಿಳಿದುಕೊಳ್ಳುವಂತಾಗುವಾಗ 'ಇಲ್ಲದಿದ್ದರೂ ತೊಂದರೆ ಇಲ್ಲ' ಎನ್ನುವಂತೆ ಅಭ್ಯಾಸವಾಗಿಹೋಗಿತ್ತು. ಆದರೂ—ಆದರೂ ನೋಡಿ, ಎಲ್ಲ ಹುಡುಗಿಯರು 'ನಮ್ಮವ್ವ—ನಮ್ಮವ್ವ ಹಾಗಿದ್ದಾರೆ—ಹೀಗಿದ್ದಾರೆ' ಎಂದೆಂದುಕೊಳ್ಳುವಾಗ 'ನನಗೂ ಅವ್ವ ಏಕಿರಬಾರದಿತ್ತು !' ಎನಿಸದಿರುವದಿಲ್ಲ. ಈಗೆರಡು ಮೂರು ತಿಂಗಳಾಯಿತು; ನಾನು ಮಡಿಕೇರಿಗೆ ಹೋಗಿದ್ದಾಗ ನನ್ನಣ್ಣ—ನನಗಿಂತಲೂ ಏಳೆಂಟು ವರ್ಷಗಳಿಗೆ ಹಿರಿಯವ—ಅವನಿಗೆ ನಮ್ಮ ಅಪ್ಪನ ನೆನಪು ಚೆನ್ನಾಗಿದೆ—ಆಗ ಏಕೋ ಮಾತಿಗೆ ನೋಡಿ, ಬೇಬಿ ತಂಟೆ ಮಾಡುತ್ತಿದ್ದ. ನಾನು ಅವನನ್ನು ಗದರಿಸಿದೆ. ಅದಕ್ಕೆ ಅಣ್ಣ 'ನೀನು ನೋಡು ಗೌರಿ, ನೀನು ಚಿಕ್ಕವಳಿರುವಾಗ ಇವನಿಗಿಂತಲೂ ಹೆಚ್ಚು ತಂಟೆ ಮಾಡಿ ಅಮ್ಮನನ್ನು ಗೋಳಾಡಿಸುತ್ತಿದ್ದೆ. ಈಗ ಮಾತ್ರ ಅವನನ್ನು ಗದರಿಸುತ್ತೀ. ನಿನ್ನಷ್ಟೇ ತುಂಟತನ ಇವನಿಗಿದ್ದಿದ್ದರೆ ನೀನೇನು ಮಾಡುತ್ತಿದ್ದೆಯೋ; ಅಮ್ಮ ಇರಬೇಕಿತ್ತು ಈಗ' ಎಂದ. ಅಣ್ಣ ನನ್ನನ್ನು ತಮಾಷೆ ಮಾಡುವ ಸಲುವಾಗಿ ಆಡಿದ ಮಾತುಗಳಿವು; ಆದರೂ 'ಅಮ್ಮ ಇರಬೇಕಿತ್ತು ಈಗ' ಎಂದು ಅವನೆನ್ನುವಾಗ 'ಅಮ್ಮನಿಲ್ಲವಲ್ಲಾ' ಎಂದೂ— 'ಅಮ್ಮ ಇದ್ದಿದ್ದರೆ ನಾನು ಈಗ ಬೇಬಿಯನ್ನು ಪ್ರೀತಿಸುವಷ್ಟೇ ಅವಳೂ ನನ್ನನ್ನು ಪ್ರೀತಿಸುತ್ತಿದ್ದಳಲ್ಲಾ' ಎಂದೂ—ನೋಡಿ, ಏನೇನೋ ಹುಚ್ಚು ಯೋಚನೆ

ಗಳು ತಲೆತುಂಬ ತುಂಬಿದವು. ನಿಮಗಿದನ್ನೆಲ್ಲಾ ನಾನೇಕೆ ಬರೆಯುತ್ತೇನೆಂಬುದು ನನಗೇ ತಿಳಿಯದು. 'ಅವ್ವ ಮಗಳ ಮನೆಗೆ ಹೋಗಲು ಹಟ ಹಿಡಿದಳು' ಎಂದು ಬರೆದಿದ್ದೀರಿ. ಅದನ್ನೋದುವಾಗ ಏಕೋ ಇದೆಲ್ಲಾ ಬಂದು ಹೋಯಿತು. ಅಂತೂ ಅವರು ನನ್ನನ್ನು ಮಗಳೆಂದು ತಿಳಿದು ನಮ್ಮ ಮನೆಗೆ ಬರಲು ಹಟಹಿಡಿದರಲ್ಲ ಎಂಬ ಆನಂದದಲ್ಲಿ....' ಎಂದೆಲ್ಲಾ ಬರೆದರು.

ಒಮ್ಮೆ ನಾನು ಕೊಡಗಿಗೆ ಹೋಗುವುದನ್ನು ನಿರ್ಧರಿಸಿದೆ. ಹಾಗೆ ಗೌರಮ್ಮನವರಿಗೆ ಕಾಗದ ಬರೆದೆ. ಅವರು "ಬೇಗ ಬನ್ನಿ" ಎಂದು ಬರೆದರು. ನನಗೆ ಬೆಂಗಳೂರು ಮೈಸೂರುಗಳಲ್ಲಿ ಕೆಲಸವಿದ್ದುದರಿಂದ ಹೇಳಿದ ಸಮಯಕ್ಕೆ ಹೋಗಲಾಗಲಿಲ್ಲ. ಅಂತೂ ಒಂದು ದಿನ ಮೈಸೂರಿನಲ್ಲಿ ಕೊಡಗಿನ ಬಸ್ಸು ಹತ್ತಿದೆ. ನಾಲ್ಕು ಗಂಟೆಗೆ ಸುಂಟಿಕೊಪ್ಪಕ್ಕೆ (ಗೌರಮ್ಮನವರ ಊರು) ತಲುಪುತ್ತದೆಂದು ಹೇಳಿದ್ದರು. ದಾರಿಯಲ್ಲಿ ವನಸಿರಿ ಮೈವೆತ್ತುನಿಂತಿತ್ತು. ಆದರೂ ನನಗೆ ಅತ್ತ ಲಕ್ಷ್ಯವಿದ್ದಿಲ್ಲ. ನನ್ನ ದೃಷ್ಟಿ ನನ್ನ ಹತ್ತಿರ ಕುಳಿತವರ ಕೈಗಡಿಯಾರದಲ್ಲಿಯ ತಾಸಿನ ಮುಳ್ಳಿನ ಕಡೆಗಿತ್ತು. ನಾಲ್ಕು ಆಗಲೊಲ್ಲದು; ಕೊಡಗಿನ ದಾರಿಯೂ ಮುಗಿಯಲೊಲ್ಲದು. ನನಗೆ ಬಹಳ ಬೇಸರವೆನಿಸಿತು. 'ಈ ಗಡಿಯಾರ ಮೋಟಾರಿನವರದಿರಬೇಕು' ಎಂದೆ. ಅದಕ್ಕೆ ಪ್ರತಿಯಾಗಿ ಮೋಟರಿನ ಕಂಡಕ್ಟರ್ 'ನಮ್ಮ ಬಸ್ ನಿಮ್ಮಲ್ಲಿಯ ಬಸ್ಸಿನಂತಲ್ಲ ಸಾರ್' ಎಂದ.

ನಾನು ಈ ಮೊದಲು ಗೌರಮ್ಮನವರ ಮನೆ ನೋಡಿದ್ದಿಲ್ಲ; ಆದರೂ ತಲೆ ಏನೇನೋ ಚಿಂತಿಸುತ್ತಿತ್ತು : 'ಒಂದು ಸುಂದರವಾದ ಮನೆ. ಅದರಲ್ಲಿ ಅದರ ಸ್ವಾಮಿನಿ—ಗೌರಮ್ಮ—ತನ್ನ ಪತಿಯೊಡನೆ ಕುಳಿತಿದ್ದಾರೆ. ನಡು-ನಡುವೆ ನಗೆ....' ಬಸ್ಸಿನವನು 'ಹೋಲ್‌ಡಾನ್' (Hold on) ಎಂದ; 'ಸುಂಟಿಕೊಪ್ಪ ಸಾರ್' ಎಂದ. ನಾನಿಳಿದೆ. ನಾನು ಬರುವ ದಿವಸ ತಿಳಿಸಿ, ತಪ್ಪಿಸಿ, ಅಂದು ಬರುತ್ತೇನೆಂದು ತಿಳಿಸಿಲ್ಲವಾದರೂ ಒಬ್ಬನು ಬಂದು 'ಕುಲಕರ್ಣಿಯವರೇ ?' ಎಂದ. ನಾನು 'ಯಾರು ?' ಎಂದೆ. 'ಗೌರಮ್ಮನವರು ತಮ್ಮನ್ನು ಕರೆದುಕೊಂಡು ಬರಲು ಕಳಿಸಿದ್ದಾರೆ' ಎಂದ. ಅವರ

ಟಪ್ಪಾಲಿಗೆ ಬರುವ ಹುಡುಗನಾತ. ನಾನು ಅವನೊಡನೆ ಹೊರಟೆ. "ನಿಮಗೆ ತುಂಬ ಕಾಗದ ಬಂದಿದೆ ಸಾರ್, ಅಮ್ಮಾಅವರು ನಿಮ್ಮ ದಾರೀ ನೋಡಿ ಬೇಸತ್ತಿದ್ದಾರೆ ಸಾರ್" ಎಂದ. ನನಗೆ ಹಿಗ್ಗು ಉಕ್ಕಿ ಬರುತ್ತಿತ್ತು. 'ಎಂಥ ಜನ ಇವರು !' ಎಂದು ಮೆಚ್ಚಿದೆ; ಕೂಡಿ ಹೊರಟೆವು.

ಅಂತೂ ಅಲ್ಲಿಂದ ಹೊರಟು ಸುಂದರವಾದ ಕಾಫಿತೋಟಗಳನ್ನು ನೋಡುತ್ತ, ಸೀಳಿದ ದಾರಿಗುಂಟ ಸಾಗಿದೆವು. ದಾರಿಯಲ್ಲಿಯ ಗಿಡಗಳು ದಾರಿಕಾರರನ್ನು ಸ್ವಾಗತಿಸಲು ನಿಂತಿವೆ. ಚವರಿ ಗಿಡಗಳು ಚವರಿ ಬೀಸಿದವು. ದಟ್ಟವಾದ ನೆಳಲು; ಆಗಾಗ ರಿಟಾಯರ್ (retire) ಆಗಲು ಬಂದ ಸೂರ್ಯನ ಹೊಂಗಿರಣಗಳು ತೂರಿ ಬರುತ್ತಿದ್ದವು, ಎಂತಹ ಸೊಗಸಿನ ನಾಡಿದು ! ಆದುದರಿಂದಲೆ ಗೌರಮ್ಮನವರು ಅಷ್ಟು ರಸಿಕರು; ಅಂತಹ ಸೌಂದರ್ಯೋಪಾಸಕರು !

ಒಂದು ಬಯಲಿಗೆ ಬಂದೆವು. ಅಲ್ಲಿಯೇ ಗೌರಮ್ಮನವರ ಪತಿದೈವ ಮ್ಯಾನೇಜರರಾಗಿದ್ದ ಎಸ್ಟೇಟಿನ ಒಡೆಯರ ಮನೆ. ಒಂದೆಡೆಗೆ ಎತ್ತರವಾಗಿ ದೂರದವರೆಗೆ ಹಬ್ಬಿದ ಬೆಟ್ಟವು ಮಂಜಿನ ಕಿರೀಟ ಧರಿಸಿನಿಂತಿದೆ. ಇನ್ನೊಂದೆಡೆ ದೂರದವರೆಗೆ ಬಯಲು ಹಸಿರು ಹಾಸಿ ಹೊದ್ದಿದೆ. ಅಂತಹ ರಮಣೀಯ ಸ್ಥಳದಲ್ಲಿ ಶ್ರೀ ಮಂಜುನಾಥಯ್ಯನವರ ಬಂಗ್ಲೆ. ಅಲ್ಲಿಂದ ಎರಡು ಫರ್ಲಾಂಗು ದೂರ ಗೌರಮ್ಮನವರ ಬಂಗ್ಲೆ. ಅದಕ್ಕೂ ಒಂದು ಕಾಫಿಯ ತೋಟದಲ್ಲಿ ಸೇರಿ ಹೋಗಬೇಕು. ಹೋಗುತ್ತಲೆ ಸ್ವಲ್ಪ ಎತ್ತರದಲ್ಲಿ ಒಂದು ಬಂಗ್ಲೆ. ಅದರ ಸುತ್ತು-ಮುತ್ತು, ಹಿಂದು-ಮುಂದು ಹೂದೋಟ. ನಾನು ಹೋದಾಗ ಗೌರಮ್ಮನವರೇ 'ಪೂಗಿಡಗಳ್ಗೆ ನೀರೆರೆ'ಯುತ್ತಿದ್ದರು. ಒಂದು ನಾಯಿ 'ವೊವ್' ಎಂದಿತು. ಗೌರಮ್ಮನವರು 'ಓ' ಎಂದು ಓಡಿಬಂದರು. ಅಂದಿನ ಅದೇ ನಗೆ, ಅದೇ ನಿಲವು, ಅದೇ ಬಟ್ಟೆ, ಅದೇ ವೇಷ-ಭೂಷಣ ! "ನಮಸ್ಕಾರ ಮಹಾಶಯರೇ, ಅಂತೂ ಒಮ್ಮೆ ಬಂದಿರಾ ?" ಎಂದರು. ಉಕ್ಕಿಬರುವ ನಗೆಗೆ ಸ್ವಾತಂತ್ರ್ಯ ಕೊಟ್ಟುಬಿಟ್ಟೆ. "ಸ್ವಲ್ಪ ನಿಲ್ಲಿ, ನಿಮ್ಮನ್ನು ಬಯ್ಯಬೇಕಾಗಿದೆ; ಇಲ್ಲ, ಒಳಗೆ ಬನ್ನಿ; ಅಲ್ಲಿಯೇ ಬಯ್ಯುತ್ತೇನೆ !" ಎಂದು ಒಳಗೆ ಕರೆದೊಯ್ದರು.

ಒಂದು ಕೋಚು, ನಾಲ್ಕು ಖುರ್ಚಿ. ನಡುನಡುವೆ ಹೂಪಾತ್ರೆಗಳನ್ನು ಹೊತ್ತ ಚಿಕ್ಕ ಮೇಜುಗಳು. ಒಂದೆಡೆಗೆ ಚಾಪೆ ಹಾಸಿದೆ. ನಾಲ್ಕು ಮೂಲೆಗೆ

ನಾಲ್ಕು ಸಣ್ಣ ಮೇಜುಗಳು ಖಾದಿಯ ಬಟ್ಟೆ ಹೊದ್ದು ಹೂಪಾತ್ರೆಗಳಿಂದ ಅಲಂಕೃತವಾಗಿವೆ. ಸಾಲದುದಕ್ಕೆ ಬೇಬಿಯ ನಾನಾ ಭಂಗಿಯಲ್ಲಿ ನಿಂತ, ಆಡಿದ, ಓಡುತ್ತಿರುವಾಗಿನ ಭಾವಚಿತ್ರಗಳು. ಅಲ್ಲಿ ಗೌರಮ್ಮ ಕೂಡುವುದು ಕಡಿಮೆ. ಅದನ್ನು ದಾಟಿ ಮೊಗಸಾಲೆ; ಮುಂದೆ ಹೂದೋಟ. ತರತರದ ಹೂಗಿಡಗಳು—ಎಲೆಬಳ್ಳಿ; ಅರ್ಧಪರಿಘದಂತೆ ಒಂದು ಕಿತ್ತಳೆಯ ಸಾಲು ಹೂದೋಟವನ್ನಾಕ್ರಮಿಸಿದೆ. ಗೊಂಚಲು—ಗೊಂಚಲಾಗಿ ಕಿತ್ತಳೆಗಳು ಗಿಡಗಳನ್ನು ಬಾಗಿಸಿವೆ. ಅಲ್ಲಿ ಒಂದು ದೊಡ್ಡ ಮೇಜು. ಅದರ ಮೇಲೆ ಲೇಖನ ಸಾಹಿತ್ಯ—ಗೌರಮ್ಮನವರ ಸಾಹಿತ್ಯ—ಇಂಗ್ಲೀಷು ಕನ್ನಡ ಪುಸ್ತಕ—ಪತ್ರಿಕೆಗಳು ಹರಡಿವೆ. ಅಲ್ಲಿ ನಾಲ್ಕು ಖುರ್ಚಿಗಳು ಮೇಜನ್ನು ಸುತ್ತುವರಿದಿವೆ; ಒಂದು ಮುರುಕು ಖುರ್ಚಿ ಒಂದು ಮೂಲೆಗಿದೆ. ಅದರ ಬೆತ್ತದ ಜಾಳಿಗೆ ಹರಿದಿದೆ. ಅದರ ಬುಡದಲ್ಲೊಂದು ಸ್ಟೂಲನ್ನು ಸರಿಸಲಾಗಿದೆ. ನನಗೆ ಅದನ್ನು ನೋಡಿ ಆಶ್ಚರ್ಯವಾಯಿತು. ಅದರ ಹತ್ತಿರ ಹಾಯ್ದೆ; "ಹಾ! ಅದು ನನ್ನ ಸ್ಫೂರ್ತಿದಾಯಕ ಖುರ್ಚಿ, ನೀವು ಓದಿದ ನನ್ನ ಕತೆಗಳು ಅದರ ವರಗಳು. ನೀವು ಇತ್ತ ಬರಬೇಡಿ. ನನ್ನ ಸ್ಫೂರ್ತಿ ನಿಮ್ಮದಾದೀತು" ಎಂದು ಒಂದೇ ಉಸುರಿನಲ್ಲಿ ಹೇಳಿದರು. ನಾನು ಹಟದಿಂದ ಅದರ ಕಡೆಗೆ ಹೋದೆ. ಬುಡದ ಸ್ಟೂಲನ್ನು ಎಳೆದರು. ಜಾಳಿಗೆ ಜೋಳ್ಳುಬಿತ್ತು. ನಾವಿಬ್ಬರೂ ಮೇಜಿನ ಹತ್ತಿರ ಬಂದೆವು. ಒಂದೊಂದು ಆಸನವನ್ನು ಆಕ್ರಮಿಸಿದೆವು. "ಎಲ್ಲ ಸುದ್ದಿ ಹೇಳಿ" ಎಂದರು. "ನನ್ನ ಕಾಗದಗಳಿವೆಯೋ ?" ಎಂದೆ. "ಅದಿರಲಿ—ಮೊದಲು ಸುದ್ದಿ ಹೇಳಿ" ಎಂದರು. ನಾನು ಕೈಯಲ್ಲಿದ್ದ ವೃತ್ತಪತ್ರ ಚಾಚಿದೆ. ಅದನ್ನಿಸಿದುಕೊಂಡು ಮೇಜಿನ ಮೇಲೆಸೆದು "ಎಂಥ ಜನ ನೀವು" ಎಂದರು. "ನನಗೆ ಅಂದು ಬರಲಿಕ್ಕೆ ಆಗಲಿಲ್ಲ" ಎಂದೆ. "ಅದು ನನಗೆ ಗೊತ್ತು—ಯಾಕೆ ಆಗಲಿಲ್ಲ ಹೇಳಿ!....ಅಯ್ಯೊ, ನಿಮ್ಮನ್ನು ಹಾಗೇ ಕೂರಿಸಿದೆನಲ್ಲಾ! ಸರಸ್ವತೀ, ಕಾಫಿ! ರುಕ್ಮಾ, ಹಣ್ಣು!" ಎಂದು ಕೂಗಿಕೊಂಡು ತಾವು ಹೋಗಿ ನನ್ನ ಕಾಗದಗಳನ್ನು ತಂದು ಕೊಟ್ಟರು. ನಾನು ಅವುಗಳನ್ನು ಓದಲು ಆತುರನಾಗಿದ್ದೆನಾದರೂ ಅವರೊಡನೆ ಮಾತನಾಡಲು ಅದಕ್ಕೂ ಹೆಚ್ಚು ಆತುರನಾಗಿದ್ದೆ. "ಮೊದಲು ಕಾಫಿ ಕುಡಿಯಿರಿ, ಕಾಗದ ಆಮೇಲೆ ಓದಿದರಾಗದೇ ? ಅಯ್ಯೊ, ಇವರೆಲ್ಲಿ

ಮನೆಗೆ ಜನ ಬಂದಾಗ ಇವರಿರುವುದೇ ಇಲ್ಲ" ಎಂದು ಒಂದೆಡೆಗೆ ಓಡಿದರು. ಎರಡು ನಿಮಿಷಗಳಲ್ಲಿ ಮತ್ತೆ 'ಹೋ' ಎನ್ನುತ್ತ ತಮ್ಮ ಪತಿ ಶ್ರೀ ಗೋಪಾಲ ಕೃಷ್ಣರ ಕೈಹಿಡಿದುಕೊಂಡು ಬರುತ್ತಿರುವುದನ್ನು ಕಂಡೆ. ಎರಡೂ ಒಂದೆ ಬಗೆಯ ಬೆಳಕಿನ ಮುಖ, ಒಂದೇ ಗಾತ್ರ-ಗತಿ. ಇಬ್ಬರೂ ಸಮನಾಗಿ ಹೆಜ್ಜೆ ಹಾಕುತ್ತ ಬರುತ್ತಿದ್ದರು. ಅವರು ನಡೆದುಬರುತ್ತಿದ್ದ ಆ ನೋಟ 'ಅವರಿನ್ನೂ ದೂರದಿಂದ ಬರುತ್ತಿರಬೇಕು; ಇಲ್ಲವೇ ನಾನು ಹಿಂದೆ ಸರಿಯುತ್ತಿರಬೇಕು. ಅವರು ಹಾಗೆ ಬರುತ್ತಲೇ ಇರಬೇಕು. ನಾನು ನೋಡುತ್ತಲೇ ಇರಬೇಕು!' ಎನ್ನಿಸಿತು. ಎಂತಹ ಜೊತೆ ಅದು! ಸರ್ವಜ್ಞ ಕವಿ ಇಂತಹ ಒಂದು ದಾಂಪತ್ಯ ನೋಡಿಯೆ 'ಸ್ವರ್ಗಕ್ಕೆ ಕಿಚ್ಚು ಹಚ್ಚು' ಎಂದಿರಬೇಕು.

ನಾವು ಅಲ್ಲಿ ಕೂಡಿ ಆಡಿದ ಮಾತಿಗೆ ತುದಿಮೊದಲಿರಲಿಲ್ಲ. ಸಾಮಾನ್ಯ ವಾಗಿ ಸಾಹಿತ್ಯದ ಮಾತುಗಳೇ ಹೆಚ್ಚು. ನಾನು, ಪ್ರೊ. ಗೋಕಾಕರು ಇಂಗ್ಲೆಂಡಿನಿಂದ ಬಂದ ಮೇಲೆ ಧಾರವಾಡಕ್ಕೆ ಮೊದಲು ಬಂದಾಗಿನ ನಮ್ಮ ಉತ್ಸಾಹವನ್ನು ಹೇಳಿದೆ. ಅದನ್ನು ಕೇಳಿ ಅವರು "ಇನ್ನಿಷ್ಟು ಹೇಳಿ— ಇನ್ನಿಷ್ಟು!" ಎಂದರು. ಶ್ರೀ ಬೇಂದ್ರೆ, ಮಾಸ್ತಿ ಎಂದರೆ ಅವರಿಗೆ ಬಹಳ ಭಕ್ತಿ. ಅವರನ್ನೊಮ್ಮೆ ಕೂಡಿಯೆ ತಮ್ಮ ಮನೆಗೆ ಕರೆಯಬೇಕೆನ್ನುತ್ತಿದ್ದರು. ಬೇಂದ್ರೆಯವರ,— 'ರತ್ನ'ರ ಕವಿತೆಗಳು, ಮಾಸ್ತಿಯವರ ಕತೆಗಳು ಆಗಿನ ನಮ್ಮ ಮಾತಿನಲ್ಲಿ ಹಾಸು-ಹೊಕ್ಕಾಗಿದ್ದವು. ಏನಾದರೂ ಮಾತು ಬಂದಾಗ ಅದರೊಡನೆ ಒಂದು ಕವಿತೆಯ ನುಡಿಯೊ, ಕತೆಯ ಒಂದು ಮಾತೊ ಬರು ತ್ತಲೇ ಇತ್ತು. ಈ ಮೊದಲ ವರ್ಣಿಸಿದ ಹಾಲಿನಲ್ಲಿ ಒಂದು ಸಣ್ಣ ಮೇಜಿನ ಮೇಲೆ Golden Treasury, ಅದರೊಂದಿಗೆ 'ಶ್ರೀ' ಅವರ 'ಇಂಗ್ಲಿಷ ಗೀತಗಳು' ; ಅಲ್ಲಿಯೇ 'ಉಮರನ ಒಸಗೆ'. ಒಂದು ಬದಿಗೆ ಓದಿ ಓದಿ ಜೀರ್ಣವಾದ, ಗರಿ-ಗರಿಯಾದ '**ಗರಿ**'ಯೊಂದು. Golden Treasury ಯ ಹೊಟ್ಟೆಯಲ್ಲಿ ವಿ. ಸೀ. ಅವರ 'ಮನೆತುಂಬಿಸುವದು' ಕವಿತೆಯದೊಂದು ಕಾಗದವಿತ್ತು. ಇವುಗಳನ್ನಿಟ್ಟ ಚಿಕ್ಕ ಮೇಜಿಗೆ ಹೊದ್ದಿಸಿದ ಬಟ್ಟೆಯ ಮರೆಗೆ—ಬುಡದಲ್ಲಿ, ಶ್ರೀ ಗೋಪಾಲಕೃಷ್ಣರು ಓದುವ ಪಂಪಭಾರತ, ಜೈಮಿನಿಭಾರತ ಇರುತ್ತಿದ್ದವು. ಇವರ ಒಬ್ಬ ಗೆಳತಿಯ ತಾಯಿ ಮಕ್ಕಳ '**ಕಾಟ**'ದಿಂದ ರೇಗಿದಾಗ 'ಯಾಕೋ ಕಾಣೆ' ಎನ್ನುತ್ತಿದ್ದರಂತೆ. ಹಿಂದಿ

ನಿಂದ ಗೌರಮ್ಮನವರು 'ರುದ್ರವೀಣೆ ಮಿಡಿಯುತ್ತಿರುವುದು' ಎಂದು ಗೆಳತಿಯ ಕಿವಿಯಲ್ಲಿ ನುಡಿಯುತ್ತಿದ್ದರಂತೆ.

ಇವರಿಗೆ ಇಂಗ್ಲಿಷ್ ಕತೆಗಳನ್ನೋದುವುದು ಬಹಳ ಮೆಚ್ಚುಗೆ. ಒಮ್ಮೆ ಒಂದು ಕಾಗದದಲ್ಲಿ–"ಮೊನ್ನೆ ಮೊನ್ನೆ 'Great Stories of the World' ಎಂಬ ಪುಸ್ತಕವನ್ನು ಓದಿದೆ. ಬಹಳ ಚೆನ್ನಾಗಿದ್ದ ಕತೆಗಳಿದ್ದವು. ಓದಿ ಎನಿಸಿತು: 'ಅಯ್ಯೋ, ಈ ಕತೆಗಳ ಮುಂದೆ ನಮ್ಮ ಪ್ರಯತ್ನವೇ' ಎಂದು. ಮತ್ತೆ ಅವನ್ನು ಅನುವಾದಿಸಲೇ—ಎಂದುಕೊಂಡೆ. ಬೇಡ, ಇಷ್ಟೊಂದು ಸುಂದರವಾದವುಗಳನ್ನು ನನ್ನ ಬರಹದ ಮೂಲಕ ವಿರೂಪಗೊಳಿಸಬೇಕೇಕೆಂದು ಸುಮ್ಮನಾದೆ" ಎಂದು ಬರೆದಿದ್ದರು. ಅನುವಾದಗಳು ಚೆನ್ನಾಗಿರದಿದ್ದರೆ ಅವರಿಗೆ ತುಂಬ ಬೇಸರವಾಗುತ್ತಿತ್ತು. ಒಮ್ಮೆ ನಾನು ಕಳಿಸಿದ ಒಂದು ಅನುವಾದಿತ ಪುಸ್ತಕ ಓದಿ "ನಿನ್ನೆ ರಾತ್ರಿ '............' ಓದಿದೆ. ಚೆನ್ನಾಗಿಲ್ಲದ ಅನುವಾದಗಳನ್ನು ಓದುವುದಕ್ಕಿಂತಲೂ ಓದದಿದ್ದರೆ ಒಳ್ಳೆಯದೆನಿಸುವುದು. ಮುದ್ರಾರಾಕ್ಷಸಗಳು ತುಂಬಿಹೋಗಿವೆ. ಸಾಲದುದಕ್ಕೆ ಅನುವಾದವೂ ಅಷ್ಟು ಚೆಂದ !" ಎಂದು ಬರೆದರು.

ಅಲ್ಲಲ್ಲಿಯ ಸಾಹಿತ್ಯದ ಚಟುವಟಿಕೆಗಳನ್ನವರು ಬಹಳ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. "ಬಳ್ಳಾರಿ ಸಮ್ಮೇಲನಕ್ಕೆ ಬನ್ನಿ" ಎಂದು ಬರೆದಿದ್ದೆ. ಅವರಿಗೆ ಬರಲಿಕ್ಕಾಗಲಿಲ್ಲ. ನಾನು ತಿರುಗಿ ಬಂದ ಕೂಡಲೆ ಪತ್ರ ಬರೆಯಲಿಲ್ಲ. ಆಗ ಬಂದ ಗೌರಮ್ಮನವರ ಕಾಗದ ಹೀಗಿದೆ :

"ಸಾಹಿತ್ಯ ಸಮ್ಮೇಲನವಾಗಿ ಒಂದು ವಾರ ಕಳೆದರೂ ನಿಮ್ಮ ಪತ್ರವೇ ಇಲ್ಲ. ನನಗಂತೂ ನಿಮ್ಮ ಪತ್ರದ ಹಾದಿ ನೋಡಿ ನೋಡಿ ಕಣ್ಣು ನೋವು ಬಂದು ಹೋಗಿದೆ. ಸಾಹಿತ್ಯ ಸಮ್ಮೇಲನದ ವಿಷಯ ಪೇಪರ್‌ಗಳಲ್ಲಿ ಓದುವುದಕ್ಕಿಂತಲೂ ನಿಮ್ಮ ಪತ್ರದಲ್ಲಿ ಓದಿದರೆ ಹೆಚ್ಚು ಚೆಂದವೆಂದು ನನ್ನ ಭಾವನೆ. ಆದರೆ ನೀವು ಎಲ್ಲವನ್ನೂ—ಒಂದೂ ಬಿಡದೆ—ನನ್ನ ಗೆಳತಿ ಕುಮಾರಿ ಪದ್ಮಾವತಿಯ ವಿಷಯ ಸಹ—ಬರೆಯಬೇಕೆಂದು ಆಸೆ ನನಗೆ. ಪತ್ರಿಕೆಗಳಲ್ಲಿ ಕೇವಲ ಣ-ನ*ದ ಜಗಳಗಳಲ್ಲದೆ ಬೇರೇನೂ ಇಲ್ಲ. ಹೇಗೆ ? ಬರೆಯುವಿರೋ ಇಲ್ಲವೊ ?...."

* 'ಕರ್ನಾಟಕ', 'ಕರ್ಣಾಟಕ' ಎಂಬ ವಾದ.

ಗೌರಮ್ಮನವರಿಗೆ ಪ್ರಕೃತಿಸೌಂದರ್ಯ ನಿರೀಕ್ಷಣೆಯ ದೃಷ್ಟಿ ಚೆನ್ನಾಗಿತ್ತು. ನಾನಲ್ಲಿದ್ದಾಗ ದಿನಾಲು ತಿರುಗಾಡಲು ಹೋಗುತ್ತಿದ್ದೆವು—ಒಬ್ಬೊಬ್ಬರ ಇಷ್ಟದ ಸ್ಥಳಗಳಿಗೆ. ಮೊದಲದಿನ ಶ್ರೀ ಗೋಪಾಲಕೃಷ್ಣರ ಸರತಿ. ಅವರು ಕಾಫಿಯ ಕಾಡು ತೋಟದಲ್ಲಿ, ಕಡಿದಾದ ದಾರಿಯಲ್ಲಿ ಕರೆದೊಯ್ದರು. ಗಿಡಗಳಿಗೆ ಸುತ್ತಿಕೊಂಡ ಬಳ್ಳಿಗಳ ಕುಡಿಗಳು ನಮಗೂ ಸುತ್ತಿಕೊಳ್ಳುತ್ತಿದ್ದವು: ನಾನು, ಗೌರಮ್ಮ, ಶ್ರೀ ಗೋವಿಂದಯ್ಯ (ಗೌರಮ್ಮನವರ ನಚ್ಚಿನ ಮೈದುನ)ಗೋಪಾಲಕೃಷ್ಣರ ಹಿಂದೆ-ಹಿಂದೆ ಮುಗ್ಗರಿಸುತ್ತ ಸಾಗಿದ್ದೆವು. ಗೌರಮ್ಮನವರ ಸೀರೆಯ ಸೆರಗನ್ನು ಒಂದು ಮುಳ್ಳು ಕಂಟ ಹಿಡಿಯಿತು. ಹುಸಿ ಮುನಿಸು ತೋರಿ "ಎಂತ ದಾರಿ ನಿಮ್ಮದು ? ಇನ್ನು ನೀವು ಕರೆದೊಯ್ಯುವುದಾದರೂ ಎಲ್ಲಿಗೆ ? ನಮ್ಮನ್ನೂ ನಿಮ್ಮ ಕೂಲಿಗಳೆಂದಂ ತಿಳಿದಿರಾ ?—" ಎನ್ನುತ್ತ ನಿಲ್ಲಲಾರದೆ ನಡೆದು ಬರುತ್ತಿದ್ದರು. ಅದೇ ಕಾಡಿನಲ್ಲಿ ದಿನಾಲು ತಿರುಗುತ್ತಿದ್ದ ಮ್ಯಾನೇಜರ್ ಗೋಪಾಲಕೃಷ್ಣರಿಗೇನು ತೊಂದರೆ ? ಹಿಂದಿರುಗಿ, ತಮ್ಮ 'ಕೈ ಹಿಡಿದಾಕೆಯ' ಅವಸ್ಥೆ ನೋಡಿ, ಕೈ ಕೊಟ್ಟು ಕರೆದುಕೊಂಡು ನಡೆದರು. ನಾವು ಒಂದು ಕಾಡು ಹೊಳೆಗೆ ಬಂದೆವು. ದಾರಿಗೆ ಅಡ್ಡವಾಗಿ ಚಾಚಿ ಬಂದ ಗಿಡದ ಬೇರು ಹಿಡಿದು ನೇತಾಡಿದರು ಗೋವಿಂದಯ್ಯನವರು. ಅಂಥದೇ ಎರಡೂ ಬದಿಗೆ ಹಿಡಿದುಕೊಂಡ ಇನ್ನೊಂದು ಬೇರಿಗೆ ಜೋಕಾಡಿದರು ಗೌರಮ್ಮನವರು. ನಡು ನೀರಿನ ವರೆಗೆ ಚಾಚಿಕೊಂಡ ಒಂದು ಗಿಡ ಬಳಸಿಹೋಗಿ, ನಾನು—ಗೋಪಾಲಕೃಷ್ಣಯ್ಯ ನಿಂತಿದ್ದೆವು. ಅಲ್ಲಿ ನೀರು ಬಲು ಆಳವಾಗಿದೆಯಂತೆ. ಗೋವಿಂದಯ್ಯ ಒಳ್ಳೆಯ ಈಜುಗಾರರು. "ಹಾರಲೇ ಅಣ್ಣಯ್ಯ ?" ಎಂದರು. 'ಹೂ' ಗುಟ್ಟಿದರು ಗೌರಮ್ಮ; 'ಮೊಸಳೆಗಳಿವೆ' ಎಂದರು ಗೋಪಾಲಯ್ಯ. ಸುಮ್ಮನೆ ನಿಂತಿದ್ದೆ ನಾನು—ಮುಗಿಲಿನ ವರೆಗೆ ಹಬ್ಬಿ ನಿಂತ ಬೆಟ್ಟವನ್ನೂ ಅದರಲ್ಲೆಲ್ಲ ನೆಟ್ಟು ನಿಂತ ಗಿಡಗಳನ್ನೂ ನೋಡುತ್ತ. "ನೋಡಿ, ಎಂತಹ ರಮಣೀಯ ದೃಶ್ಯ !" ಎಂದರು ಗೋಪಾಲಯ್ಯ. "ನಮಗೆ ನಿಮ್ಮ ಕಣ್ಣಿಲ್ಲ" ಎಂದರು ಗೌರಮ್ಮ. "ಮತ್ತೆ ನಿಮ್ಮ ಸ್ಥಳವಾವುದು ?" ನಾನೆಂದೆ. "ನನ್ನದು ಬಹಳ ಸುಂದರವಾಗಿದೆ. ನಾವಿಬ್ಬರೇ ಹೋಗೋಣ. ಈ ಜನದ ದೃಷ್ಟಿ ತಾಕೀತು ನನ್ನ ಆ ಸ್ಥಳಕ್ಕೆ" ಎಂದರವರು.

ಅದರಂತೆಯೇ ಮರುದಿನ ನಾವಿಬ್ಬರೂ ಹೊರಟೆವು. ಅದೂ ಕಾಡಾದರೂ ದಾರಿಯಿತ್ತು. ಸ್ವಲ್ಪ ದಿಬ್ಬ ಹತ್ತಿದ ಮೇಲೆ, ಕೆಳಗೆ ದೂರದ ವರೆಗೆ ಬಯಲು ಹಬ್ಬಿದೆ. ಅಲ್ಲೊಂದು ಹೊಳೆ, ಥಳ-ಥಳ ಹೊಳೆಯುತ್ತ ಸಾಗಿದೆ. ನಾನು ಹೋದ ಸಮಯದಲ್ಲಿ ಬಂಜೆಭೂಮಿ; ಬೆಳೆಗಾಲದಲ್ಲಾದರೆ ಬಯಲೆಲ್ಲ 'ಹಸಿರು ಹಾಸಿ'ನಂತಿರುತ್ತದಂತೆ. ಅಲ್ಲಿಯೇ ಒಂದು ಕೃತ್ರಿಮ ಆಸನ ಸಿದ್ಧಪಡಿಸಿದ್ದಾರೆ ಗೌರಮ್ಮನವರು.. ತಾವೊಬ್ಬರೇ ಬಂದು ಹಾಗೆಯೇ ನೋಡುತ್ತ ಕೂಡುವುದಕ್ಕೆಂದು. ಮಳೆಗಾಲದಲ್ಲಿ ಮಳೆಯ ಪರಿವೆಯಿಲ್ಲದೆ ಅಲ್ಲಿ ನೋಡುತ್ತ ಕುಳಿತಿರುತ್ತಿದ್ದರಂತೆ ಗೌರಮ್ಮ. ಅಲ್ಲಿಂದ ಇಳಿಯುತ್ತ ಇಳಿಯುತ್ತ ನದಿಯ ದಾರಿಗೆ ಬಂದೆವು. ಒಂದು ಲಾರಿ-ಇವರದೇ-ಕಾಫಿ ಬೀಜ ತರುವಂತಹದು—ಬರುತ್ತಿತ್ತು. 'ಅವರಿದ್ದಾರೆಯೇ ನೋಡಿ' ಎಂದರು. 'ಮುಂದೆಯೇ ಇದ್ದಾರಲ್ಲ! ಕಾಣುವುದಿಲ್ಲವೇ ನಿಮಗೆ?' ಎಂದೆ. ಅವರು ಬಿದ್ದು ಬಿದ್ದು ನಗಹತ್ತಿದರು. ನಾನು ಪೆಚ್ಚುಬಿದ್ದು ಕೇಳಿದೆ: 'ಏನದು?' ಎಂದು. ಅವರು ಹೇಳಿದರು: "ನೋಡಿ, ನಾನು ಮೊನ್ನೆ ಮಡಿಕೇರಿಗೆ ಹೋದಾಗ ದಾರಿಯ ಒಂದು ಬದಿಯಿಂದ ಹೋಗುತ್ತಿದ್ದೆ. ನನ್ನ ಹಿರಿಯಣ್ಣ ಅದೇ ದಾರಿಯಿಂದ ಎದುರಾಗಿ ಬರುತ್ತಿದ್ದ. ನನಗೆ ಕಾಣಲಿಲ್ಲ. 'ಏನು ಗೌರಮ್ಮ, ಯಾವಾಗ ಬಂದೆ? ಹಾಗೇ ಹೋರಟಿದ್ದೀಯಲ್ಲ!' ಎಂದು ಆರಂಭಿಸಿದ. ನನಗೆ ಬಹಳ ನಾಚಿಕೆಯಾಯಿತು. ಈಗ ಬೇಗನೆ ಕಣ್ಣಿನ ಚಿಕಿತ್ಸೆ ಮಾಡಿಸುವದೆಂದು ನಿರ್ಧರಿಸಿದ್ದೇನೆ. ತಾರೀಖು ಗೊತ್ತಾಗಿದೆ. ನನ್ನಣ್ಣನೊಡನೆ ಬೆಂಗಳೂರಿಗೆ ಹೋಗಲಿರುವೆ. 'ನಾಲ್ಕು ಕಣ್ಣು' ಆಗದಂತೆ ಕಳೆಗೊಳಿಸಲು ಕೇಳಿಕೊಂಡಿದ್ದೇನೆ ಡಾಕ್ಟರರನ್ನು—ನೋಡಬೇಕು" ಎಂದರು.

"ಹಾಗಾದರೆ ನೀವೇ ಹಾಕಿಸಿದ ಆ ಆಸನದ ಮೇಲೆ ಕುಳಿತು ನೀವು ನೋಡುತ್ತಿರುವುದೇನು?" ಎಂದು ಕೇಳಿದೆ. "ದೃಷ್ಟಿ ದೂರ ಹರಿಯಲೆಂದೇ ಅದನ್ನು ಹಾಕಿಸಿರುವೆ. ನನ್ನ ಕಣ್ಣಿನ ಅವಸ್ಥೆ ಇನ್ನೂ ಬಹಳ ಜನಕ್ಕೆ ಗೊತ್ತಾಗಿಲ್ಲ. ಚಿಕ್ಕ ಚಿಕ್ಕ ಅಕ್ಷರ ಓದಿ ನನ್ನ ಪಾಡು ಹೀಗಾಗಿದೆ!" ಎಂದರು. ಅಲ್ಲಿಂದ ಹೊಳೆಯ ತೀರಕ್ಕೆ ಬಂದೆವು. ಒಂದು ಸೀಳು ದಾರಿಯಿಂದ ಮುಂದೆ ಸಾಗಿದೆವು. ನಾವು ಹಿಂದಿನ ದಿನ ತಿರುಗಾಡಲು ಹೋದ ಹೊಳೆಗೆ

ಮತ್ತೊಂದು ಬದಿಯ ಬೆಟ್ಟದಿಂದ ಇನ್ನೊಂದು ಹೊಳೆ ಹರಿದು ಬಂದು ಕೂಡಿದೆ. ಆ ದೃಶ್ಯ ಬಹಳ ರಮಣೀಯವಾಗಿದೆ. ನಾವು ಸುತ್ತಲೂ ನೀರಿದ್ದ ಒಂದು ಕಲ್ಲುದಿಬ್ಬಕ್ಕೆ ಬಂದೆವು. ಅಲ್ಲಿ ಕುಳಿತು ಹಿಂದೆ ತಿರುಗಿ ನೋಡಿದರೆ—ಆ ಕೂಡು ಹೊಳೆಯು ಹರಿದು ಬರುವುದು; ಅದರ ಹಿಂದೆ ಎರಡೂ ಬದಿಯಿಂದ ಬೆಟ್ಟ ಹಬ್ಬಿ ಒಂದೆಡೆಗೆ ಕೂಡಿರುವುದು. ಬೆಟ್ಟದ ಮೇಲಿನ ಮರಗಳು ಮುಗಿಲನ್ನು ಚುಚ್ಚುವ ಸೊಕ್ಕಿನಲ್ಲಿ ಬೆಳೆದಿವೆ. ನಾವು ಕೂತಲ್ಲಿಂದ ಮುಂದೆ ಸ್ವಲ್ಪ ಮರಳು. ಅಲ್ಲಿಂದ ದಾಟಿ ನೀರಿನಲ್ಲಿ ಬುಟ್ಟಿಯಂತೆ ಬೆಳೆದು ನಿಂತ ಒಂದು ಹುಲ್ಲುಗಡ್ಡೆ—ಕತ್ತರಿಸಿ ಬೆಳೆಸಿದಂತೆ—ಬೆಳೆದು ನಿಂತಿದೆ. ಬಹಳ ದಿವಸಗಳಿಂದಲೂ ಅದು ಹಾಗೆಯೇ ಇದೆಯಂತೆ. ಆ ಸ್ಥಳ ನಿಜವಾಗಿಯೂ ಸುಂದರವಾಗಿದೆ. 'ನೋಡಿ, ಕುಲಕರ್ಣಿಯವರೇ, ನನ್ನ ಸ್ಥಳ! ಬೇಂದ್ರೆಯವರನ್ನು ಇಲ್ಲಿಗೆ ಕರೆದು ತಂದು ಕೂರಿಸಿದರೆ ಎಂತಹ ಕವಿತೆ ಹುಟ್ಟಬಹುದು?' ಒಂದು ಕೇಳಿದರು. ಬೇಂದ್ರೆಯವರೆಂದರೆ ಅಷ್ಟು ಇಷ್ಟ ಅವರಿಗೆ. ಒಬ್ಬ ಲೇಖಕರಿಗೆ ಇವರು ಬೇಂದ್ರೆಯವರ ವಿಷಯವನ್ನು ಹೇಳುತ್ತಿದ್ದಾಗ ಅವರು 'ಬೇಂದ್ರೆ ಎಂದರೆ ಯಾರು?' ಎಂದರಂತೆ; ಅದಕ್ಕಿವರು ಹೀಗೆ ಹೇಳಿದರಂತೆ :

"ನಮಗವರ ಮಾತನ್ನು ಕೇಳಿ ಆಶ್ಚರ್ಯವಾಯಿತೆಂದರೆ—ಆಶ್ಚರ್ಯವೇನು ಹೇಳಿ! 'ಬೇಂದ್ರೆ ಎಂದರೆ ಯಾರು?' ಕನ್ನಡದಲ್ಲಿ ನೂರಾರು ಕವಿತೆಗಳನ್ನು ಬರೆದು ಹೆಸರು ಹೊಂದಿದ ಇವರಿಗೆ ಬೇಂದ್ರೆ ಎಂದರೆ ಯಾರು ಎಂದು ಗೊತ್ತಿಲ್ಲವಂತೆ! ಉಕ್ಕುತ್ತಿದ್ದ ನಗುವನ್ನು ತಡೆದುಕೊಂಡು ಹೇಳಿದೆ : 'ಅಂಬಿಕಾತನಯ ದತ್ತರು ಗೊತ್ತಿಲ್ಲವೇ ನಿಮಗೆ? ಕನ್ನಡನಾಡಿನ ಶೇಕ್ಸಪಿಯರ್ ಅವರು. ಕೇವಲ ಕನ್ನಡ ನಾಡಿನಲ್ಲಿ ಏಕೆ? ರವೀಂದ್ರರಿಗೆ ದೇಶಬಂಧುಗಳು ದೊರೆತಂತೆ ಅಂಬಿಕಾತನಯರ ಕವಿತೆಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಬಲ್ಲವರು ಯಾರಾದರೂ ಇದ್ದಿದ್ದರೆ, ಇಂದು ಬೇಂದ್ರೆಯವರ ಹೆಸರು ವಿಶ್ವಸಾಹಿತ್ಯದಲ್ಲಿ ಮೆರೆಯುತ್ತಿತ್ತು. ಅವರ ಕವಿತೆಗಳನ್ನು ಓದಿಲ್ಲವೇ ನೀವು?—' ಇನ್ನೂ ಬಹಳ ಮಾತುಗಳು ಉಕ್ಕಿಬಂದವು." ಎಂದು ಬರೆದಿದ್ದಾರೆ.

ಗೌರಮ್ಮನವರಿಗೆ ಪ್ರಾಣಿದಯೆ ತುಂಬ ಇತ್ತು. ಮನೆಯಲ್ಲಿ ನಾಯಿ ಬೆಕ್ಕು, ಹಸು, ದನ ಎಲ್ಲ ಇದ್ದವು. ನಾಯಿಗೆ ಇವರು 'ಫ್ರೆಡ್ಡಿ' 'ಗ್ರೇಟಾ'

ಎಂದು ಕರೆಯುತ್ತಿದ್ದರು. 'ನಾಯಿಗೆ ಇಂಗ್ಲಿಷ್ ಹೆಸರೇಕೆ ?' ಎಂದು ನಾನು ಕೇಳಿದ್ದಕ್ಕೆ 'ಇಂಗ್ಲಿಷ್ ಹೆಸರು ನಾಯಿಗೂ ಒಪ್ಪುವುದಿಲ್ಲವೋ' ಎಂದು ಅವರು ಕೇಳಿದರು.

ಗೌರಮ್ಮನವರ ಪತಿಭಕ್ತಿ ಅಪಾರವಾಗಿತ್ತು. ದುಡಿದು ಬಂದ ಗಂಡನ ಸ್ವಾಗತಕ್ಕಾಗಿ ಬಾಗಿಲಲ್ಲಿ ನಿಂತ ಗೌರಮ್ಮ, ಗಂಡ ಬರುತ್ತಲೆ 'ಹಲ್ಲೋ' ಎಂದು ಕೈಹಿಡಿದುಕೊಂಡು ಬಂದು ಖುರ್ಚಿಯಲ್ಲಿ ಕೂರಿಸಿ, ಬೂಟು-ಕಾಲು ಚೀಲ ಬಿಚ್ಚುತ್ತಿದ್ದರು. ಒಳಗಿನಿಂದ ತಾವೇ ಕಾಫಿ ತಂದುಕೊಡುತ್ತಿದ್ದರು. ಎಂತಹ ಆಯಾಸವಾಗಿದ್ದರೂ ಗೋಪಾಲಯ್ಯನವರಿಗೆ ಆಗ ಹಗುರೆನಿಸುತ್ತಿರಬಹುದು. 'ಇವರಿಗೆ ತುಂಬ ಕೆಲಸ. ನಾನವರಿಗೇನೂ ಸಹಾಯ ಮಾಡಲಾರೆನಲ್ಲಾ !' ಎನ್ನುತ್ತಿದ್ದರು. ಒಂದು ದಿನ ಊಟವಾದ ಮೇಲೆ ನಾವು ಮೂವರೂ ಮಾತನಾಡುತ್ತ ಕುಳಿತಿದ್ದೆವು; ಆಯಾಸವಾಗಿತ್ತೆಂದು ಕಾಣುತ್ತದೆ—ಗೋಪಾಲಯ್ಯನವರು ಖುರ್ಚಿಯಲ್ಲಿಯೇ ನಿದ್ದೆಹೋದರು. ಅದನ್ನು ಕಂಡ ಗೌರಮ್ಮನವರು ನನ್ನನ್ನು ಸನ್ನೆಯಿಂದ ಸುಮ್ಮನಿರಿಸಿ, ಎರಡು ಮೆತ್ತೆ ತಂದು, ತಲೆಯ ಬುಡದಲ್ಲೊಂದನ್ನು ಮೆಲ್ಲಗಿರಿಸಿದರು. ಇನ್ನೊಂದನ್ನು ಕಾಲಬುಡದಲ್ಲಿ ಸರಿಸಿ, ನನ್ನನ್ನು ಒಳಗೆ ಕರೆದು ನಮ್ಮ ಮಾತು ಅವರಿಗೆ ಕೇಳಿಸಿ ಎಚ್ಚರವಾಗದಂತೆ ಕನ್ನಡಿಯ ಬಾಗಿಲನ್ನು ಎಳೆದರು. ಅದರಂತೆಯೆ ಶ್ರೀ ಗೋಪಾಲಯ್ಯನವರು ಬರೆದ ಒಂದು ಕಾಗದದಲ್ಲಿ ಹೀಗಿದೆ : "ನೀವು ನನ್ನ ಗೌರಮ್ಮನಿಗೆ ಬರೆದ ಕಾಗದ ನೋಡಿದೆ. ಅದರಲ್ಲಿ ಮಾಸ್ತಿಯವರು, ಮತ್ತೆ ಬೇಂದ್ರೆಯವರೂ ಸಹ, ರಾಮ-ಲಕ್ಷ್ಮಣರಂತೆ ನಮ್ಮ ದಂಡಕಾರಣ್ಯಕ್ಕೆ ಬರುವವರಾಗಿ ತಿಳಿದೆ. ನನ್ನ ಗೌರಮ್ಮ—ಶಬರಿಗಂತೂ ಹಿಗ್ಗೋ ಹಿಗ್ಗು. ನೀವು ಪ್ರಕಟಿಸುವ 'ಚಿಗುರಿ'ಗಿಂತಲೂ ಚಿಗುರಿಬಿಟ್ಟಿದ್ದಾಳೆ."

ಗೌರಮ್ಮನವರಲ್ಲಿ ದೇಶಭಕ್ತಿಯೂ ಉಜ್ವಲವಾಗಿತ್ತು. ಹತ್ತು-ಹನ್ನೆರಡು ವರುಷಗಳಿಂದ ಸಂಪೂರ್ಣವಾಗಿ ಖಾದಿ ಧರಿಸುತ್ತಿದ್ದರು. ಖಾದಿಯನ್ನು ಉಡು-ತೊಡುವವರನ್ನು ಕಂಡರೆ ಅವರಿಗೆ ತುಂಬ ಸಂತೋಷ. ಮಹಾತ್ಮಾಗಾಂಧಿಯವರೊಮ್ಮೆ ಕೊಡಗಿಗೆ ಬಂದಾಗ, ಶ್ರೀ ಮಂಜು

ನಾಥಯ್ಯನವರಲ್ಲಿ ಬಂದರಂತೆ. ಆಗ ಗೌರಮ್ಮನವರು ತಮ್ಮ ಮನೆಗೂ ಮಹಾತ್ಮರನ್ನು ಕರೆದರಂತೆ. ಸಮಯವಿಲ್ಲದ್ದರಿಂದ ಅವರು ಹೋಗಲು ಅಷ್ಟು ಆತುರಪಡಲಿಲ್ಲವಂತೆ. ಗೌರಮ್ಮನವರು 'ಫಾಸ್ಟ್' ಆರಂಭಿಸುವೆನೆಂದು ಹೇಳಿ ಕಳಿಸಿದರು; ಹೆದರಿ ಬಂದ ಮುದುಕ. ಗೌರಮ್ಮ ತಮ್ಮ ಮೈಮೇಲಿನ ಎಲ್ಲ ಆಭರಣ ಬಿಚ್ಚಿ ಕೊಟ್ಟುಬಿಟ್ಟರಂತೆ. ಮಹಾತ್ಮರು ಗೋಪಾಲಯ್ಯನವರನ್ನು ಕರೆದು 'ನಿಮ್ಮ ಆಕ್ಷೇಪಣೆ ಇಲ್ಲವಷ್ಟೇ ?' ಎಂದರಂತೆ. 'ಅವಳಿನ್ನು ಆಭರಣ ಬೇಡದಿದ್ದರಾಯಿತು !' ಎಂದು ನಕ್ಕು ನುಡಿದರಂತೆ ಗೋಪಾಲಯ್ಯ. ಆಗ "ಹರಿಜನ"ದಲ್ಲಿ ಮಹಾತ್ಮರು ಈ ವಿಷಯದಲ್ಲಿ ಒಂದು ಲೇಖನ ಬರೆದರಂತೆ. ನನಗಿದನ್ನು ಮಡಿಕೇರಿಯಲ್ಲಿ ಒಬ್ಬ ಸ್ನೇಹಿತರು ಹೇಳಿದರು. ನಾನು ಬಂದು 'ಈ ವಿಷಯ ನೀವು ನನಗೆ ತಿಳಿಸಲಿಲ್ಲವಲ್ಲ !' ಎಂದೆ. 'ಇಲ್ಲಿಯ ಬಹಳ ಜನರಿಗೆ ಈ ವಿಷಯ ಸೇರುವುದಿಲ್ಲವೆಂದು ನಾನೀ ವಿಷಯವನ್ನು ಎತ್ತುವುದಿಲ್ಲ' ಎಂದು ಹೇಳಿದರು. 'ಕೊಡಗು ಬ್ರಿಟಿಶ್ ಕನ್ನಡನಾಡಿನೊಡನೆ ಒಂದಾಗದೆ ಗತಿಯಿಲ್ಲ' ಎಂದು ಅವರು ಅಲ್ಲಿಯ ಏಕೀಕರಣ ಪಕ್ಷದ ಮುಖಂಡರಾಗಿ ಕೆಲಸ ಮಾಡುತ್ತಿದ್ದರು.

ಇವರ ತಂದೆಗೆ ಇವರ ಬರೆಹಗಳ ಮೇಲೆ ತುಂಬ ಪ್ರೀತಿ ಇತ್ತು. ಮೊನ್ನೆ ಮೊನ್ನೆ ಅವರು ತೀರಿದಾಗ ಗೌರಮ್ಮನವರು ವ್ಯಸನಪಟ್ಟು ಹೀಗೆ ಬರೆದರು :

"ನಿಮ್ಮ ಕಾಗದ, ಅದರೊಡನೆಯೇ ಇನ್ನೊಂದು ಟೆಲಿಗ್ರಾಮ್. ನಿಮ್ಮ ಕಾಗದ ಒಡೆಯುವ ಮೊದಲೇ ಅದನ್ನೊಡೆದು ಓದಿದೆ. ನನ್ನ ತಂದೆ,—ತಾಯಿಯಿಲ್ಲದ ನನ್ನನ್ನು, ತಾಯಿ ತಂದೆಗಳ ಭಾರವನ್ನು ಹೊತ್ತು ಸಾಕಿದ ನನ್ನ ತಂದೆ—ಇನ್ನಿಲ್ಲವೆಂದು ಓದಿದೆ. ಅವರನ್ನು ನೋಡದೆ ಎರಡು ತಿಂಗಳಾಗಿತ್ತು. ಏನೋ ಒಂದು ದಿನ ಸ್ವಲ್ಪ ಜ್ವರವಿತ್ತಂತೆ. ಅಷ್ಟರ ಸಲುವಾಗಿ ಕಾಗದವೇಕೆ—ಎಂದು ನನಗೆ ಬರೆದಿರಲಿಲ್ಲ. ಮರು ದಿನ ಸ್ನಾನ ಮಾಡಿ ಆಯಾಸವೆಂದು ಮಲಗಿದರಂತೆ. ಹತ್ತೇ ನಿಮಿಷಗಳೊಳಗಾಗಿ ಆಯಾಸ-ನರಳುವಿಕೆ ಇಲ್ಲದೆಡೆಗೆ ಹೋಗಿ ಬಿಟ್ಟರವರು. ಆ ದಿನದಿಂದ ಈಚೆಗಿನ ಕಾಲವೆಲ್ಲ ನನ್ನ ಜೀವನದ ಅತ್ಯಂತ ದುಃಖದ ದಿನಗಳಾಗಿವೆ. ನೀವು ಪ್ರಸಿದ್ಧಿಸುವ ನನ್ನ ಪುಸ್ತಕ ನೋಡಲಿಲ್ಲ ಅವರು."

ಅವರ ಸಂಗ್ರಹಕ್ಕೆ ಮೊದಲು 'ಚಿಗುರು' ಎಂದು ಹೆಸರಿಟ್ಟಿತ್ತು. ಮೊನ್ನೆ ಗೌರಮ್ಮನವರು ಅದನ್ನು 'ಕಂಬನಿ' ಎಂದು ಮಾರ್ಪಡಿಸಿ ತಾವೂ ಪುಸ್ತಕ ನೋಡದೆ, ಕನ್ನಡಿಗರೆಲ್ಲ ಕಂಬನಿಗರೆಯುವಂತೆ ಮಾಡಿ ನಮ್ಮನ್ನಗಲಿ ಹೋದರು.

ಇವರ ಕತೆಗಳಿಂದ ಚಿಗುರಿದ ಹೆಣ್ಣುಮಕ್ಕಳ ಸಾಹಿತ್ಯ, ಕನ್ನಡ ಸಾಹಿತ್ಯದಲ್ಲಿ ಮಂಗಲಪ್ರದವಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ, ಇವರ ಮರಣದಿಂದ ಕನ್ನಡ ನಾಡೇ ಮರುಗುವಂತಾಯಿತು. ಗೌರಮ್ಮನವರ ಆರು ವರ್ಷದ ಎಳೆಯ ಮಗು ವಸಂತ (ಬೇಬಿ) ಚಿಗುರುವ ತನ್ನ ಆಯುಷ್ಯದಲ್ಲಿ, ಇಂತಹ ಎಳೆಯತನದಲ್ಲಿ—ತನ್ನ ತಾಯಿಯಂತೆ—ಪರದೇಶಿತನವನ್ನು ಭೋಗಿಸಬೇಕಾಗಿ ಬಂತು. ಇವರ ಪತಿಗೆ ಒಮ್ಮೆಲೆ ಘಟಿಸಿದ ಸಹಿಸಲಾರದ ಈ ಒಂಟಿಗತನದ ದುಃಖದಲ್ಲಿ........!

ಇಷ್ಟೆಲ್ಲ ಆಟವಾಡಿದ ಗೌರಮ್ಮನವರು ಇನ್ನಿಲ್ಲ. 'ಓ' ಕೊಡದ ನಾಡಿಗೆ ನಡೆದುಬಿಟ್ಟರವರು. ಈ ಎಲ್ಲ ಸವಿನೆನಪುಗಳ ಹಿಂದೆ ಒಂದು ಕರಾಳ ಸತ್ಯವು ತಾಂಡವವಾಡಿ ಅವರ ಬಳಗವನ್ನೂ—ಕನ್ನಡ ನಾಡನ್ನೂ ಅಪಾರ ಶೋಕಕ್ಕೀಡುಮಾಡಿದೆ. ನುಗ್ಗಿ ಬರುವ ಇಂತಹ ನೆನಪುಗಳೊಡನೆ 'ಇನ್ನು ಅವರಿಲ್ಲವಲ್ಲಾ' ಎಂಬ ನೆನಪು ದುಃಖವನ್ನು ನೂರ್ಮಡಿಸುತ್ತದೆ. ಅವರಿಲ್ಲವೆಂಬ ದುಃಖ, ಈ ನೆನಪುಗಳಲ್ಲಿ ಒಂದು ನಿಮಿಷವಾದರೂ ಮರೆತರೆ ಅದೇ ರಸ ನಿಮಿಷ !

ಇಂಥ ಪವಿತ್ರ ಆತ್ಮಗಳೂ ಇಲ್ಲದಾಗುತ್ತಿರಬಹುದೇ ?

(೧೯೩೯)